ರಂಗಸಂಪನರು ಮಾಲಿಕೆ : ೧೬

# ಗರುಡ ಶ್ರೀಪಾದರಾಯರು

ಡಾ. ಶ್ಯಾಮಸುಂದರ ಬಿದರಕುಂದಿ

ಕರ್ನಾಟಕ ನಾಟಕ ಅಕಾಡೆಮಿ

ರವೀಂದ್ರ ಕಲಾಕ್ಷೇತ್ರ, ಜೆ. ಸಿ. ರಸ್ತೆ

ಬೆಂಗಳೂರು - ೫೬೦ ೦೦೨

GARUDA SHRIPADARAYARU : A Monograph in Kannada by
Dr. Shyamasundar Bidarakundi
K. C. Road, Gadag
Published by
B. T. Muni Rajaiah
Registrar, Karnataka Nataka Academy
Ravindra Kalakshetra, J. C. Road, Bangalore - 560 002

| | |
|---|---|
| Chief Editor | C. G. Krishnaswamy |
| Editors | Dr. Siddhaling Pattanshetti |
| | K. V. Nagaraja Murthy, |
| | T. Raghu, Hooli Shekhar |
| First Impression | March, 2001 |
| Pages | 64 |
| Cover Design | Krishna Raichur |

© Author

Printed by
Manohar Printing Press, Market, Dharwad - 580 001
Ph : 0836-790030
Price : Rs. 30/

| | | |
|---|---|---|
| ಗರುಡ ಶ್ರೀಪಾದರಾಯರು | : | ರಂಗಸಂಪನ್ನರ ಕಿರು ಜೀವನಚರಿತ್ರೆ |
| ಲೇಖಕರು | : | ಡಾ. ಶ್ಯಾಮಸುಂದ ಬಿದರಕುಂದಿ |
| ಪ್ರಕಾಶನ | : | ಬಿ. ಟಿ. ಮುನಿರಾಜಯ್ಯ |
| | | ರಿಜಿಸ್ಟ್ರಾರ್, ಕರ್ನಾಟಕ ನಾಟಕ ಅಕಾಡೆಮಿ |
| | | ರವೀಂದ್ರ ಕಲಾಕ್ಷೇತ್ರ, ಬೆಂಗಳೂರು – ೫೬೦ ೦೦೨ |
| ಪ್ರಧಾನ ಸಂಪಾದಕರು | : | ಸಿ. ಜಿ. ಕೃಷ್ಣಸ್ವಾಮಿ |
| ಸಂಪಾದಕರು | : | ಡಾ. ಸಿದ್ದಲಿಂಗ ಪಟ್ಟಣಶೆಟ್ಟಿ |
| | | ಕೆ. ವಿ. ನಾಗರಾಜಮೂರ್ತಿ, |
| | | ಟಿ. ರಘು, ಹೂಲಿ ಶೇಖರ್ |
| ಪ್ರಥಮ ಮುದ್ರಣ | : | ಮಾರ್ಚ್, ೨೦೦೧ |
| ಮುದ್ರಣ | : | ಮನೋಹರ ಪ್ರಿಂಟಿಂಗ್ ಪ್ರೆಸ್, ಮಾರ್ಕೆಟ್ |
| | | ಧಾರವಾಡ - ೫೮೦ ೦೦೧ |
| ಬೆಲೆ | : | ರೂ. ೩೦/- |

# ಮೊದಲ ಮಾತು

ಕರ್ನಾಟಕ ನಾಟಕ ಅಕಾಡೆಮಿಯು ವರ್ಷದುದ್ದಕ್ಕೂ ನಾಡಿನಾದ್ಯಂತ ಹಾಗೂ ನಾಡಿನ ಹೊರಗಡೆ ರಂಗಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತ ಕನ್ನಡದ ನಾಟಕ ಕ್ಷೇತ್ರವನ್ನು ನಿರಂತರ ವಿಸ್ತರಿಸುತ್ತ ಬಂದಿದೆ. ಇಂಥ ಕಾರ್ಯಗಳ ಜೊತೆಗೆ ನಾಟಕ ಕೃತಿ, ರಂಗ ವಿಮರ್ಶೆ, ರಂಗಕರ್ಮಿಗಳ ಪರಿಚಯ ಇತ್ಯಾದಿ ಕುರಿತ ಕೃತಿಗಳನ್ನೂ ಆಗಾಗ ಪ್ರಕಟಿಸಿದೆ.

ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗಸಂಪನ್ನರು ಆಗಿಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಎಲ್ಲ ಕ್ಷೇತ್ರಗಳಲ್ಲಿ ರಂಗಭೂಮಿಯ ಶ್ರೇಯಸ್ಸಿಗಾಗಿ ಶ್ರಮಿಸಿದ ಅಸಂಖ್ಯ ವ್ಯಕ್ತಿಗಳ ಬದುಕಿನ ಪರಿಚಯವು ಅವರು ಗತಿಸಿದ ನಂತರ ನಿಧಾನವಾಗಿ ಇತಿಹಾಸದ ಹಿನ್ನೆಲೆಗೆ ಸಿಲುಕುತ್ತ ಹೋಗುತ್ತದೆ. ಅಂಥವರೆಲ್ಲರ ಬದುಕಿನ ಚರಿತ್ರೆಗಳು ಸುಸಂಘಟಿತವಾಗಿ ನಿರೂಪಿತಗೊಳ್ಳಬೇಕು, ಬರೆಯಲ್ಪಡಬೇಕು. ಹಾಗೆಯೇ ಈಗ ನಮ್ಮೊಡನಿರುವ ಮಹತ್ವದ ಸಾಧನೆಗೈದಿರುವ ನಟರು, ನಾಟಕಕಾರರು, ನಿರ್ದೇಶಕರು, ಹಿನ್ನೆಲೆ ರಂಗಕರ್ಮಿಗಳು ಮುಂತಾದ ರಂಗಸಂಪನ್ನ ವ್ಯಕ್ತಿಗಳನ್ನು ಕುರಿತು ಆದಷ್ಟು ಬೇಗನೆ ಕೃತಿಗಳನ್ನು ಪ್ರಕಟಿಸುವ ಮೂಲಕ ಅವರ ನೆಮ್ಮದಿಯ, ಕೀರ್ತಿಯ ಬದುಕಿಗೆ ಇನ್ನಷ್ಟು ಹೆಚ್ಚಿನ ಸುಖವನ್ನು ಕೊಡಲೆತ್ನಿಸಬೇಕೆಂದು ನಿರ್ಧರಿಸಿ, ನಾಟಕ ಅಕಾಡೆಮಿ ಈ ನಿಟ್ಟಿನಲ್ಲಿ ಹೆಜ್ಜೆಯಿಟ್ಟಿದೆ.

ಈ ನಿಟ್ಟಿನಲ್ಲಿ ಈಗಾಗಲೇ ೧. ಎಚ್. ಎನ್. ಹೂಗಾರ, ೨. ಬಿ. ವಿ. ಕಾರಂತ, ೩. ಮಾಸ್ಟರ್ ಹಿರಣ್ಣಯ್ಯ, ೪. ಆರ್. ನಾಗರತ್ನಮ್ಮ, ೫. ಎಚ್. ಕೆ. ಯೋಗಾನರಸಿಂಹ, ೬. ಬಿ. ಎನ್. ನಾಣಿ, ೭. ಚಿಂದೋಡಿ ಲೀಲಾ, ೮. ಆರ್. ನಾಗೇಶ್, ೯. ಎಂ. ಎಸ್. ಸತ್ಯು, ೧೦. ಪಿ. ಬಿ. ಧುತ್ತರಗಿ, ೧. ಹುನಗುಂದ ಬಾಬಣ್ಣ, ೧೨. ಶ್ರೀನಿವಾಸ ತಾವರಗಿರಿ, ೧೩. ಬಿ. ಆರ್. ಅರಿಷಿಣಗೋಡಿ, ೧೪. ಸುಭದ್ರಮ್ಮ ಮನ್ಸೂರು, ೧೫, ಡಿ. ದುರ್ಗಾದಾಸ, ೧೬. ರಾಜಾನಂದ, ೧೭. ಪ್ರಸನ್ನ, ೧೮. ಕೆ. ಎನ್. ಟೇಲರ್, ೧೯. ಎಂ. ವಿ. ವಾಸುದೇವರಾವ್, ೨. ಗಜಾನನ ಮಹಾಲೆ, ೨೧. ಎಚ್. ಟಿ. ಅರಸು, ೨೨. ಕೆ. ಅಮಿನ ಪೇಂಟರ್ , ೨೩. ಹೆಚ್. ಜಿ. ಸೋಮಶೇಖರ ರಾವ್, ೨೪. ಜಿ. ಎನ್. ಅಂಜಲಿದೇವಿ, ೨೫. ಎನ್. ಬಸವರಾಜ ಗುಡಗೇರಿ ಅವರನ್ನು ಕುರಿತು ಪುಸ್ತಿಕೆಗಳು ಪ್ರಕಟಗೊಂಡಿವೆ.

ನಾಟಕ ಅಕಾಡೆಮಿಯ ಸದಸ್ಯರಾದ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಕೆ. ವಿ. ನಾಗರಾಜಮೂರ್ತಿ ಟಿ. ರಘು ಹಾಗೂ ಹೂಲಿ ಶೇಖರ್ ಅವರು ಸಂಪಾದಕ ಸಮಿತಿಯು ಈ ಪುಸ್ತಿಕೆಗಳನ್ನು ಚೆನ್ನಾಗಿ ಸಂಪಾದಿಸಿ ಹೊರತರುವ ಗುರುತರ ಹೊಣೆಯನ್ನು ಯಶಸ್ವಿಯಾಗಿ ನಿರ್ವಹಿಸಿದೆ. ಅವರಿಗೆ ನಾಟಕ ಅಕಾಡೆಮಿಯ ಹಾಗೂ ವೈಯಕ್ತಿಕವಾಗಿ ನನ್ನ ಪರವಾಗಿ ಗೌರವ ಕೃತಜ್ಞತೆ ಸಲ್ಲಿಸುತ್ತೇನೆ.

ಈ ಪುಸ್ತಿಕೆಗಳ ಪ್ರಕಟಣೆಗೆ ಒಮ್ಮತದಿಂದ ನಿರ್ಧರಿಸಿದ ಹಾಗೂ ಪ್ರಕಟಣೆಗೆ ಪೂರ್ವದಲ್ಲಿಯೇ ಕೆಲವು ಪುಸ್ತಕಗಳನ್ನು ಮಾರಾಟ ಮಾಡಲು ನೆರವಾದ ನಾಟಕ ಅಕಾಡೆಮಿಯ ಎಲ್ಲ ಸದಸ್ಯರಿಗೆ, ಕೃತಿ ರಚಿಸಿಕೊಟ್ಟ ಲೇಖಕರಿಗೆ, ಮುಖಪುಟ ಕಲಾವಿದರಿಗೆ ಹಾಗೂ ಮುದ್ರಕರಿಗೆ ಹಾರ್ದಿಕ ಕೃತಜ್ಞತೆಗಳು.

ಸಿ. ಜಿ. ಕೃಷ್ಣಸ್ವಾಮಿ

ಅಧ್ಯಕ್ಷರು

ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು

## ಸಂಪಾದಕರ ಮಾತು

ನಾಡಿನ ಸಾಂಸ್ಕೃತಿಕ ಇತಿಹಾಸದಲ್ಲಿ ರಂಗಭೂಮಿಯು ವ್ಯಕ್ತಿಗಳ ಬದುಕಿನ ಎಲ್ಲ ಆಯಾಮಗಳನ್ನು ಸ್ಪರ್ಶಿಸಿ ಅವರ ಭಾವೋದ್ವೇಗ, ಭಾವೋನ್ಮಿಗಳಿಗೆ ಅಭಿವ್ಯಕ್ತಿಯನ್ನು ನೀಡುವಂತೆ ಕಲಾ ಪ್ರಪಂಚದ ಉಳಿದ ಮಾಧ್ಯಮಗಳು ಮಾಡಲಾರವು. ಕರ್ನಾಟಕದ ಮೂಲೆಮೂಲೆಯಲ್ಲಿ ಜಾನಪದ, ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿ ಈ ದೃಷ್ಟಿಯಿಂದ ಹಲವಾರು ವರ್ಷಗಳಿಂದ ತನ್ನ ಜೀವಂತಿಕೆಯನ್ನು ಉಳಿಸಿಕೊಂಡು ಬಂದಿದೆ. ಇದರ ಪ್ರಯೋಗದಿಂದ ಪ್ರಯೋಗಕ್ಕೆ ಬದಲಾಗುತ್ತ ಬೆಳೆಯುತ್ತ, ಹೊಸಹೊಸದಾಗುತ್ತ ಸಾಗುವ ಸಜೀವ ರಂಗಕಲೆಯನ್ನು ದಾಖಲೆಯ ಕಟ್ಟುಪಾಡಿಗೆ ಸಿಲುಕಿಸುವುದು ಬಲು ಕಷ್ಟದ ಕೆಲಸ.

ಮೊದಲಿನಿಂದಲೂ ಇತಿಹಾಸವನ್ನು ರಕ್ಷಿಸುವ ನಿಟ್ಟಿನಲ್ಲಿ ನಮ್ಮವರು ಯೋಚಿಸಿದ್ದೇ ಕಡಿಮೆ. ಹೀಗಾಗಿ ಅಸಂಖ್ಯ ರಂಗ ಕಲಾವಿದರ ಬದುಕು ಇತಿಹಾಸದ ಪುಟಗಳಲ್ಲಿ ಸೇರಿ ಕಾಲ ಕಳೆದಂತೆ ಮಸಕಾಗುತ್ತ ಹೋದದ್ದು ಸಹಜ. ಈಗಲಾದರೂ ನಾವು ಲಭ್ಯವಿರುವ, ಲಭ್ಯವಾಗುವ ಎಲ್ಲ ವಿವರಗಳನ್ನು ಸಂಗ್ರಹಿಸಿ, ಈಗ ನಮ್ಮೊಡನಿರುವ ಕಲಾವಿದರ ಬದುಕಿನ ವರ್ಣಮಯ ನೆನಪುಗಳನ್ನು ಇತಿಹಾಸದ ಅರ್ಥಪೂರ್ಣ ಪುಟಗಳನ್ನಾಗಿ ಪರಿವರ್ತಿಸಲು ಯತ್ನಿಸುವುದು ಅಗತ್ಯವಾಗಿ ಆಗಬೇಕಾದ ಕಾರ್ಯ.

ಕರ್ನಾಟಕ ನಾಟಕ ಅಕಾಡೆಮಿಯ ಉತ್ಸಾಹಿ ಅಧ್ಯಕ್ಷರಾದ ಸಿ. ಜಿ. ಕೃಷ್ಣಸ್ವಾಮಿಯವರ ಒತ್ತಾಸೆ ಹಾಗೂ ಎಲ್ಲ ಸದಸ್ಯರ ಸಕ್ರಿಯ ಸಹಕಾರದ ಮೇರೆಗೆ ಈ ಸಲದ ಅಕಾಡೆಮಿ ಈ ಕಾರ್ಯದಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ. ನಮ್ಮೊಡನಿರುವ ರಂಗಕರ್ಮಿಗಳ ಬಗ್ಗೆ ರಂಗಸಂಪನ್ನರು ಎಂಬ ಮಾಲಿಕೆಯಲ್ಲಿ ಕಿರು ಜೀವನ ಚರಿತ್ರೆಯ ಕೆಲವು ಪುಸ್ತಿಕೆಗಳನ್ನು ಈಗಾಗಲೇ ಪ್ರಕಟಿಸಿದೆ.

ನಾಟಕ ಮೂಲತಃ ಪ್ರದರ್ಶಕ ಕಲೆಯಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಅದನ್ನು ಸಾಹಿತ್ಯ, ಬರವಣಿಗೆ, ವಸ್ತುಸಂಗ್ರಹಣೆ, ವಿಡಿಯೋ ಚಿತ್ರೀಕರಣ, ಧ್ವನಿಮುದ್ರಣ, ನೆನಪು ಸಂಗ್ರಹ ಮುಂತಾದ ರೀತಿಯಲ್ಲಿ

ದಾಖಲಿಸುವ ಪ್ರಯತ್ನ ಆಗಬೇಕಾಗಿದೆ. ನಮ್ಮ ರಂಗಭೂಮಿಯ ನಟರು, ನಾಟಕಕಾರರು, ನಿರ್ದೇಶಕರು, ರಂಗಸಂಗೀತಗಾರರು. ಹಿನ್ನೆಲೆ ರಂಗಕರ್ಮಿಗಳು ಮುಂತಾದವರು ಮಾಡಿದ ಐತಿಹಾಸಿಕ ಕೆಲಸಗಳು ಜೀವಂತವಾಗಿ ಆಸಕ್ತ ಓದುಗರಿಗೆ, ಚರಿತ್ರೆಕಾರರಿಗೆ ಲಭಿಸುವಂತಾಗಬೇಕು. ಆಗ ಕತ್ತಲೆಗೆ ಸಂದ ನಾಟಕ ಸಾಹಿತ್ಯ ಹಾಗೂ ಪ್ರಯೋಗಗಳ ಎಷ್ಟೋ ಪುಟಗಳು ಮತ್ತೆ ಬೆಳಕಿಗೆ ಬರುವುದರಲ್ಲಿ ಸಂಶಯವಿಲ್ಲ. ಈಗ ಪ್ರಕಟವಾಗುತ್ತಿರುವ ಈ ಕೃತಿಗಳು ಆಯಾ ರಂಗಸಂಪನ್ನ ಕಲಾವಿದರ ಬಗ್ಗೆ ಕೇವಲ ದಿಕ್ಸೂಚಿಯಂತಿವೆ. ಅವರನ್ನು ಕುರಿತು ಇನ್ನೂ ಎಷ್ಟೋ ವಿಷಯಗಳು, ವಿವರಣೆಗಳು ಹೊರಬರಬೇಕು ಪ್ರಕಟಗೊಳ್ಳಬೇಕು. ಅಂಥ ಕಾರ್ಯಕ್ಕೆ ಈಗಿನ ಈ ಪ್ರಕಟಣೆಗಳು ನಾಂದಿ ಹಾಗೂ ಪ್ರೇರಕ ರಚನೆಗಳು ಎಂಬುದನ್ನು ಮರೆಯಲಾಗದು. ಇಲ್ಲಿ ನಮೂದಿಸಲಾದ ವಿವರಗಳಿಗೆ ಹಾಗೂ ವ್ಯಕ್ತವಾದ ಅಭಿಪ್ರಾಯಗಳಿಗೆ ಆಯಾ ಲೇಖಕರೇ ಹೊಣೆಗಾರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇದು ಗರುಡ ಶ್ರೀಪಾದರಾಯರನ್ನು ಕುರಿತು ಶ್ಯಾಮಸುಂದರ ಬಿದರಕುಂದಿ ಅವರು ಬರೆದ ಪುಸ್ತಕ. ಕನ್ನಡ ವೃತ್ತಿ ರಂಗಭೂಮಿಯ ಶ್ರೀಮಂತ ಇತಿಹಾಸದ ಒಂದು ಪ್ರಮುಖ ಭಾಗವಾಗಿರುವ ಸದಾಶಿವರಾಯರ ಪುತ್ರರಾದ ಶ್ರೀಪಾದರಾಯರು ಸಹ ಆ ಎಳೆಯ ಸಶಕ್ತ ಮುಂದುವರಿಕೆಯಾಗಿದ್ದಾರೆ. ಎಂಬತ್ತೆರಡರ ಈ ವಯಸ್ಸಿನಲ್ಲಿಯೂ ಅಭಿನಯವನ್ನು ದೇವರಂತೆ ಪೂಜಿಸುತ್ತ ವೃತ್ತಿ ಹವ್ಯಾಸಿ ಎಂದು ಯಾವುದೇ ಭೇದ ಎಣಿಸದೇ ರಂಗಕರ್ಮವನ್ನು ಉಸಿರಾಗಿಸಿಕೊಂಡು ಬಾಳಿದ್ದಾರೆ; ಎಲ್ಲ ಕಲಾವಿದರಿಗೆ ಆದರ್ಶ ಮಾರ್ಗದರ್ಶಕರಾಗಿದ್ದಾರೆ. ಕಲಾಸಕ್ತಿ, ಶಿಸ್ತು, ನಿಷ್ಠೆಗಳ ಯೌವನವನ್ನು ಈಗಲೂ ಪಾಲಿಸಿಕೊಂಡು ಬಂದಿರುವ ಶ್ರೀಪಾದರಾಯರು ನಟರಷ್ಟೇ ಅಲ್ಲ, ನಾಟಕಕಾರ, ನಿರ್ದೇಶಕ, ಸಂಘಟಕ ಹಾಗೂ ರಂಗ ಶಿಕ್ಷಕರೂ ಹೌದು. ಮಕ್ಕಳಿಗೆ ಹಲವಾರು ವರ್ಷ ರಂಗತರಬೇತಿ ನೀಡುವ ಮೂಲಕ ಗದಗ ಭಾಗದಲ್ಲಿ ರಂಗಚೇತನ ಬೆಳೆಯುವಂತೆ ಶ್ರಮಿಸಿದ್ದಾರೆ. ಕಲಾಸಕ್ತರಿಗೆ ನಿಯಮಿತ ರಂಗಶಿಕ್ಷಣ ನೀಡಿ ಶಿಕ್ಷಕರಲ್ಲಿಯೂ ಹಿರಿಯರಲ್ಲಿಯೂ ನಾಟಕಪ್ರೀತಿ ಹೆಚ್ಚುವಂತೆ ಮಾಡಿದ್ದಾರೆ.

ಈ ಮಾಲಿಕೆಯ ಪುಸ್ತಕಗಳನ್ನು ಸಕಾಲದಲ್ಲಿ ಬರೆದುಕೊಟ್ಟ ಎಲ್ಲ ಲೇಖಕರಿಗೆ ಹಾಗೂ ನಾಟಕ ಅಕಾಡೆಮಿಯ ಮೂಲಕ ಅವನ್ನು ಪ್ರಕಟಿಸುವಲ್ಲಿ ಎಲ್ಲ ರೀತಿಯಿಂದ ನೆರವಾದ ಆತ್ಮೀಯರಾದ ಸಿ.ಜಿ.ಕೆ.ಕೆ.ವಿ. ನಾಗರಾಜಮೂರ್ತಿ, ಹೂಲಿ ಶೇಖರ್, ಟಿ. ರಘು ಮತ್ತು ಬಿ. ಟಿ. ಮುನಿರಾಜಯ್ಯ ಹಾಗೂ ಮನೋಹರ ಮುದ್ರಣಾಲಯದ ರವಿ- ಚಂದ್ರು, ರಕ್ಷಾಪುಟದ ವಿನ್ಯಾಸ ಮಾಡಿಕೊಟ್ಟ ಕೃಷ್ಣ ರಾಯಚೂರು ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ಬೆಂಗಳೂರು — ಸಿದ್ಧಲಿಂಗ ಪಟ್ಟಣಶೆಟ್ಟಿ

೧೦-೨-೨೦೦೧ — ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


ತೆರೆ - ಒಂದು

೧. ಗರುಡ ನಾಟ್ಯ ಪರಂಪರೆ ೯

೨. ಸದಾಶಿವರಾಯರ ನಾಟ್ಯ ಪ್ರವೇಶ ೧೦

೩. ಯೋಗ ೧೨

೪. ನಾಟ್ಯಸಾಧನೆ ೧೩

೫. ಚಲನಚಿತ್ರ ಯೋಜನೆ ೧೮

೬. ನಾಟಕಯಾತ್ರೆ ೧೯

ತೆರೆ – ಎರಡು

೭. ಹುಟ್ಟು, ಬಾಲ್ಯ ೨೦

೮. ಹುಡುಗಾಟಕ್ಕೆ ನಾಟಕ ೨೧

೯. ಪಾತ್ರ ಪ್ರವೇಶ ೨೨

೧೦. ಗಾಂಧೀ ದರ್ಶನ ೨೩

೧೧. ಸ್ತ್ರೀಪಾತ್ರಗಳಲ್ಲಿ ೨೩

೧೨. ಪ್ರಬುದ್ಧತೆಯ ಹೆಜ್ಜೆ ೨೪

೧೩. ಕಾರಂತರಿಂದ ರಂಗಪರಿಕರ ಶಿಕ್ಷಣ ೨೫

೧೪. ಗರುಡರ ರಂಗಶಾಲೆ ೨೬

೧೫. ಸಂಗೀತ ಶಾಲೆ ೨೮

೧೬. ತಂದೆ-ಮಗ ೨೯

ತೆರೆ - ಮೂರು

೧೭. ತೆರೆಯೊಂದು ಮುಚ್ಚಿದಾಗ ೩೧

೧೮. ರಂಗಸಂಚಾರ ೩೩

೧೯. ಹಾಲಿನ ಸರಬರಾಜು ೩೪

೨೦. ಅಭಿನಯ ಸಂಚಾರಿ ೩೫

೨೧. ಬಾಳಪ್ಪನವರೊಂದಿಗೆ ೩೫

೨೨. ಪರದಾಟ-ಹೊಂದಾಣಿಕೆ ೩೭

೨೩. ನಿವೃತ್ತಿ - ಪ್ರವೃತ್ತಿ ೩೮

ತೆರೆ - ನಾಲ್ಕು

೨೪. ಸಾಹಿತ್ಯ ರಚನೆ ೪೧

೧೫. ಚೋಟಾ ಮೇಳ ೪೧
೧೬. ಹರಿಮಾಯಾ (ಕೃಷ್ಣ ಗಾರುಡಿ) ೪೨
೧೭. ಕುಂದರನಾಡ ಕಲಿ ೪೨
೧೮. ಮೈಲಾರ ಮಾರ್ತಾಂಡ ಮಹಿಮೆ ೪೩
೧೯. ಲೇಖನಗಳು ೪೩
ತೆರೆ - ಐದು
೧೭. ಸ್ವರಚಿತ ಕವನಗಳು ೪೯
ಅನುಬಂಧಗಳು

# ತೆರೆ - ಒಂದು

## ೧. ಗರುಡ ನಾಟ್ಯ ಪರಂಪರೆ

ರಂಗನಟ. ಗರುಡ ಶ್ರೀಪಾದರಾಯರ ಜೀವನ-ಸಾಧನೆಯ ಕುರಿತು ಬರೆಯುವುದೆಂದರೆ, ಅವರ ತಂದೆ, ' 'ನಾಟ್ಯಾಲಂಕಾರ', 'ಅಭಿನಯ ಕೇಸರಿ' ಗರುಡ ಸದಾಶಿವರಾಯರ ನಾಟ್ಯ ಪರಂಪರೆಯ ಜೀವಂತ ಕುರುಹೊಂದನ್ನು ಇಂದಿಗೆ ಪರಿಚಯಿಸಿದಂತೆ.

೨೦ ನೆಯ ಶತಮಾನದ ಕರ್ನಾಟಕ ರಂಗಭೂಮಿಯನ್ನು ತಮ್ಮ ವಿಶಿಷ್ಟ ಪ್ರತಿಭೆ ಮತ್ತು ಅಪ್ರತಿಮ ಕಲಾತ್ಮಕ ಪರಿಶ್ರಮಗಳಿಂದ ಬೆಳಗಿದ ಹಲವು ನಾಟ್ಯದೀಪಗಳಲ್ಲಿ ಗರುಡ ಸದಾಶಿವರಾಯರದು (೧೮೮೧-೧೯೫೩) ಒಂದು ಉಜ್ವಲ ಬೆಳಕು. ಇಪ್ಪತ್ತಾರು ವರ್ಷಗಳ ಕಾಲ (೧೯೧೬-೧೯೪೨) ಗರುಡರು 'ಶ್ರೀ ದತ್ತಾತ್ರೇಯ ನಾಟಕ ಮಂಡಳಿ ' ಯನ್ನು ಕಟ್ಟಿಕೊಂಡು ಪೌರಾಣಿಕ, ಚಾರಿತ್ರಿಕ, ಸಾಮಾಜಿಕ ನಾಟಕಗಳನ್ನು ಬರೆದು, ಆಡಿ, ಆಡಿಸಿ ಕರ್ನಾಟಕದಾದ್ಯಂತ (ಆಗ ಮುಂಬೈ ಉತ್ತರ ಕರ್ನಾಟಕದ ರಾಜಧಾನಿ ಆಗಿತ್ತು) 'ಗರುಡ ನಾಟ್ಯಮುದ್ರೆ' ಯನ್ನು ಒತ್ತಿದವರು. ಕಥಾವಸ್ತು, ಅಭಿನಯ, ಗಾಯನ, ರಂಗಸಜ್ಜಿಕೆಗಳಲ್ಲಿ ಗರುಡರ ನಾಟಕಗಳಿಗೆ ತನ್ನದೇ ಆದ ವಿಶೇಷತೆ ಇತ್ತು. ರಂಗಭೂಮಿಯ ಮೇಲಿನ ಕಲಾಭಿವ್ಯಕ್ತಿಯೆಂದರೆ, ನಾಡಿನ ಹಿಂದಿನ ಮತ್ತು ಇಂದಿನ ಜನತೆಯ ಸಂಸ್ಕೃತಿ, ಚರಿತ್ರೆಗಳ ರೂಪಕ ಪ್ರಕಾಶನ ಎಂದು ತಿಳಿದವರು ಗರುಡರು. ಭರತಮುನಿಯ ಸಂಸ್ಕೃತ 'ನಾಟ್ಯಶಾಸ್ತ್ರ' ವನ್ನು ಅಭ್ಯಸಿಸಿದ್ದ ಸದಾಶಿವರಾಯರು ತಮ್ಮ ಕಂಪನಿಗಾಗಿ ಥಾರಸಿ ಥಿಯೇಟರಿನ ವ್ಯಾಪಾರೀ ರಂಗತಂತ್ರಗಳನ್ನು ಅತಿ ಕಡಿಮೆ ಪ್ರಮಾಣದಲ್ಲಿ ಅನುಕರಿಸಿದ್ದರು. ರಂಗಭೂಮಿಯನ್ನು ತಮ್ಮ ಜೀವಿತದ ವ್ಯವಸಾಯ ಕ್ಷೇತ್ರವನ್ನಾಗಿ ಮಾಡಿಕೊಂಡಿದ್ದ ಅವರು, ಅದರ ಮೂಲಕ ಪ್ರೇಕ್ಷಕರಿಗೆ

ಕೊಡಬೇಕೆಂದುಕೊಂಡದ್ದು ನಾಟ್ಯಕಲೆಯ ಸಂಸ್ಕೃತಿಯನ್ನು, ಭಾಷೆ, ಭಾವಾಭಿನಯಗಳ ಬಂಡವಾಳದೊಂದಿಗೆ ಗರುಡರು ಮಾಡಿದ ನಾಟ್ಯ ವ್ಯಾಪಾರವು ಆ ಕಾಲದ ಪ್ರೇಕ್ಷಕ ವರ್ಗಕ್ಕೆ ಮನರಂಜನೆಯ ಮೂಲಕ ವರ್ಗಾಯಿಸಿದ್ದು ನೀತಿ, ಚಾರಿತ್ರ್ಯದ ಮೌಲ್ಯಗಳನ್ನು.

ನಾಟಕ ವೃತ್ತಿಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಿಕೊಂಡದ್ದು ಸದಾಶಿವರಾಯರ ಒಂದು ಜೀವನ ದೃಷ್ಟಿ. ನಾಟಕಕಾರ ಮತ್ತು ನಿರ್ದೇಶಕನೇ ಇಲ್ಲಿ ಮಾಸ್ತರ (Master = ಮಾಲಿಕ). ಗರುಡರು ನಿರ್ವಹಿಸಿದ ಕಂಪನಿಯಂತೂ ಒಂದು 'ಶಾಲೆ'ಯಂತೆಯೇ ಇತ್ತು. ಅದು 'ರಂಗಸಾಲೆ' ಯಾಗಿ ಕೆಲವು ನಟರನ್ನು ಹಾಗೂ ರಂಗಕರ್ಮಿಗಳನ್ನು ತರಬೇತಿಗೊಳಿಸಿತಲ್ಲದೆ, ಪ್ರದರ್ಶನಗಳ ಮೂಲಕ ಪ್ರೇಕ್ಷಕರಿಗೆ ಸದಭಿರುಚಿಯ ಅವಕಾಶಗಳನ್ನು ನಿರಂತರವಾಗಿ ಕೊಟ್ಟಿತು. ಪ್ರೇಕ್ಷಕನ ಜೀವನ ದೃಷ್ಟಿಯನ್ನು ಒಳಿತಿನ ಕಡೆಗೆ; ಸ್ವಾತಂತ್ರ್ಯದ ಕಡೆಗೆ, ದೇಶಾಭಿಮಾನ, ಜನಾಂಗಾಸಕ್ತಿಗಳ ಕಡೆಗೆ ತಿರುಗಿಸಬೇಕೆಂಬುದು ಸದಾಶಿವರಾಯರ ಸದಾಶಯವಾಗಿತ್ತು. ತನ್ನೊಂದಿಗೆ ದುಡಿಯುವ ನಟರ ಹಾಗೂ ರಂಗಕರ್ಮಿಗಳ ಕೆಲಸವನ್ನು 'ನಾಟಕ ಸಮುದಾಯ'ವೊಂದರ ಸಾಮೂಹಿಕ ಪ್ರತಿಭೆಯ ಪ್ರದರ್ಶನವೆಂದು ಕಲ್ಪಿಸಿದ್ದ ಅವರು, ಕಂಪನಿಯ ಹಿರಿ-ಕಿರಿಯ ಕಲಾವಿದರನ್ನೆಲ್ಲ ಒಂದೇ ಭಾವದಿಂದ ಕಾಣುತ್ತಿದ್ದರು. ಕಲಾವಿದರನ್ನು ಹೊಸ ಹೊಸ ಪ್ರಯೋಗಗಳತ್ತ ಕರೆದೊಯ್ದು ನಾಟ್ಯಾಭಿವ್ಯಕ್ತಿಯ ಸಾಧ್ಯತೆಗಳನ್ನವರು ವಿಸ್ತರಿಸುತ್ತಿದ್ದರು. ಇವೆಲ್ಲವೂ ಗರುಡರ ನಾಟ್ಯ ಸಂಪ್ರದಾಯವೊಂದು ಕರ್ನಾಟಕದಲ್ಲಿ ಪ್ರಚಲಿತಗೊಳ್ಳಲು ಕಾರಣವಾಗಿದ್ದ ಸಂಗತಿಗಳು.

ಗರುಡರ ಹೆಣ್ಣು-ಗಂಡು ಮಕ್ಕಳೆಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ತಂದೆಯೊಂದಿಗೆ, ತಂದೆಗಾಗಿ ರಂಗಭೂಮಿಯಲ್ಲಿ ಬಣ್ಣ ಹಚ್ಚಿಕೊಂಡು 'ಪಾರ್ಟು' ಮಾಡಿದವರೇ. ಅವರಲ್ಲಿ ಶ್ರೀಪಾದರಾಯರೊಬ್ಬರು ಮಾತ್ರ ನಟನೆಯನ್ನು ವೃತ್ತಿ ಹಾಗೂ ಪ್ರವೃತ್ತಿಯನ್ನಾಗಿ ನೆಚ್ಚಿ ಈವರೆಗೂ ರಂಗದಲ್ಲಿ ಉಳಿದು ಬೆಳೆದುಬಂದಿದ್ದಾರೆ. ಈಗ ಎಂಬತ್ತೆರಡರ ಹರಯದಲ್ಲಿರುವ ಶ್ರೀಪಾದರಾಯರಿಗೆ 'ನಾಟಕ' ಬಿಟ್ಟರೆ ಬೇರೆ ಯಾವ ಸಂಗತಿಯಲ್ಲಿ ಆಸಕ್ತಿಯಿಲ್ಲ; ಪರಿಶ್ರಮವಿಲ್ಲ. ೪-೫ ವರ್ಷದ ಹುಡುಗನಾಗಿದ್ದಾಗಲೇ 'ಕಂಪನಿ'ಯ ಕೂಸಾಗಿ ತಂಡದ ಎಲ್ಲರ ಪ್ರೀತಿ-ಸಹವಾಸದೊಂದಿಗೆ ರಂಗು ಹಚ್ಚಿಕೊಂಡು ರಂಗಕ್ಕೇರಿದ ಶ್ರೀಪಾದರಾಯ, ಎಪ್ಪತ್ತೈದು ವರ್ಷಗಳಿಂದ ಅದೇ ಗುಂಗಿನಲ್ಲಿ ಇಂದಿಗೂ ನಮ್ಮೊಂದಿಗಿರುವವರು. ಸದಾಶಿವರಾಯರ ರಂಗವ್ಯಕ್ತಿತ್ವವನ್ನು ಅಳವಡಿಸಿಕೊಂಡು ಗರುಡನಾಟ್ಯ ಸಂಪ್ರದಾಯವನ್ನು ಇಂದಿನ ನಟ-ನಟಿಯರಿಗೆ ಹೇಳಿಕೊಡುವ ಉತ್ಸಾಹ, ಆವೇಶಗಳನ್ನು ಹಾಗೂ ಕಾರ್ಯಕ್ರಮಗಳನ್ನು ಶ್ರೀಪಾದರಾಯರು ತೋರಿಸುವಾಗ ಒಳ್ಳೇ ಪ್ರಾಯಸ್ಥನಾಗಿಯೇ ಕಾಣುವರು. ಹೀಗಾಗಿ ಇವರ ನಾಟ್ಯಜೀವನದ ಸಫಲತೆಯ ವಿವರಗಳನ್ನು ದಾಖಲಿಸುವಾಗ ಅದಕ್ಕೆ ಅತ್ಯಂತ ಮೂಲವಾಗಿರುವ ಸದಾಶಿವರಾಯರ ರಂಗಸಿದ್ಧಿಗಳನ್ನು ನೆನಪಿಸಿಕೊಳ್ಳಬೇಕಾದುದು ಅನಿವಾರ್ಯ ಮತ್ತು ಸಹಜ.

## ೧. ಸದಾಶಿವರಾಯರ ನಾಟ್ಯ ಪ್ರವೇಶ

ಸದಾಶಿವರಾಯರು ಹುಟ್ಟಿದ್ದು ೧೮೮೨ರ ಆಗಸ್ಟ್ ೧೮ ರಂದು. ಕವಲೂರಿನ ವೈದ್ಯ ಮನೆತನದ ಗುರುನಾಥ ಶಾಸ್ತ್ರಿಗಳು ಇವರ ತಂದೆ. ಶಾಸ್ತ್ರಿಗಳು ಸಂಸ್ಕೃತ ಪಂಡಿತರಾಗಿದ್ದರು. ಸಂಗೀತ ಪ್ರೇಮಿಯಾಗಿದ್ದ ಗುರುನಾಥರು ಮಕ್ಕಳಿಗೆ ತಂಬೂರಿ ಶ್ರುತಿ ಹಿಡಿದು ದೇವರ ನಾಮ ಹೇಳಿಕೊಡುತ್ತಿದ್ದರು. ಬಾಲ್ಯದಲ್ಲಿ ವೇದ ಮಂತ್ರಗಳ ಪಠಣ, ಸಂಸ್ಕೃತ ಶ್ಲೋಕಗಳ ಪಾಠ, ಸದಾಶಿವರಾಯರ ನಾಲಿಗೆಗೆ ಶಿಕ್ಷಣ-ಸಂಸ್ಕಾರ ಕೊಟ್ಟವು.

ಸದಾಶಿವರಾಯರಿಗೆ ಅಭಿನಯದ ಅಭಿಲಾಷೆ ಇದ್ದಿತು. ಆದರೆ ನಾಟಕಗಳಿಗೆ ಹೋಗುವುದಕ್ಕೆ ಮನೆಯಲ್ಲಿ ನಿಷೇಧವಿದ್ದುದರಿಂದ ತನ್ನ ಆಸೆಯನ್ನವರು ಅದುಮಿಕೊಂಡಿದ್ದರು. ಹುಟ್ಟಿದ ಕವಲೂರನ್ನು ತೊರೆದು ಸೋದರಮಾವ ಕೆಲಸ ಮಾಡುತ್ತಿದ್ದ ಕಲಬುರ್ಗಿಗೆ ಬಾಲಕ ಸದಾಶಿವ ಬಂದಾಗ ಎಂಟರ ವಯಸ್ಸು. ಮರಾಠಿ ೪ನೆಯ ತರಗತಿ; ಇಂಗ್ಲಿಷ್ ಮತ್ತು ಉರದು-ಪಾರಸಿ ಒಂದನೆಯ ತರಗತಿಯಿಂದಲೇ ಶಿಕ್ಷಣ ಸೌಲಭ್ಯ ಸಿಕ್ಕಿತು. ಇದೇ ಹೊತ್ತಿನಲ್ಲಿ ಸಾಹಿತ್ಯದ ಓದು ಹಾಗೂ ಊರಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಹವ್ಯಾಸ ಬೆಳೆದು ಹದಿಹರೆಯದ ಸದಾಶಿವ ಒಂದು ಹವ್ಯಾಸೀ ನಾಟಕ ಮಂಡಳಿಯನ್ನು ರಾಯಚೂರಲ್ಲಿ ಕಟ್ಟುವಂತಾಯಿತು. ಅದು, ಬಾಳಗಂಗಾಧರ ತಿಲಕರು ರಾಷ್ಟ್ರೀಯತಾ ಚಳುವಳಿ ಹೂಡಿದ್ದ ಕಾಲ. ಗಣೇಶೋತ್ಸವದಲ್ಲಿ 'ಬಂಧ ವಿಮೋಚನೆ' ಎಂಬ ನಾಟಕವನ್ನು ತಿಲಕರಿಂದ ಸ್ಫೂರ್ತಿ ಪಡೆದು ಬರೆದ ಸದಾಶಿವರಾಯರು ಅದನ್ನು ರಂಗದ ಮೇಲೆ ತಂದಾಗ, ಅವರಲ್ಲಿದ್ದ ನಟ, ಲೇಖಕ, ಸಂಘಟಕನ ವ್ಯಕ್ತಿತ್ವ ಸ್ಫುಟಗೊಂಡಂತಾಯಿತು. ಮುಂದೆ ಯಾದಗಿರಿಯಲ್ಲಿ 'ಶಿವಸುತ ಪ್ರಾಸಾದಿಕ ನಾಟ್ಯ ಮಂಡಳಿ' (೧೯೧೬)ಯನ್ನು ಸ್ಥಾಪಿಸಿಕೊಂಡು "ಬಲಸಿಂಹ ತಾರಾ" ನಾಟಕವನ್ನು ಯಾದಗಿರಿಯ ಕ್ಯಾಂಪ್‌ನಲ್ಲಿ ಆಡುವ ಮೂಲಕ 'ದತ್ತಾತ್ರೇಯ ಕಂಪನಿ' ವ್ಯವಸಾಯ ರಂಗಭೂಮಿಯಲ್ಲಿ ತನ್ನ ಮೊದಲನೆಯ ಹೆಜ್ಜೆಯನ್ನು ಊರಿತು. ಮುನ್ನೂರೈವತ್ತು ರೂಪಾಯಿಗಳ 'ಕಲೆಕ್ಷನ್' ಮೊದಲದಿನವೇ ಆಗಿತ್ತು. 'ಶರಣ ಬಸವ, ವಿಕ್ರಮ-ಶಶಿಕಲಾ' ದಂತಹ ಪೌರಾಣಿಕ ನಾಟಕಗಳನ್ನು ಹಾಡುಗಾರಿಕೆ ಮತ್ತು ಅಭಿನಯ ಕೌಶಲಗಳನ್ನು ತಮ್ಮ ಕಂಪನಿಯ ಬಂಡವಾಳವೆಂಬಂತೆ ಪ್ರದರ್ಶಿಸಿ, ಪ್ರೇಕ್ಷಕವರ್ಗದ ಮೆಚ್ಚುಗೆ, ಬೆಂಬಲ ಗಳಿಸತೊಡಗಿದರು. ಈ ಮುಂಚೆ ಸದಾಶಿವರಾಯರು ಕೆಲವು ವರ್ಷ ಕೊಣ್ಣೂರ ಕಂಪನಿಯ ಶಿವಮೂರ್ತಿಸ್ವಾಮಿ ಕಣಬರಗಿಮಠರ ಸಹಾಯಕರಾಗಿ, ಅವರ ಮಂಡಳಿಯ ನಾಟಕಗಳ ಸಾಹಿತ್ಯ, ಸಂಗೀತ, ನಟನೆಯ ಜವಾಬ್ದಾರಿ ಹೊತ್ತಿದ್ದರು. ಕಂಪನಿ ನಡೆಸುವ ತಂತ್ರಗಳ ಪರಿಚಯ ಅಲ್ಲಿ ಅವರಿಗಾಯಿತು. ೧೯೨೦ ರಲ್ಲಿ ಕೊಣ್ಣೂರ ಕಂಪನಿ ಅನಿವಾರ್ಯವಾಗಿ ಮುಚ್ಚಿದಾಗ ಶಿವಮೂರ್ತಿ ಸ್ವಾಮಿಗಳ ಕೊಡುಗೆಯಾಗಿ ರಂಗ ಪರಿಕರಗಳು "ದತ್ತಾತ್ರೇಯ ಕಂಪನಿ"ಗೆ ವರ್ಗಾವಣೆಯಾದವು. ಸದಾಶಿವರಾಯರಿಗೆ ಇದು ಪ್ರೋತ್ಸಾಹದಾಯಕವಾಗಿ ಪರಿಣಮಿಸಿತು. ಕರ್ನಾಟಕದಲ್ಲಿ ಕಂಪನಿ ನಾಟಕಗಳ ಪ್ರವರ್ತಕ (Promoter)ರಾದ ಶಿವಮೂರ್ತಿಸ್ವಾಮಿಗಳಿಂದ ಗರುಡರು

ಪಡೆದ ಈ ಸ್ಫೂರ್ತಿ, ಪ್ರೋತ್ಸಾಹಗಳು ಅವರ ಆ ಮುಂದಿನ ೨೦ ವರ್ಷಗಳ ಸಾಧನೆಗೆ ನಿರಂತರ ಮೂಲ ಪ್ರೇರಣೆಯಾದವು.

"ಸ ದಯಾ ಕಾಯೋ ಗುರುರಾಯಾ" ಎಂಬ ನಾಂದೀ ಗೀತವನ್ನು ಗರುಡರ ಕಂಪನಿಯು ಅನುಸರಿಸಿದ್ದು ಗಾಣಗಾಪುರದ ದತ್ತಾತ್ರೇಯನ ಮೇಲಿನ ದೃಢ ಭಕ್ತಿ, ವಿಶ್ವಾಸಗಳಿಂದ, ಸದಾಶಿವರಾಯರು ನಾಟಕ ವೃತ್ತಿಯನ್ನು ಒಂದು 'ಧರ್ಮ'ವನ್ನಾಗಿ ಸ್ವೀಕರಿಸಿ, ಪ್ರತಿಯೊಂದು ಪ್ರಯೋಗವನ್ನು 'ಯಜ್ಞ' ದಂತೆಯೇ ಆಚರಿಸುತ್ತಿದ್ದರು.

ದತ್ತಾತ್ರೇಯ ಕಂಪನಿಗೆ ವ್ಯಾವಹಾರಿಕವಾಗಿ ಸ್ಪರ್ಧೆ ಅಥವಾ ಪೈಪೋಟಿಯನ್ನು ಕೊಡುವಂತಹ ಮೂರು-ನಾಲ್ಕು ವಿಶಿಷ್ಟ ನಾಟಕ ಕಂಪನಿಗಳು ಆಗ ಕರ್ನಾಟಕದಲ್ಲಿ ಹೆಸರು ಮಾಡಿದ್ದವು. ಶಿರಹಟ್ಟಿಯ ಎಚ್.ವೆಂಕೋಬರಾಯರ ಕಂಪನಿಯ ವೈಶಿಷ್ಟ್ಯವೆಂದರೆ ವೈಭವದ ರಂಗಸಜ್ಜಿಕೆ; ಪ್ರೇಕ್ಷಕರನ್ನು ಬೆರಗುಪಡಿಸುವ ನಯನ ಮನೋಹರ ದೃಶ್ಯಗಳ ಅಳವಡಿಕೆ. 'ವಿಶ್ವಗುಣಾದರ್ಶ ನಾಟಕ ಮಂಡಳಿ'ಯ ಸವಣೂರ ವಾಮನ ರಾಯರದು ಗಾಯನ ವೈಶಿಷ್ಟ್ಯ. ಬಸವರಾಜ ಮನಸೂರ, ಮಲ್ಲಿಕಾರ್ಜುನ ಮನಸೂರರಂತಹ ಗಾಯಕರು ತಮ್ಮ ನಟನೆಯೊಂದಿಗೆ, ಗಾಯನವನ್ನು ಪ್ರದರ್ಶಿಸಿ ನಾಟಕದ ರಸಾನುಭವವನ್ನು ವಿಸ್ತರಿಸುತ್ತಿದ್ದುದು. ಗುಬ್ಬಿ ಕಂಪನಿಯವರಂತೂ ರಮ್ಯ ಕಥಾನಕ: ಹಾಸ್ಯ ಹಾಗೂ ಕಣ್ಮನ ತಣಿಸುವ ರಂಗ ಶೃಂಗಾರಗಳಿಗೆ ಹೆಸರಾಗಿದ್ದರು. ಗರುಡರು ಈ ಕಂಪನಿಗಳಿಗಿಂತ ವಿಶಿಷ್ಟವಾದುದನ್ನು ಸಾಧಿಸಬೇಕಾಗಿತ್ತು; ಸಾಧಿಸಿದರು. ಪ್ರೇಕ್ಷಕರಲ್ಲಿ ರಸಾನುಭವವನ್ನು ಹುಟ್ಟಿಸಿ, ಪೋಷಿಸುವಂತಹ ಅಭಿನಯ ಹಾಗೂ ಮಾತುಗಾರಿಕೆಗಳಿಗೆ ಸದಾಶಿವರಾಯರು ಲಕ್ಷ್ಯ ಹರಿಸಿದರು. ಡಾ. ಎಚ್. ಕೆ. ರಂಗನಾಥರು ನಿರೂಪಿಸುವಂತೆ (ಸುಧಾ, ೧೪-೮-೧೯೭೭) ಗರುಡರ ನಾಟ್ಯ ವೈಶಿಷ್ಟ್ಯ ಹೀಗಿದ್ದಿತು :

ಅಭಿನಯ ಎಂದರೆ, ಸಹಜಾಭಿನಯವೇ ನಾಟಕದ ಜೀವಾಳ. ಭರತನ 'ನಾಟ್ಯಶಾಸ್ತ್ರ'ವನ್ನು, ಪಾಶ್ಚಾತ್ಯ ಪಂಡಿತರ ತತ್ವಾರ್ಥಗಳನ್ನು ಮಥಿಸಿ, ಗರುಡರು ಅಭಿನಯ ಕಲೆಯ ಬಗೆಗೆ ತಮ್ಮದೇ ಹೊಸ ಬಗೆಯ ಸಂಪ್ರದಾಯಗಳನ್ನು ಪ್ರಸ್ತಾಪಿಸಿದರು. 'ನಾಟ್ಯಧರ್ಮ'; 'ಲೋಕಧರ್ಮ'ಗಳನ್ನು ಸರಿಯಾಗಿ ತೂಗಿ ನಾಟಕಕ್ಕೂ ನೋಟಕರಿಗೂ ನ್ಯಾಯ ದೊರೆಯುವಂತೆ ಅಭಿನಯಿಸುವುದೇ ನಟನಾದವನ ಧ್ಯೇಯವಾಗಿರಬೇಕು' ಎಂಬುದು ಅವರ ಮತ. ಇನ್ನು ಅಭಿನಯದಲ್ಲಿ ಹತ್ತಾರು ಪ್ರಭೋದಗಳು. 'ತ್ರಿಶ್ರ' ವಿಧಾನದಲ್ಲಿ ನಟನಾದವನು ಆ ಪಾತ್ರ, ಆ ಕಾಲ ಹಾಗೂ ಆ ಕೃತಿಯ ಸ್ಥಾಯೀ ಭಾವವನ್ನು ಮುಖದಲ್ಲಿ ಅಳವಡಿಸಿಕೊಂಡು ಅದರ ಮೇಲೆ ಮತ್ತೆರಡು ಭಾವಗಳನ್ನು ಒಂದಾದ ಮೇಲೆ ಒಂದರಂತೆ ಮಿಂಚಿಸುವ ವಿಧಾನ. ಅಂದರೆ, (ಉದಾಹರಣೆಗೆ) - ಹರಿಶ್ಚಂದ್ರ ನಾಟಕದ ಕಡೆಯ ದೃಶ್ಯದಲ್ಲಿ ಶೋಕವನ್ನು

ಸ್ಥಾಯೀಭಾವವಾಗಿ ಮಾಡಿಕೊಂಡು ಅದರ ಮೇಲೆ ದೇವರಲ್ಲಿ ಭಕ್ತಿ ಭಾವವನ್ನು ; ಒಡನೆಯೇ ವಿಧಿಯನ್ನು ನೆನೆದು ನಿರಾಶೆಯನ್ನು ಮುಖದಲ್ಲಿ ಚಿತ್ರಿಸುವ ಬಗೆ. ಹೀಗೆಯೇ ಮುಖದ ಮೇಲೆ ನಾಲ್ಕು ಬಗೆಯ ನಿಷ್ಕೃಷ್ಟ ಭಾವಗಳ ಮೆರವಣಿಗೆಯು "ಚತುರಶ್ರ" ಅಭಿನಯವಾಗುತ್ತದೆ.' (ಉಲ್ಲೇಖ : 'ಎನ್ಕೆ' ಗರೂಡ ಸದಾಶಿವರಾಯ, ೧೯೭೦)

೩. 'ಯೋಗ'

ಸದಾಶಿವರಾಯರು ತಮ್ಮ ನಾಟಕದ ಪ್ರಮುಖ ಪಾತ್ರಧಾರಿಗಳಿಗೆ ಅಭಿನಯಶಾಸ್ತ್ರದ ಪಾಠ ಹೇಳಿಕೊಟ್ಟು, ಆಯಾ ಪಾತ್ರದ ಸ್ಥಾಯೀಭಾವ, ಸಂಚಾರಿ ಭಾವಗಳ ಯಥೋಚಿತ ಪ್ರದರ್ಶನಕ್ಕೆ ಅಣಿಗೊಳಿಸುತ್ತಿದ್ದರು. ಪಾತ್ರಧಾರಿಯು ತಲ್ಲೀನತೆಯಿಂದ ನಟಿಸುವಾಗ, ಆತನಲ್ಲಿ ಪ್ರೇಕ್ಷಕರು ಭಾವ ಸಂಮಿಳನ ಸಾಧಿಸುವಂತಾಗಬೇಕು. ಇದೇ "ನಾಟ್ಯಯೋಗ" ಎಂದವರು ಪ್ರತಿಪಾದಿಸುತ್ತಿದ್ದರು. ಗರುಡರ 'ಪಾದುಕಾ ಪಟ್ಟಾಭಿಷೇಕ' ನಾಟಕದ ರಾಮಚಂದ್ರನ ಪಾತ್ರಧಾರಿಯು ತನ್ನ ವೈಯುಕ್ತಿಕ ಇರವು, ಅರಿವು ಮರೆತು ರಾಮನ ಪಾತ್ರದ ಭಾವಾನುಭಾವಗಳಲ್ಲಿ ಮುಳುಗಿ, ರಾಮಚಂದ್ರನೇ ಆಗಿ ವರ್ತಿಸಬೇಕು. ಹಾಗಾದಾಗಲೇ ರಾಮಚಂದ್ರನ ಸಹಜ ಉದ್ದೀಪನಗಳಿಗೆ ರಾಮಚಂದ್ರನ ಪ್ರತಿಕ್ರಿಯೆಗಳು ವ್ಯಕ್ತವಾಗುತ್ತವೆ. ಬರಿ, ಕ್ರಿಯೆಯ ಅನುಕರಣೆ ನಟನೆಯಲ್ಲ. ತನ್ಮಯತೆ ಸಾಧಿಸಬೇಕೆಂದರೆ ಪಾತ್ರದ ಸ್ವಭಾವ, ಸನ್ನಿವೇಶದ ಭಾವಸ್ಥಿತಿ, ಇತರ ಪಾತ್ರಗಳ ಜತೆಗಿನ ಸಂಬಂಧ. ಒಟ್ಟು ನಾಟಕದ ಆಶಯ ಇವೆಲ್ಲವೂ ನಟನ ಗಮನದಲ್ಲಿರಬೇಕು. ಗರುಡರು ನಟರಿಗೆ ಅವನ್ನು ವಿವರಿಸಿ, ಭಾವಾವೇಶ ಎಲ್ಲಿ. ಎಷ್ಟು ಬರಬೇಕೆಂಬುದನ್ನು ನಿರ್ದೇಶಿಸುತ್ತಿದ್ದರು. ಸ್ವತಃ ಸದಾಶಿವರಾಯರು ತಾವು ವಹಿಸುತ್ತಿದ್ದ ಒಂದು ಪಾತ್ರದ ನಟನೆಯ ಔಚಿತ್ಯವನ್ನು ನಿದರ್ಶಿಸುತ್ತಿದ್ದರು.

'ಪಾದುಕಾ ಪಟ್ಟಾಭಿಷೇಕ'ದಲ್ಲಿ ಅವರದು ದಶರಥನ ಪಾತ್ರ. ರಾಮ, ಸೀತೆ. ಲಕ್ಷ್ಮಣರು ವನವಾಸಕ್ಕೆ ಹೋಗುವ ದಾರುಣ ಪ್ರಸಂಗ. ಪುತ್ರವಿಯೋಗದ ವ್ಯಥೆಯನ್ನು ಆತ "ರಾಮಾ, ರಾಮಾ, ರಾಮಭದ್ರಾ" ಎಂಬ ಮೂರು ಶಬ್ದಗಳಲ್ಲಿ ಹೊರಡಿಸಬೇಕು. ಒಬ್ಬ ತಂದೆಯ ಆರ್ತತೆಯನ್ನು (ಶೋಕ ಭಾವವನ್ನು) ಗರುಡರು ಧ್ವನಿ, ಮುಖಭಾವ, ಅಂಗವಿನ್ಯಾಸಗಳಲ್ಲಿ ತೋರ್ಪಡಿಸುವಾಗ ಪ್ರೇಕ್ಷಕರಲ್ಲಿ ಕರುಣರಸ ಪ್ರವಹಿಸುತ್ತಿತ್ತು.

ಪಾತ್ರಗಳ ಮಾತುಗಳ ಸ್ಪಷ್ಟ ಉಚ್ಚಾರ, ಧ್ವನಿಯ ನಿಯಂತ್ರಣದ ಬಗ್ಗೆ ಗರುಡರು ಸಂಪೂರ್ಣ ಗಮನ ಕೊಡುತ್ತಿದ್ದರು. 'ಸುವಾಚ್ಯ ಸಂಭಾಷಣೆ'ಯೇ ನಾಟಕದ ಸಾಹಿತ್ಯಕ ಗುಣ ಎಂದವರು ತಿಳಿದಿದ್ದರು. ಮಾತು ಗ್ರಾಂಥಿಕವಿರಲಿ, ಸಂಸ್ಕೃತ ಭೂಯಿಷ್ಠವೇ ಆಗಿರಲಿ, ಅದನ್ನು ಅಭಿವ್ಯಕ್ತಿಸುವ ರೀತಿ, ಸರಳವೂ ಸಹಜವೂ ಆಗಿರುವಂತೆ ತರಬೇತಿ ಕೊಡುತ್ತಿದ್ದರು. ನಟನ ಮೂಕ ಭಾವವು ಪ್ರಾಸಂಗಿಕವಾಗಿ ವ್ಯಕ್ತವಾಗುವಂತೆ ಸನ್ನಿವೇಶ ರಚನೆ ಮಾಡುತ್ತಿದ್ದರು. ನಟನ ಅಂಗ, ಪ್ರತ್ಯಂಗ, ಉಪಾಂಗಗಳ ಚಲನವಲನೆ ಇಲ್ಲದಿದ್ದುದು-ಸಾತ್ವಿಕಾಭಿನಯ.

ಅದನ್ನು ಅಳವಡಿಸಿಕೊಳ್ಳಲು ನಟರಿಗೆ ತರಬೇತು ಕೊಡುತ್ತಿದ್ದುದು ಗರುಡರ ಕಲಾ ಪರಿಶ್ರಮದ ಭಾಗವೇ ಆಗಿತ್ತು. ನಟನು ಪ್ರತಿ ಕ್ಷಣವೂ ಪ್ರೇಕ್ಷಕನನ್ನು ತನ್ನ ಪ್ರಭಾವದಲ್ಲಿ ಹಿಡಿದಿಟ್ಟುಕೊಳ್ಳುವುದೇ ರಂಗಭೂಮಿಯ ಯೋಗ ಸಾಧನೆ ಎಂದವರು ನಟರಿಗೆ ಮನದಟ್ಟು ಮಾಡಿಕೊಟ್ಟಿದ್ದರು. ಪಾತ್ರಕ್ಕೆ ತಕ್ಕಂತೆ ಧ್ವನಿಯ ಏರಿಳಿತ, ಬಳುಕು-ಬಾಗುಗಳು ರೂಪುಗೊಳ್ಳುವಂತೆ 'ಕಂಠ ಶಿಕ್ಷೆ'ಯನ್ನವರು ಕೊಡುತ್ತಿದ್ದರು. ಯುವಕರೇ ಸ್ತ್ರೀಪಾತ್ರ ಮಾಡಬೇಕಾಗುತ್ತಿದ್ದುದರಿಂದ ಸ್ತ್ರೀಕಂಠದ ಮೃದುತ್ವ, ಮೋಹಕತೆ ಸಹಜವಾಗಿ ವ್ಯಕ್ತವಾಗುವಂತೆ ವಿಶೇಷವಾಗಿ ಗಮನಿಸುತ್ತಿದ್ದರು. ಬಹುಕಾಲ ಗರುಡರ ಕಂಪನಿಯ ಸ್ತ್ರೀಪಾತ್ರಧಾರಿಯಾಗಿದ್ದ ಹಮ್ಮಿಗಿ ನೀಲಕಂಠಪ್ಪನವರು ಒಂದೆಡೆ ನೆನೆಸಿಕೊಂಡಂತೆ, ರಾಯರು ನಮ್ಮ ದನ್ಯಾಗ ಹೂ, ಹಣ್ಣು ತುಂಬಿಸಿಟ್ಟಂಗ ಮಾತ ಅನಸತಿದ್ರು. ಒಂದ ವಾಕ್ಯಾ ಅಂದ ಮ್ಯಾಲೆ, ಮತ್ತೊಂದ ಅನಬೇಕಾದರ ಯಾಕ ಏರಸಬೇಕು ಅಥವಾ ಇಳಸಬೇಕು ಅನ್ನೂದನ್ನ ಮನಗಾಣಿಸಿಯೇ ತಯಾರಿ ಮಾಡತಿದ್ರು.' ಈ ತರದ ವಾಕ್ ತರಬೇತಿಯ ಪರಿಣಾಮವಾಗಿ ಆಗಿನ ನಾಟಕಗಳಲ್ಲಿ 'ಗರೂಡ ಶೈಲಿ' ಎಂಬುದೊಂದು ಪ್ರಚಲಿತವಾಯಿತು. ಮಗ ಶ್ರೀಪಾದರಲ್ಲದೆ, ಗರುಡರಿಂದ ಗಾಢವಾದ ರಂಗಶಿಕ್ಷಣ ಪಡೆದು, ಮುಂದೆ ಪ್ರಸಿದ್ಧಿ ಪಡೆದ ನಟರೆಂದರೆ, ಹುಲಿಮನೆ ಸೀತಾರಾಮಶಾಸ್ತ್ರಿ; ಮೊರಬದ ಹನುಮಂತಪ್ಪ, ಆರ್.ಡಿ.ಕಾಮತ್; ಎಂ. ಶಾಂತಕುಮಾರ; ಇತ್ಯಾದಿ.

## ೪. ನಾಟ್ಯಸಾಧನೆ

ನಾಟ್ಯಶಿಕ್ಷಾ ಗುರುವಾಗಿ, ಸದಾಶಿವರಾಯರು ತಮ್ಮ ಕಂಪನಿಯನ್ನು ಒಂದು 'ರಂಗಶಾಲೆ'ಯನ್ನಾಗಿಯೇ ಮಾರ್ಪಡಿಸಿದ್ದರು. ನಟವರ್ಗದವರು ರಂಗಕರ್ಮದ ಇತರ ಚಟುವಟಿಕೆಗಳನ್ನು ಕಲಿತು, ಅನುರಿಸಬೇಕಾಗುತ್ತಿತ್ತು. ಯಾವುದೇ ಹೊತ್ತಿಗೆ ಯಾವುದೇ ಕೆಲಸ ಮಾಡುವ ಪ್ರಸಂಗ (ಪಾಳಿ) ಬರಲಿ, ಅದನ್ನು ಕೈಗೆತ್ತಿಕೊಂಡು ನಿರ್ವಹಿಸುವಷ್ಟು ನಟವರ್ಗ ಸದಾಸಿದ್ಧವಿರಬೇಕು ಎಂದವರು ನಿರೀಕ್ಷಿಸುತ್ತಿದ್ದರು. ಕಂಪನಿಯನ್ನು ಅವರು ಒಂದು ಕುಟುಂಬದ ರೀತಿಯಲ್ಲಿ ನಿರ್ವಹಿಸುತ್ತಿದ್ದರು. ತಂದೆ, ತಾಯಿ, ಬಂಧು-ಬಳಗ ಬಿಟ್ಟು ಬಂದು ನಟನೆಯ ವೃತ್ತಿಯಲ್ಲಿ ತೊಡಗಿಕೊಂಡ ಹುಡುಗರನ್ನು ಸದಾಶಿವರಾಯರು ತಮ್ಮ ಮಕ್ಕಳಂತೆ, ತಮ್ಮಂದಿರಂತೆ ನೋಡಿಕೊಳ್ಳುತ್ತಿದ್ದರು. ಊಟ, ಬಟ್ಟೆ, ವಸತಿ ಎಲ್ಲದರಲ್ಲಿ ಎಲ್ಲರೂ ಸಮಾನರು. ಒಳ್ಳೇ ಕಲೆಕ್ಶನ್ ಆದಾಗ ಸಂತೋಷಕೂಟ ಏರ್ಪಡಿಸಿ ಖುಷಿಯನ್ನು ಹಂಚಿಕೊಳ್ಳುವುದು ಅವರ ಹವ್ಯಾಸವಾಗಿತ್ತು. ಕೆಲಸ ನಿರ್ವಹಿಸುವಾಗ ಮಾತ್ರ ಅವರದು ಕಟ್ಟುನಿಟ್ಟಿನ ಕ್ರಮ. ಶಿಸ್ತು, ನಿಯಮಿತತೆ, ಶ್ರದ್ಧೆಯ ಗುಣಗಳನ್ನು ನಟರಲ್ಲಿ ತುಂಬಿ ಅವರು ತಮ್ಮ ಗುರುಪಾತ್ರವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು.

ಸದಾಶಿವರಾಯರು ಸಂಸ್ಕೃತ, ಮರಾಠಿ ಬಲ್ಲವರಾಗಿದ್ದರು. ಆ ಭಾಷೆಗಳ ನಾಟಕ ಸಾಹಿತ್ಯವನ್ನು ಅಭ್ಯಾಸ ಮಾಡಿ ಅರಿತುಕೊಂಡಿದ್ದರು. ಇಂಗ್ಲೀಷನ್ನು ಓದಿಕೊಂಡು, ರಂಗಪ್ರಯೋಗಗಳ ಬಗ್ಗೆ

ತಿಳಿದುಕೊಳ್ಳುತ್ತಿದ್ದರು. ದತ್ತಾತ್ರೇಯ ಕಂಪನಿಗಾಗಿ ಮೊದ-ಮೊದಲು ಅವರು ಮರಾಠಿ ನಾಟಕಗಳ ಅನುವಾದ, ರೂಪಾಂತರಗಳನ್ನು ಮಾಡಿಕೊಂಡರು. ಆ ನಂತರ ತಮ್ಮ ಧ್ಯೆಯ. ಧೋರಣೆಗೆ ಅನುಗುಣವಾಗಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಅಥವಾ ಸಾಮಯಿಕ ನಾಟಕಗಳನ್ನು ಬರೆದು ಆಡಿಸಿದರು. ಗರುಡರ ರಂಗ ನಾಟಕಗಳ ಸಂಖ್ಯೆ ೪೦ ಕ್ಕೂ ಮಿಕ್ಕಿದ್ದು. ಅವುಗಳನ್ನು ಪುಸ್ತಕ ರೂಪದಲ್ಲಿ ಓದಿದಾಗ, ಒಳ್ಳೇ ಸಾಹಿತ್ಯ ಕೃತಿಯಾಗಿಯೂ ಪರಿಣಾಮ ಬೀರುವಂತಿವೆ. ಸಂಭಾಷಣೆ ಮತ್ತು ಹಾಡುಗಳ ಸೊಗಸು ಗರುಡರ ನಾಟಕದ ಜೀವಾಳ ಎನ್ನಬಹುದು.

'ಮಾತೃಬಂಧ ವಿಮೋಚನೆ' (ಕಂಸವಧ); 'ಚವತಿಯ ಚಂದ್ರ' (ಶ್ಯಮಂತಕೋಪಾಖ್ಯಾನ); 'ವತ್ಸಲಾ ಹರಣ' (ಮಾಯಾ ಬಜಾರ್); ಭಸ್ಮಾಸುರ ಮೋಹಿನಿ; ಲಂಕಾ ದಹನ (ಸ್ವಜನೋದ್ಧಾರ): ಗಿರಿಜಾ ಕಲ್ಯಾಣ: ಶಕ್ತಿ ವಿಲಾಸ;

ಶ್ರೀಕೃಷ್ಣ ಲೀಲಾ; ಪಾದುಕಾ ಪಟ್ಟಾಭಿಷೇಕ - ಇವು ಪೌರಾಣಿಕ ಕಥಾವಸ್ತುವುಳ್ಳ ರಂಗಕೃತಿಗಳಾಗಿದ್ದು, ಪರೋಕ್ಷವಾಗಿ ಭಾರತದ ಸ್ವಾತಂತ್ರ್ಯ ಚಳುವಳಿ; ರಾಷ್ಟ್ರೀಯ ಚಳುವಳಿಯ ವಿಚಾರಗಳನ್ನು ಅಲ್ಲಲ್ಲಿ ಪ್ರಸ್ತಾಪಿಸಿದುದೂ ಉಂಟು.

ನಮ್ಮ ಭಾಗ್ಯೋದಯ: ವಿಷಮ ವಿವಾಹ (ಪಶ್ಚಾತ್ತಾಪ); ಕಾಲಚಕ್ರ; ಸತ್ಯ ಸಂಕಲ್ಪ; ಉಗ್ರ ಕಲ್ಯಾಣ; ಮೊದಲಾದವು ಸಾಮಾಜಿಕ ಸಮಸ್ಯೆಗಳ ಸುತ್ತ ಹೆಣೆದ ಜನಪ್ರಿಯ ನಾಟಕಗಳು. 'ಸತ್ಯಸಂಕಲ್ಪ' ನಾಟಕ (೧೯೩೦) ಕುಂದಾಪುರದಲ್ಲಿ ಪ್ರಯೋಗವಾಗುತ್ತಿದ್ದಾಗ ಒಂದು ರಾತ್ರಿ. ಮಹಾತ್ಮಾ ಗಾಂಧಿಯವರು ಥಿಯೇಟರಿಗೆ ಬಂದು ಕೆಲಕಾಲ ನಾಟಕ ನೋಡಿ ಮೆಚ್ಚಿಗೆ ವ್ಯಕ್ತಪಡಿಸಿದ್ದು ದತ್ತಾತ್ರೇಯ ಕಂಪನಿಗೆ ಸವಿನೆನಪಿನ ಅನುಭವ. ಗಾಂಧೀಜಿಯವರ ಖಾದೀ ಚಳವಳಿ; ಹರಿಜನೋದ್ಧಾರದ ಕಾರ್ಯಕ್ರಮಗಳನ್ನು ಗರುಡರು ಸಾಕಷ್ಟು ಪ್ರಚಾರ ಮಾಡಿ, ತಮ್ಮ ದೇಶಭಕ್ತಿಯನ್ನು ಪ್ರಕಟಿಸಿದ್ದಾರೆ.

'ಬಲಸಿಂಹ ತಾರಾ', 'ವಿವೇಕ ವಿಜಯ', 'ಪ್ರಭಾವತಿ', 'ಆದರ್ಶ ಕನ್ಯಾ' - ಕಾಲ್ಪನಿಕ ಕಥಾನಕಗಳು. ಜನಪ್ರಿಯ ಧಾಟಿಯ ಈ ರೋಮ್ಯಾಂಟಿಕ್ ನಾಟಕಗಳು ಮನರಂಜನೆಯ ಕಡೆಗೆ ಕಣ್ಣಿಟ್ಟ ಕೃತಿಗಳು. ಗರುಡರಿಗೆ ನಾಡಿನ ಚರಿತ್ರೆಯ ಬಗ್ಗೆ ಕಳಕಳಿ, ಕಾಳಜಿ ಬಹಳ. ವೀರ, ಸಾಹಸ, ದೇಶಭಕ್ತಿಯುಳ್ಳ ಗಂಡು ವ್ಯಕ್ತಿಗಳ ಕತೆಗಳನ್ನವರು ನಾಟಕ ಮಾಡಿ ಪ್ರೇಕ್ಷಕರಲ್ಲಿ ದೇಶಭಕ್ತಿ, ಕೆಚ್ಚು ಹುಟ್ಟಿಸುವಂತೆ ಮಾಡಿದರು. ಎಚ್ಚಮ ನಾಯಕ ಅಂತಹ ಒಂದು ಅನುಪಮ ಕೃತಿ. ಇದು ತಮಗಾಗಿಯೇ ಅವರು ಬರೆದುಕೊಂಡ ಕೃತಿ ಎನ್ನಬಹುದು. ಲಕ್ಷ್ಮಣ ನಾಯಕ ಎಂಬುವ ವಿಜಯನಗರ ಸಾಮ್ರಾಜ್ಯದ ಒಬ್ಬ ಸರದಾರ. ಉತ್ತರಾಧಿಕಾರಕ್ಕಾಗಿ ಅರಮನೆಯಲ್ಲಿ ನಡೆದ ಪಿತೂರಿ(ಒಳಸಂಚು) ಯಿಂದಾಗಿ ಸಾಮ್ರಾಜ್ಯವೇ ಕುಸಿದು ಬೀಳುವುದಲ್ಲ ಎಂಬ

ಅಳುಕು, ಆತಂಕ ಈ ಲಕ್ಷ್ಮಣ ನಾಯಕನಿಗೆ. ಚಿಕ್ಕರಾಯ ಎಂಬ ಅಗಸರ ಹುಡುಗನನ್ನು ಸಿಂಹಾಸನಕ್ಕೆ ತಂದು ತನ್ನ ಸರ್ವಾಧಿಕಾರ ಮೆರೆಯಲು ಹೊರಟ ಜಗದೇವರಾಯನ ಕುತಂತ್ರವನ್ನು ಬಯಲಿಗೆಳೆಯುವ ಸಾಹಸ ಇವನದು. ವಿಜಯನಗರದ ನಿಜವಾದ ಹಕ್ಕುದಾರ ಶ್ರೀರಂಗರಾಯ ಎಂದು ಡಂಗುರ ಹೊಡೆಸಿದ ಲಕ್ಷ್ಮಣ ನಾಯಕನನ್ನು ಜಗದೇವ ಕೊಲ್ಲಿಸುವ ಸಂಚು ಹೂಡುತ್ತಾನೆ. ತನ್ನನ್ನು ಕೊಲ್ಲಲು ಬಂದಿದ್ದ ಕರಿಯ ಎಂಬ ದೇಶದ್ರೋಹಿಯ ಮನಸ್ಸನ್ನು ಎಚ್ಚಮನಾಯಕ (ಲಕ್ಷ್ಮಣ ನಾಯಕನ ಜನಪ್ರಿಯ ನಾಮಧೇಯ) ಪರಿವರ್ತಿಸಿಬಿಡುತ್ತಾನೆ. ವೈರಿಯಾಗಿದ್ದವ ಬಲಗೈ ಬಂಟನಾಗಿ, ಎಚ್ಚಮನಾಯಕನ ಮುಂದಿನ ಸಾಹಸಗಳಿಗೆ ಸಹಾಯ ಮಾಡುತ್ತಾನೆ. ನಾಯಕನ ಧೈರ್ಯ, ಸಾಹಸ, ನಾಡಿನ ಭಕ್ತಿ, ಜಾಣ್ಮೆ, ಪ್ರಸಂಗೋಚಿತ ಭಾವಾಭಿವ್ಯಕ್ತಿ -ಈ ನಾಟಕಕ್ಕೆ ಲವಲವಿಕೆಯನ್ನು ತುಂಬಿವೆ. ವ್ಯಕ್ತಿ, ಸನ್ನಿವೇಶಗಳ ಹಿನ್ನೆಲೆಗೆ ಅನುಗುಣವಾದ ಭಾಷಾಶೈಲಿಯನ್ನು ನಾಟಕದಲ್ಲಿ ಬಳಸುವುದು ಗರುಡರ ವಿಶೇಷತೆ.

'ಎಚ್ಚಮ ನಾಯಕ' ಕೃತಿಯಲ್ಲಿಯ ಒಂದು ಗಂಭೀರ, ಹೃದಯಸ್ಪರ್ಶಿ ದೃಶ್ಯದ ನಿದರ್ಶನವನ್ನು ಇಲ್ಲಿ ನೋಡಬಹುದು.

**ಎ. ನಾಯಕ** : ಎಲ್ಲವೋ ನೀನಾರು ?

**ಕರಿಯ** : ದೇವರೂ ಯಾರಂಬೋದನ್ನೇನ ಮಾಡತೀರಿ ? ಒಬ್ಬ ಪಾಪಿಷ್ಠ ಮುಂಡೇಮಗ ನಾ. ಗಡಾನ ರುಂಡಾ ಹಾರಿಸಿ ಬಿಡ್ರಿ, ಹೋಗ್ತಿನಿ. ಮಾಡಿದ ಪಾಪಾ ಭೋಗಿಸಾಕ ನರಕಕ್ಕ....

**ಎ. ನಾಯಕ** : ಎಲಾ ! ಮತ್ಯಾರದೋ ಮೇಲೆ ನೀನು ಇಂಥಾ ದುಸ್ಸಾಹಸದ ಅಕೃತ್ಯ ಮಾಡಿದ್ದಿದ್ದರೆ ನಿಶ್ಚಿತವಾಗಿ ನೀನು ವಧ್ಯ ಎನಿಸುತ್ತಿದ್ದಿ. ಆದರೆ ನನ್ನ ಮೇಲೆ ಇಂಥ ಸಾಹಸಕ್ಕೆ ಕೈ ಹಾಕಿರುವ ನೀನು ನಿಜವಾಗಿ ಎದೆಗಾರ. ನಿನ್ನನ್ನ ವಧಿಸುವದಕ್ಕಿಂತಲೂ ಹಾಗೆಯೇ ಬಿಟ್ಟರೆ, ಮುಂದೆ ನಿನ್ನಿಂದ ದೊಡ್ಡ ಕಾರ್ಯಗಳಾದರೂ ಆದಾವು.

**ಕರಿಯ** : ದೇವರೂ ಈ ಹೇಸೀ ಕಡಿಂದ ಮತ್ಯಾವ ದೊಡ್ಡ ಕಾರ್ಯಾ ಆಗೋದೈತ್ರಿ ? ಆಗತಿದ್ರ ಹಿಂತಾವ ಅಲ್ಲೇನ್ರಿ ? ತಮ್ಮಂಥಾ ಸಾವಿರಾರ ಮಂದಿನ್ನ ಸಾಕೂವಂಥಾ ಮಾರಾಯ್ರನ್ನ ಮಲಗಿದಾಗ ಬಂದು ಕೊಲ್ಲೂದು....!

**ಎ. ನಾಯಕ** : ಏನಿದ್ದರೂ ನಿನ್ನನ್ನು ಕ್ಷಮಿಸುವುದಕ್ಕಾಗಿ ಭುವನೇಶ್ವರಿಯು ನನಗೆ ಪ್ರೇರಣೆಯನ್ನು ಮಾಡಿದ್ದಾಳೆ. ಎಲೋ ! ನನ್ನ ಸಾವಿನಲ್ಲಿ, ಈ ಪವಿತ್ರ ಕರ್ನಾಟಕದ ಸಿಂಹಾಸನದ ಘನವಾದ ಸೇವೆ ಅಡಕವಾಗಿದ್ದೇ ನಿಜವಿದ್ದರೆ, ಅಗತ್ಯವಾಗಿ ಹೇಳು, ಈ ಕಠಾರಿಯಿಂದ ಈಗಲೇ ತಿವಿದು ಹಾಕು. ಪರಮಾನಂದದಿಂದ ಸಾಯುವೆ.

**ಕರಿಯ** : ಅಳೂ ಬರತsದರೀ, ದೇವರೂ, ತಮಾತಾ ಕೇಳಿ, ಮಾತಾಡಾಕ ಬರದಂಗ ಆಗೇತ್ರಿ. ನೀವು ಮನಸೇರು ಅಲ್ಲ. ಪ್ರತ್ಯಕ್ಷ ಹಂಪೀ ವಿರೂಪಾಕ್ಷ ದೇವರು... (ಸ್ವಗತ) ಎಲ್ಲೈ ಕರಿಯಾ. ಇಂಥವರನ್ನ ಕೊಲ್ಲತಿದ್ದಿ ಅಲ್ಲಾ! ಇಂಥವ್ರನ್ನ ಕೊಲ್ಲತಿದ್ದೀ ಹೌದಲ್ಲೊ-ನಿನ್ನೊಬ್ಬನ ಹಿತಕ್ಕ ! ನಂ ದೇಶದ ಇಂಥಾ ವೀರ ಬಂಟನನ್ನು ಕೊಲ್ಲತಿದ್ದಿ ಅಲ್ಲಾ ! ಥೂ ! ನಿನ್ನಾಪ್ನ. ನಾಯಿ ಬಾಳುವೇ ಮಾಡುವ ನೀ ಸಾಯಿ, ಮಗನಾ ನೀ ಸಾಯಿ. (ಚಾಕು ತೆಗೆದು ಇರಿದುಕೊಳ್ಳುತ್ತಿರುವಂತೆಯೆ, ಹನುಮ ಕೈ ಹಿಡಿಯುವನು).

ಪ್ರಸ್ತುತ ಸನ್ನಿವೇಶದಲ್ಲಿ ಎಚ್ಚಮನಾಯಕನ ಶಿಷ್ಟ ಮಾತಿನ ಶೈಲಿ, ಕರಿಯನ ಗ್ರಾಮ್ಯ (ಆಡು) ಮಾತಿನ ಶೈಲಿಯ ಸುಂದರ ಸಮ್ಮಿಶ್ರಣ ಸೊಗಸಾಗಿ, ಸಹಜವಾಗಿ ಹೊಮ್ಮಿದೆ.

ಗಂಭೀರ, ಹಾಸ್ಯ, ಶೃಂಗಾರ, ತಾತ್ತ್ವಿಕ ಸನ್ನಿವೇಶಗಳನ್ನು ತೋರಿಸುವಾಗ ಗರುಡರು ಬಳಸುವ ಭಾಷಾಶೈಲಿ ಸರಳ ಮತ್ತು ಭಾವಾಭಿವ್ಯಂಜಕತೆಯನ್ನು ಹೊಮ್ಮಿಸುವಂತಿರುವುದನ್ನು ಗಮನಿಸಬಹುದಾಗಿದೆ.

ಗರುಡರು ಬರೆದ ಹಾಡುಗಳಲ್ಲಿ ಸಂದರ್ಭದ ಭಾವ ನಿರೂಪಣೆ ಇದೆಯೆ ಹೊರತು, ಕಾವ್ಯದ ಅಭಿವ್ಯಂಜಕತೆ ಕಾಣದು. ಸಂಭಾಷಣೆಯಲ್ಲಿ ತೀರಾ ವಾಚ್ಯವಾಗಿ, ನೀರಸವಾಗಿ ಹೇಳಲಿಕ್ಕಾಗದ್ದನ್ನು ಪಾತ್ರವು ಭಾವಾವೇಶದಿಂದ, ರಸಾತ್ಮಕವಾಗಿ, ಲಯಪೂರ್ಣವಾಗಿ ಹೇಳುವುದು ಔಚಿತ್ಯಪೂರ್ಣ. ಅದನ್ನು ಅವರು ನಾಟಕದ ನಡುನಡುವೆ ಸೇರಿಸಿ, ಕಥನದ ಪರಿಣಾಮವನ್ನು ಚುರುಕುಗೊಳಿಸುತ್ತಾರೆ. ಹಾಡಿಗಾಗಿ ಹಾಡು ಅಥವಾ ಸಂಗೀತದ (ರಾಗ, ತಾನ, ವಿತಾನ) ಕೌಶಲ ಪ್ರದರ್ಶನಕ್ಕಾಗಿ ಹಾಡನ್ನು ಅವರು ಬರೆಯಲಿಲ್ಲ ಮತ್ತು ತಮ್ಮ ನಾಟಕಗಳಲ್ಲಿ ಅದಕ್ಕೆ ಪ್ರಾಧಾನ್ಯ ನೀಡಲಿಲ್ಲ. ಲಂಕಾ ದಹನ (ಸ್ವಜನೋದ್ಧಾರ) ನಾಟಕದಲ್ಲಿ ಹನುಮಂತನು ರಾವಣನ ಆಸ್ಥಾನ ಹೊಕ್ಕು ಅವನನ್ನೇ ಮೂದಲಿಸುವಂತಹ ಹಾಡನ್ನು ಹೀಗೆ ಅನ್ನುತ್ತಾನೆ :

ದಾನವನಿವ ಸಾರ್ವಭೌಮ ನೃಪನೇ

ಘನತಮ ದುರಾಚಾರಿ ||ಪಲ್ಲವಿ||

ನ್ಯಾಯ ನೀತಿ ಮೊದಲಾದ ಸುಗುಣಗಳ

-ನಾದವನು | ತಾಯಿ-ಮಗುವ ಸಂಗೋಪಿಸುವಾತೆರ |

ಕಾಯ್ವನು || ಆ ಯಶವಾನ್.....

ಹೇ ಕರ್ಮರತನಾದ ಪತಿತ ಖಲ |

ದಾನವನಿವ; ಸಾರ್ವಭೌಮನೇ ?

ಮೂರು ನಿಮಿಷದ ಹಾಡಿನ ಈ ಒಂದು ನುಡಿ ಹೊರಬೀಳುವುದೇ ತಡ, ಪ್ರೇಕ್ಷಕರು (ಶೋತೃಗಳು) ರೊಮಾಂಚಿತರಾಗಿ, ರಾವಣನನ್ನು "ಬ್ರಿಟೀಶ್‌ರಾಜ್" ಎಂದು ಕಲ್ಪಿಸಿ, ಅವನ ದಾನವತೆಯನ್ನು ಮೂದಲಿಸುವ; ಹನುಮಂತನನ್ನು, "ಭಾರತೀಯ ಚಳವಳಿಗಾರ" (ಹೋರಾಟಗಾರ) ಎಂದು ಭಾವಿಸಿ, ಚಪ್ಪಾಳೆ ತಟ್ಟುತ್ತ "ಭಾರತ್ ಮಾತಾ ಕೀ ಜಯ್" ಎಂದು ದನಿಗೂಡಿಸುತ್ತಿದ್ದರಂತೆ. ಬ್ರಿಟೀಶರನ್ನು ಮತ್ತಷ್ಟು ಹೀಗಳೆಯುವ ಮತ್ತೊಂದು ನುಡಿ ಹನುಮಂತ ಪಾತ್ರಧಾರಿಯ ಬಾಯಿಯಿಂದ ಹೊರಬೀಳುವುದು ಹೀಗೆ :

ಅಕ್ಕರತೆಯನನುಭವಿಸತಕ್ಕ ಬುವಿಯಾಳ್ವರಾ

ಚಿಕ್ಕ ಚಿಕ್ಕ ದೇಶಗಳ ಕಸಿದು | ಆ ಸರ್ವರಾ

ಅಕ್ಕರತೆಯ ಮುರಿದಿಕ್ಕಿ ಪರವಶದೊಳಿಕ್ಕಿದ

ಸೊಕ್ಕಿದ ಠಕ್ಕ ಶಿಖಾಮಣೀ ||

ದಾನವನಿವ.....

ಪ್ರೇಕ್ಷಕರಿಂದ ಕರತಾಡನ. 'ಬೋಲೋ ಭಾರತ್ ಮಾತಾ ಕೀ' ಜಯಘೋಷ. ಕೆಲವರಿಂದ 'ಮಹಾತ್ಮಾ ಗಾಂಧೀಜೀ ಕೀ ಜಯ್' ಕೂಗು. ಒಮ್ಮೆ ಒಬ್ಬ ಭಾವುಕ ಪ್ರೇಕ್ಷಕ ಈ ಹಾಡನ್ನು 'ರಾವಣ'ನ ಪಾತ್ರಧಾರಿಯಾಗಿ ಕೇಳಿಸಿಕೊಳ್ಳುತ್ತಿದ್ದ ಗರುಡರಿಗೆ ರಂಗವೇದಿಕೆಯನ್ನೇರಿ, ತಲೆಯ ಮೇಲೆ ತನ್ನ ಗಾಂಧೀ ಟೊಪ್ಪಿಗೆಯನ್ನು ಹಾಕಿ, ಹನುಮಂತನ ಪಾತ್ರಧಾರಿಯ ಪಾದಗಳಿಗೆ ಶಿರಸಾಷ್ಟಾಂಗ ನಮಸ್ಕಾರ ಹಾಕಿದನಂತೆ. ೧೯೨೯ ರಲ್ಲಿ ನಡೆದ ಘಟನೆ ಇದು.

ಈ ನಿದರ್ಶನದ ಅರ್ಥವಿಷ್ಟೆ, ಗರುಡ ಸದಾಶಿವರಾಯರು ನಾಟಕ ರಚನೆ, ರಂಗಕೃತಿ ನಿರ್ಮಾಣ, ಅಭಿನಯಗಳನ್ನು ಎಷ್ಟೊಂದು ಪರಿಣಾಮಕಾರಿಯಾಗಿ, ಪ್ರೇಕ್ಷಕರನ್ನು ಸೆರೆಹಿಡಿಯುವ ರೀತಿಯಲ್ಲಿ ನಿರ್ವಹಿಸಿ ಕೃತಾರ್ಥತೆಗೆ ಪಾತ್ರರಾಗುತ್ತಿದ್ದರೆಂಬುದು. ಶಿವರಾಮ ಕಾರಂತ, ಟಿ. ಪಿ. ಕೈಲಾಸಂ, ಶ್ರೀರಂಗ, ಹುಯಿಲಗೋಳ ನಾರಾಯಣರಾಯ, ಮುದವೀಡಕರ ಕೃಷ್ಣರಾಯರಂತಹ ಆ ಕಾಲದ ಲೇಖಕರು, ಚಳವಳಿಗಾರರು ಗರುಡರ ನಾಟ್ಯ ಸಾಧನೆಗಳನ್ನು ಕಂಡು ಮೆಚ್ಚಿದ್ದುಂಟು. ವೃತ್ತಿಯಲ್ಲಿ ಸ್ಪರ್ಧಿಗಳಾಗಿದ್ದರೂ ಕೂಡ, ಗುಬ್ಬಿ ವೀರಣ್ಣನವರಿಗೆ ಗರುಡರ ನಾಟ್ಯ ಉನ್ನತವಾದುದು, ಸದಭಿರುಚಿಯಿಂದಾಗಿ ಉತ್ಕೃಷ್ಟವಾದುದು ಎಂಬುದಕ್ಕಾಗಿ ಗೌರವ-ಮೆಚ್ಚುಗೆಗಳಿದ್ದವು. ಕರ್ನಾಟಕ ರಂಗಭೂಮಿಗೆ ವೃತ್ತಿಪರತೆಯ ಘನತೆ, ತೂಕಗಳನ್ನು ತಂದುಕೊಡುವಲ್ಲಿ ಗರುಡ ಸದಾಶಿವರಾಯರು ಪಟ್ಟ ಪರಿಶ್ರಮ; ತೋರಿಸಿದ ಸಹನೆ ಅನುಪಮ.

ಗರುಡರು ಹಣಗಳಿಕೆಗಾಗಿ 'ಕಂಪನಿ' ಕಟ್ಟಿರಲಿಲ್ಲ. ಕಂಪನಿ ನಡೆಸಲು ಎಷ್ಟು ಹಣ ಬೇಕೋ ಅಷ್ಟನ್ನು ಗಳಿಸುತ್ತಿದ್ದರು. ಹೆಚ್ಚು ಹಣ ಗಳಿಸಿದಾಗ, ಅದನ್ನು ನಾಟಕದ ಸುಧಾರಣೆಗಾಗಿ ವಿನಿಯೋಗಿಸುತ್ತಿದ್ದರು. ನಟವರ್ಗದ ಕ್ಷೇಮ ಚಿಂತನೆಗಾಗಿ ವ್ಯಯಿಸುತ್ತಿದ್ದರು. ಹಣ ಗಳಿಕೆಗಾಗಿ ರಂಗದ ಮೇಲೆ ಯಾವುದೇ ಬಗೆಯ 'ಗಿಮಿಕ್'ಗಳನ್ನವರು ಮಾಡುತ್ತಿರಲಿಲ್ಲ. ಅಂದರೆ ರಂಗಭೂಮಿ ಮಾಧ್ಯಮದ ಗುಣ, ದೋಷಗಳನ್ನು ಮೀರುವುದಕ್ಕಾಗಿ 'ಹವ್ಯಾಸೀ' ರಂಗಕಲಾವಿದರು ಮಾಡುತ್ತಿದ್ದ ಪ್ರಾಯೋಗಿಕ ತಂತ್ರಗಳ ಬಗ್ಗೆ ಗರುಡರಿಗೆ ಆಸ್ಥೆ ಇದ್ದಿತು. ವೈಚಾರಿಕ ಅಂಶಗಳನ್ನು; ವಸ್ತುನಿಷ್ಠ (ಭಾವೋದ್ರಿಕ್ತತೆಗೆ ಹೊರತಾದುದ್ದು) ಅಭಿವ್ಯಕ್ತಿಯ ಶೈಲಿಯನ್ನು ಮೆಚ್ಚಿ, ಅಳವಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು. ಒಮ್ಮೆ ಶ್ರೀರಂಗರನ್ನು ಚರ್ಚೆಗೆ ಆಹ್ವಾನಿಸಿ, 'ವೃತ್ತಿರಂಗಭೂಮಿ' ಯ ದೌರ್ಬಲ್ಯಗಳನ್ನು ನಿವಾರಿಸುವ ಬಗ್ಗೆ ಯೋಜನೆಯನ್ನು ಹಾಕಿಕೊಂಡರು. ಶ್ರೀರಂಗರ "ಉದರ ವೈರಾಗ್ಯ" ನಾಟಕವನ್ನು ಆಡಿ ತೋರಿಸುವ ಪ್ರಯತ್ನಕ್ಕೆ ಕೈ ಹಾಕಿದರು. ಆದರೆ ಹವ್ಯಾಸಿ ಕಲಾವಿದರಲ್ಲಿದ್ದ ಸ್ವಚ್ಛಂದತೆ, ಅನಿಯಮಿತತೆಗಳು ಗರುಡರಿಗೆ 'ನಾಟ್ಯಧರ್ಮ'ಕ್ಕೆ ಹೊರತಾದ ಅಂಶಗಳೆನ್ನಿಸಿದವು. ಹವ್ಯಾಸಿಗಳ ಉಸಾಬರಿ ಬಿಟ್ಟುಕೊಟ್ಟರು. ಆದರೆ, ಹವ್ಯಾಸೀ ಕಲಾವಿದರಿಗಿರುವ ಕಲಾಭಿವ್ಯಕ್ತಿಯ ಉನ್ನತ ಹಂಬಲವನ್ನು ಗರುಡರು ಕೊನೆ ತನಕವೂ ವೃತ್ತಿವಂತನಾಗಿ ತಾವು ಕಾಪಾಡಿಕೊಂಡರು. ಯಾವಾಗ ರಂಗಭೂಮಿಯು ಸಿನೆಮಾ ಪ್ರಭಾವಕ್ಕೆ ಬಿದ್ದು, 'ಗಿಮಿಕ್'ಗಳಿಗಾಗಿ, ನಟ-ನಟಿಯರ 'ಸ್ಟಾರ್ ವ್ಯಾಲ್ಯೂ' ಮೇಲೆ ನಿಲ್ಲುವ ಆತುರ, ಕಾತರ ತೋರಿಸತೊಡಗಿತೋ ಆಗ ಅವರು ನೈಚ್ಯಾನುಸಂಧಾನ ಮಾಡಿಕೊಳ್ಳಲಿಷ್ಟಪಡದೆ, ಕಂಪನಿಯನ್ನು ವಿಸರ್ಜಿಸಿ, ರಂಗ ನಿವೃತ್ತಿ ಹೊಂದಿದರು.

## ೫. ಚಲನಚಿತ್ರ ಯೋಜನೆ

ಗರುಡರಿಗೆ ಸಿನೆಮಾ ಮಾಧ್ಯಮದ ಬಗ್ಗೆ ಆಸೆ, ಆಸಕ್ತಿಯೂ ಇತ್ತು. ಮೂಕ ಚಿತ್ರಗಳ ಕಾಲ(೧೯೩೦ ರ ಮುಂಚೆ)ದಲ್ಲಿ ಗುಬ್ಬಿ ವೀರಣ್ಣನವರು ಮದ್ರಾಸಿಗೆ ಹೋಗಿ ಸಿನೆಮಾಗಳನ್ನು ನಿರ್ಮಿಸುತ್ತಿದ್ದರು. ವೃತ್ತಿರಂಗಕ್ಕೆ ಸಿನೆಮಾ ಉದ್ದಿಮೆ ಕಲಾಭಿವ್ಯಕ್ತಿಯ ದೃಷ್ಟಿಯಿಂದ ಹತ್ತಿರದ್ದೇ. ಜೊತೆಗೆ, ಅಭಿನಯವನ್ನು ಬಂಡವಾಳ ಮಾಡಿಕೊಂಡು ನಾಟಕ ಮಾಧ್ಯಮಕ್ಕೆ ವ್ಯಾಪಕ, ವಿಸ್ತಾರ ಕೊಡಬಹುದೆಂಬ ಆಕರ್ಷಣೆ ಅವರನ್ನು ವಿಚಾರಕ್ಕೆ ತೊಡಗಿಸಿತು. ಆ ದಿಕ್ಕಿನಲ್ಲಿ ಯೋಜನೆಯನ್ನು ರೂಪಿಸಿದರು. ಚಿತ್ರೀಕರಣ ಕರ್ನಾಟಕದಲ್ಲೇ ಸಾಧ್ಯವಾಗಬೇಕು; ನಾಡಿನ ಪ್ರಕೃತಿ, ಸಂಸ್ಕೃತಿ, ಪಾರಂಪರಿಕ ವಾತಾವರಣ ಚಲನಚಿತ್ರದಲ್ಲಿ ಮಾಡಬೇಕೆ ಹೊರತು, ಅನ್ಯ ಪ್ರದೇಶದ ಅಪರಿಚಿತ ವಾತಾವರಣ ಕಾಣುವುದು ವಿಹಿತವಲ್ಲ ಎನ್ನಿಸಿತ್ತವರಿಗೆ. ಬಾದಾಮಿಯ ಗುಡ್ಡದ ಓರೆಗಳಲ್ಲಿ ಬೃಹದ್ ಸ್ಟುಡಿಯೋ ನಿರ್ಮಾಣ ಮಾಡಿ ಚಿತ್ರೀಕರಣ ನಡೆಸುವಂತಾಗಬೇಕೆಂಬ ಒಂದು ಯೋಜನೆಯನ್ನು ಮಂಗಳೂರು ಕ್ಯಾಂಪಿನಲ್ಲಿದ್ದಾಗ ಮಾಡಿಕೊಂಡಿದ್ದರು. ಬ್ಯಾಂಕಿಂಗ್ ಉದ್ದಿಮೆಯ ಪ್ರವರ್ತಕರಾದ ಡಾ. ಟಿ.ಮಾಧವ ಅನಂತ ಪೈಗಳ ಜೊತೆ ಈ ಯೋಜನೆ ಕುರಿತು ಪ್ರಸ್ತಾಪಿಸಿ, ಅವರಿಂದ ಉತ್ತೇಜನಪರ ಪ್ರತಿಕ್ರಿಯೆಯನ್ನು ಪಡೆದಿದ್ದರು. ಯೋಜನೆ ಕಾರ್ಯರೂಪಕ್ಕೆ ಬಂದಿದ್ದಿದ್ದರೆ, ಉತ್ತರ ಕರ್ನಾಟಕ ೧೯೩೪ರ ಹೊತ್ತಿಗೆ ಚಲನಚಿತ್ರ ನಿರ್ಮಾಣದ ಆಕರ್ಷಕ ಕೇಂದ್ರವಾಗಿ ಮೆರೆಯಬಹುದಿತ್ತು. ಅದೊಂದು ವಿಷಮ ಸನ್ನಿವೇಶದಲ್ಲಿ ಗರುಡರ ಯೋಚನೆ-ಯೋಜನೆ ವಿಚಲಿತಗೊಂಡಿತ್ತು.

ಆಗ ಆದುದಿಷ್ಟೆ : ಹಿಂದೂ ಪುರಾಣಗಳ ಕಥಾವಸ್ತುಗಳನ್ನು ನಾಟಕವಾಗಿಸುತ್ತಿದ್ದ ಗರುಡರಿಗೆ, ಕ್ರೈಸ್ತ ಪುರಾಣ ಪುರುಷ ಯೇಸುಕ್ರಿಸ್ತನನ್ನು ಕುರಿತು ಒಂದು ನಾಟಕರಂಗದ ಮೇಲೆ ತರಬೇಕು ಎನ್ನಿಸಿತು. ಬೈಬಲ್ ಅಧ್ಯಯನ ನಡೆಸಿ, "ಮಹಾತ್ಮ ಕ್ರಿಸ್ತ" ನಾಟಕ ರಚಿಸಿದರು. ಕ್ರೈಸ್ತ ಧಾರ್ಮಿಕ ಹಿನ್ನೆಲೆಗೆ ಅನುಗುಣವಾಗಿ ರಂಗಸಜ್ಜಿಕೆ, ವೇಷಭೂಷಣಗಳು ಪಡಕೋಣೆ ರಮಾನಂದರಾಯರ ಮತ್ತು ಶಿವರಾಮ ಕಾರಂತರ ನೆರವಿನಿಂದ ಸಿದ್ಧವಾದವು. ಸತ್ಯ, ಪ್ರೀತಿ, ಅಹಿಂಸೆ, ಕರುಣೆ, ಕ್ಷಮೆಗಳ ಮೂರ್ತಿವಂತ ರೂಪ ಏಸುಕ್ರಿಸ್ತನ ಪಾತ್ರಕ್ಕಾಗಿ ನೀಲಕಂಠರಾವ್ ಗಾಡಗೂಳಿಯವರಿಗೆ ತರಬೇತು ಕೊಟ್ಟರು. ಸಂತೃಪ್ತಿ ಸಿಗುವವರೆಗೆ ನಾಟಕದ ರಂಗ ತಾಲೀಮು ನಡೆಸಿ, ಪ್ರಯೋಗ ರಂಗಕ್ಕೆ ತಂದರು. ಗರುಡರ ಈ ಮಹತ್ವಾಕಾಂಕ್ಷೀ ರಂಗಪ್ರಯೋಗಕ್ಕೆ ಮಂಗಳೂರು ಜನ ಸ್ವಾಗತಿಸಲಿಲ್ಲ. ಆಕ್ಷೇಪಣೆಗಳೂ ಎದುರಾದವು. ಹಣ, ಸಮಯ ಕಂಡಾಬಟ್ಟೆ ಖರ್ಚಾಗಿತ್ತು; ಅದಕ್ಕಿಂತ ಮಿಗಿಲಾಗಿ ಗರುಡರ ಪ್ರಾಮಾಣಿಕತೆಯನ್ನು ಪ್ರಶ್ನಿಸುವಂತಹ ಪರಿಸ್ಥಿತಿ. ನೊಂದುಕೊಂಡರು. ಟೀಕೆ, ಟಿಪ್ಪಣಿಗಳು ಅವರನ್ನು ಖತಿಗೊಳಿಸಿದವು. ಧಾರವಾಡದ 'ರಾಜಹಂಸ' ಎಂಬ ಪತ್ರಿಕೆಯಲ್ಲಿ ಗರುಡರ ವಿರುದ್ಧ ಅಪಸ್ವರದ ಲೇಖನವೊಂದು ಪ್ರಕಟವಾಯಿತು. ಈ ಸಿನಿಮಾ ಪ್ರಪಂಚದ ಬಗ್ಗೆ ಗರುಡರಿಗೇನು ಗೊತ್ತು ? ಅವರೇಕೆ 'ಚಿತ್ರ ನಗರಿ' (ಸ್ಟುಡಿಯೋ) ನಿರ್ಮಾಣದ ಹುಚ್ಚು ಸಾಹಸಕ್ಕೆ ಕೈ ಹಾಕುವರು ? ನಾಟಕದಲ್ಲಿ ಸೋತವರು ('ಮಹಾತ್ಮ ಕ್ರಿಸ್ತ'ದ ರದ್ದತಿ) ಈಗ ಸಿನಿಮಾಕ್ಕೆ ಹೋಗಿ ಗೆಲ್ಲುವರೇ" ಎಂಬಿತ್ಯಾದಿಯಾಗಿ

ಆಕ್ಷೇಪಣೆ, ಅನುಮಾನದ ಮಾತುಗಳು ಪ್ರಕಟವಾದವು. ಅವರ ಉತ್ಸಾಹಕ್ಕೆ ತಣ್ಣೀರೆರಚಿದ ವಿಷಮ ಪ್ರಸಂಗ ಅದು. ಉತ್ತರ ಕರ್ನಾಟಕದ ಅಂದಿನ ಬುದ್ಧಿವಂತ, ಸುಸಂಸ್ಕೃತ ಕಲಾರಸಿಕರನ್ನು ಒಟ್ಟಿಗೆ ಸೇರಿಸಿ, 'ಚಲನಚಿತ್ರ ಪ್ರಪಂಚ' ಕ್ಕೆ ಪರಿವರ್ತನೆಗೊಳಿಸುವ ಅವರ ಸಾಹಸ ಹಾಗೂ ಸಿದ್ಧತೆ ಇದ್ದಕ್ಕಿದ್ದಂತೆಯೇ ನಿಂತುಹೋಯಿತು. ಗರುಡರ ರಂಗ ಪ್ರತಿಭಾ ವಿಸ್ತಾರ ಪಡೆಯುವ ಒಂದು ಅವಕಾಶವು ಜನತೆಯ ಅವಜ್ಞೆ, ಅವಿವೇಕ, ಅಧಿಕ ಪ್ರಸಂಗತನದಿಂದಾಗಿ ತಪ್ಪಿ ಹೋಯಿತು. ರಂಗಭೂಮಿಯ ಮೇಲೆ ಆವರೆಗೆ ಯಶಸ್ವಿಯಾಗಿದ್ದ ತಮ್ಮ ನಾಟಕಗಳನ್ನೆಲ್ಲ "ಸೆಲುಲಾಯ್ಡ್' ಮಾಧ್ಯಮದಲ್ಲಿ ದಾಖಲಿಸಿ, ದೇಶದ ಮೂಲೆ ಮೂಲೆಗೂ ತಲುಪಿಸಬೇಕೆಂಬ ಗರುಡರ ಮಹತ್ತ್ವಾಕಾಂಕ್ಷೆಯ ಟಿಪ್ಪಣಿ, ನಕಾಶೆ, ರೂಪ-ರೇಷೆಗಳು ಜೋಪಡಿ(ಕಾಗದ)ಯಲ್ಲಿಯೇ ಉಳಿದವು.

## ೬ ನಾಟಕಯಾತ್ರೆ

ನಾಟಕ ಸಂಸಾರವನ್ನು ಹೊತ್ತುಕೊಂಡ ಸದಾಶಿವರಾಯರು ತಮ್ಮ ಜೀವನಯಾತ್ರೆಯನ್ನು ನಡೆಸಿದ್ದು ಹೀಗೆ- ಕೀರ್ತಿ-ಅಪಕೀರ್ತಿ, ತುಂಬಿದಕೈ-ಬರಿಗೈ; ಆಶೆ-ನಿರಾಶೆಗಳ ದ್ವಂದ್ವಗಳಲ್ಲಿ ಅವರು ತಮ್ಮ ಕಾಯಕ ಕರ್ಮವನ್ನು “ರಂಗಯಜ್ಞ” ಎಂದೇ ತಿಳಿದಿದ್ದರು. ಮೂವತ್ತು ವರ್ಷಗಳ ಕಾಲದುದ್ದಕ್ಕೂ ‘ರಂಗಯಜ್ಞ'ದ ಯಜಮಾನನಾಗಿ ದತ್ತಾತ್ರೇಯ ನಾಟಕ ಮಂಡಳಿಯೆಂದರೆ, ಒಂದು ಉತ್ತಮ-ಉತ್ಕೃಷ್ಟ ನಾಟ್ಯ ಪರಂಪರೆಯ ಉಜ್ವಲ ಉದಾಹರಣೆ ಎಂಬುದನ್ನು ನಾಡಿಗೆ ಮನಗಾಣಿಸಿದರು.

೧೯೪೨ರ ನಂತರ, ಗರುಡರ ಕಂಪನಿ ಇಳಿಮುಖ ಕಂಡಿತು. ಪ್ರೇಕ್ಷಕ ಸಮುದಾಯದ ಪ್ರತಿಕ್ರಿಯೆಯಲ್ಲಿ ತೀವ್ರ ಬದಲಾವಣೆ ಆಗತೊಡಗಿತ್ತು; ಅಭಿರುಚಿಯಲ್ಲಿ ಮಾರ್ಪಾಡಾಗಿತ್ತು. ನಾಟಕ ಕಲೆಯು ಪ್ರೇಕ್ಷಕನನ್ನು ತಿದ್ದಬೇಕು. ರೂಪಿಸಬೇಕು ಹೊರತು, ಚಂಚಲ ಚಿತ್ತದ ಪ್ರೇಕ್ಷಕನ ಬೇಕು-ಬೇಡಗಳನ್ನು ಅನುಸರಿಸಿ ನಾಟಕ ತನ್ನ ರೂಪ-ಆಕಾರ ಬದಲಾಯಿಸುತ್ತ ಹೋಗಬಾರದು, ಎಂಬುದು ಸದಾಶಿವರಾಯರ ಖಚಿತ ಅಭಿಮತವಾಗಿತ್ತು. ಕಂಪನಿಯ ರೀತಿ, ನೀತಿಗಳಗೆ ವ್ಯತ್ಯಯ ಬರುವುದನ್ನವರು ... ತಡೆಗಟ್ಟಲು ನಿರ್ಧರಿಸಿದ್ದೇನೆಂದರೆ ಗೌರವಾಸ್ಪದ ರೀತಿಯಲ್ಲಿ ಮಂಡಳಿಯ ವಿಸರ್ಜನೆ.

"ನಾಟಕವೆಂದರೆ, ನಮ್ಮ ರೂಪವನ್ನು ನಮಗೆ ತೋರಿಸಿ ಕೊಡುವ ಕನ್ನಡಿ. ಕನ್ನಡಿಯನ್ನು ನೋಡಿ, ನಮ್ಮ ಮುಖವನ್ನು ನಾವು ತಿದ್ದಿಕೊಳ್ಳುವಂತೆ, ನಮ್ಮ ನಾಟಕ ನಮ್ಮ ಮನದ ವಿಕಾರಗಳನ್ನು ನಿವಾರಿಸಿ. ಈ ಬಾಳು ನಿತ್ಯ ಸುಂದರವಾಗುವಂತೆ ತಿದ್ದಿಕೊಳ್ಳಲು ಉದ್ದೀಪಿಸಬೇಕು. ನಾಟಕವು ವಿಲಾಸವಲ್ಲ; ವಿನೋದವಲ್ಲ. ಕೇಳಿ-ನೋಡಿ ಮರೆಯತಕ್ಕದ್ದಲ್ಲ. ಎಂದೆಂದಿಗೂ ಹೃದಯ ಪಟದಲ್ಲಿ ಮೂಡುವ ಚಿತ್ರ.... ಎಂದೆಂದಿಗೂ ಕಿವಿಯಲ್ಲಿ ಝೇಂಕರಿಸುವ ಓಂಕಾರ ನಾದ.....

೧೯೪೮ ರಲ್ಲಿ ಕರ್ನಾಟಕ ನಾಟಕ ಕಲಾ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಸದಾಶಿವರಾಯರು ಆಡಿದ ಈ ಉಕ್ತಿಗಳು ಅವರ ಧ್ಯೆಯ, ಧೋರಣೆ ಹಾಗೂ ಸಾಧನೆ-ಸಿದ್ಧಿಗಳ ಸಾರಾಂಶವೇ ಆಗಿವೆ.

ಗರುಡರು ನಾಡಿನಲ್ಲಿ ಕೀರ್ತಿ, ಪ್ರಸಿದ್ಧಿಯನ್ನು ವಿಪುಲವಾಗಿ ಗಳಿಸಿದಷ್ಟು ಸ್ವಂತಕ್ಕಾಗಿ ಹಣ, ಆಸ್ತಿ ಗಳಿಸಿದವರಲ್ಲ. ಗದಗದಲ್ಲಿ ಒಂದು 'ಬಂಗ್ಲೊ' ಕಟ್ಟಿಸಿದ್ದೊಂದೇ ಅವರ ಆಸ್ತಿ. ಮಕ್ಕಳಿಗಾಗಿ ಅವರು ಉಳಿಸಿದ್ದು ಅದೊಂದು ಸ್ಥಾವರ ಆಸ್ತಿ. ಆದರೆ, ಮಕ್ಕಳು ಕಲಾವಿದರಾಗಿ ಬಾಳುವಂತೆ ಶಿಕ್ಷಣ ಕೊಟ್ಟರು. ಅವರಿಗೆ ತಮ್ಮ ರಂಗಸಂಸ್ಕಾರ ನೀಡಿದರು. ೧೯೫೮ರವರೆಗೆ ಅಂದರೆ ಎಪ್ಪತ್ಮೂರರ ಪ್ರಾಯ ತುಂಬುವ ತನಕ ಗದಗದಲ್ಲಿಯೇ ಉಳಿದು, ತಮ್ಮ ಬಳಿಗೆ ಮಾರ್ಗದರ್ಶನ ಬೇಡಲು ಬರುತ್ತಿದ್ದವರಿಗೆ ಅನುಭವದ ಪಾಠ ಹೇಳಿಕೊಡುತ್ತಿದ್ದರು. ಬದುಕಿನ ಕೊನೆಯ ಹತ್ತು ವರುಷ. "ಪ್ರಬೋಧಾನಂದ" ಹೆಸರಿನಿಂದ ವಾನಪ್ರಸ್ಥ ಜೀವನವನ್ನು ನಡೆಸಿದರು. ಗ್ರಂಥಾಭ್ಯಾಸ ಅವರ ಹವ್ಯಾಸವಾಗಿತ್ತು. ಉತ್ತಮ ವಾಗ್ಮಿಯೂ ಆಗಿದ್ದರಿಂದ ಅನೇಕ ಕಡೆ ಭಾಷಣ ಮಾಡಿ 'ಕಲೆ ಮತ್ತು ಜೀವನ' ಕುರಿತು ತಮ್ಮ ಪರಿಪಕ್ವ ವಿಚಾರಗಳನ್ನು ಬಿತ್ತುತ್ತಿದ್ದರು. "ಉಗ್ರಕಲ್ಯಾಣ" ನಾಟಕ ರಚಿಸಿ, ಅಂತರ್ಜಾತೀಯ ವಿವಾಹದ ಉತ್ತಮ ಪರಿಣಾಮವನ್ನು ಪ್ರತಿಪಾದಿಸಿದ್ದಲ್ಲದೆ, ಗುರುವಿನ ಪಾತ್ರವನ್ನು ನಿರ್ವಹಿಸಿದ್ದು ಅವರ ನಾಟ್ಯಜೀವನದ ಅಂತಿಮ ದಿನಗಳಲ್ಲಿ.

ಇಂಥ ಗರುಡ ಸದಾಶಿವರಾಯರ ಮಗನಾಗಿ ಹುಟ್ಟಿದ ಭಾಗ್ಯಶಾಲಿ ಶ್ರೀಪಾದರಾಯ. ಸದಾಶಿವರಾಯರ ಮಕ್ಕಳಲ್ಲಿ ಇವರೊಬ್ಬರು ಮಾತ್ರ ನಾಟ್ಯಜೀವನವನ್ನು ಆರಂಭದಿಂದಲೇ ಒಪ್ಪಿಕೊಂಡು ಇಂದಿನವರೆಗೂ ವ್ಯವಸಾಯ ಮಾಡುತ್ತ ಬಂದವರು.

## ತೆರೆ - ಎರಡು

### ೧. ಹುಟ್ಟು, ಬಾಲ್ಯ

ಗರುಡ ಸದಾಶಿವರಾಯರ ಎರಡನೆಯ ಗಂಡುಮಗ ಶ್ರೀಪಾದರಾಯರು ಹುಟ್ಟಿದ್ದು ಕುಂದಾಪುರದ ವಿಠ್ಠಲ ಮಂದಿರದಲ್ಲಿ. ೧೯೨೦ರ ನವೆಂಬರ್ ಹದಿನೇಳರಂದು ಭೀಮಾಬಾಯಿ ಹೆತ್ತ ಈ ಮಗುವಿನ ಮುಂದಿನ ೫ ವರ್ಷಗಳ ಕಾಲಾವಧಿಯ "ದತ್ತಾತ್ರೇಯ ನಾಟಕ ಕಂಪನಿ"ಯ ನಾಟ್ಯಯಾತ್ರೆಯ ಸ್ಥಳಗಳಾದ ಮಂಗಳೂರು, ಕುಂದಾಪುರ, ಉಡುಪಿ, ಕಾರ್ಕಳ, ಕೋಟ, ಮೂಲ್ಕಿ, ಕುಮಟಾ, ಹೊನ್ನಾವರ ಮೊದಲಾದ ದಕ್ಷಿಣ-ಉತ್ತರ ಕನ್ನಡ ಜಿಲ್ಲೆಗಳಲ್ಲಿ, ಕಡಲತೀರದ ಉರೂಗಳಲ್ಲಿಯೇ ಕಳೆಯಿತು. ಸದಾಶಿವರಾಯರು ತಮ್ಮ ಕುಟುಂಬ ಸಮೇತವೇ ನಾಟ್ಯ ಯಾತ್ರೆ ಮಾಡುತ್ತಿದ್ದರು. ಗಂಡು ಹಾಗೂ ಹೆಣ್ಣು ಮಕ್ಕಳಿಗೆಲ್ಲ ರಂಗಭೂಮಿಯ ಸಂಸ್ಕಾರ ಸ್ವಾಭಾವಿಕವಾಗಿಯೇ ಆಗುವಂತೆ ನೋಡಿಕೊಂಡಿದ್ದರು. ಹೆಂಡತಿ ಭೀಮಕ್ಕ ಕುಟುಂಬದ ಕ್ಷೇಮ

ಚಿಂತನೆಯ ಜೊತೆಗೆ, ಗರುಡರ ನಾಟಕ ಮಂಡಳಿಯನ್ನು ತಾಯಿಯಂತೆ ಪೋಷಿಸುತ್ತಿದ್ದರು. ಗರುಡರ ಕಂಪನಿ ಸದಾ ಕೌಟುಂಬಿಕ ಸ್ನೇಹ, ಸೌಹಾರ್ದತೆಯನ್ನು ಉಳಿಸಿಕೊಂಡಿರುತ್ತಿತ್ತು. ನಟವರ್ಗಕ್ಕೆಲ್ಲ ಅದೊಂದು ಆತ್ಮೀಯ ಅನುಭವ.

ಒಂದು, ಎರಡು, ಮೂರನೆಯ ತರಗತಿಯ ಶಾಲೆಗೆ ಹೋಗುವ ವೇಳೆಗೆ ಶ್ರೀಪಾದ ಗದುಗಿನಲ್ಲಿರಬೇಕಾಯಿತು. ಪ್ರಾಥಮಿಕ ಶಾಲಾ ಶಿಕ್ಷಣ ಒಂದೇ ಕಡೆಗೆ ಸತತವಾಗಿ ದೊರಕಲಿ ಎಂದು ಮಕ್ಕಳನ್ನು ಆಗ ಗದುಗಿನಲ್ಲಿರುವಂತೆ ವ್ಯವಸ್ಥೆ ಮಾಡಲಾಗಿತ್ತು. ಶ್ರೀಪಾದರ ಪ್ರಾಥಮಿಕ ಶಾಲೆ ಶಾಪೂರಪೇಟೆಯ ಶಂಕರಲಿಂಗನ ಗುಡಿಯಲ್ಲಿತ್ತು. ಒಳ್ಳೆಯ ಮಾಸ್ತರರೇ ಕಲಿಸುತ್ತಿದ್ದುದರಿಂದ ಭಾಷಾಶಿಕ್ಷಣ ಸೊಗಸಾಗಿ ಸಿಕ್ಕಿತು. ಒಂದರಿಂದ ಏಳನೆಯ ಇಯತ್ತೆಯ(ತರಗತಿ)ವರೆಗಿನ ಕಲಿಕೆ ಅದೇ ಶಾಲೆಯಲ್ಲಿ ನಡೆಯಿತು. ಹಾಗೆ ಶಾಲೆಯಲ್ಲಿ 'ಹೆಸರು' ಇದ್ದದ್ದಷ್ಟೇ ನಿಜ. ಪ್ರತಿ ತರಗತಿಯನ್ನು ವರ್ಷವಿಡೀ ಹಾಜರಾಗಿ ಅಭ್ಯಾಸ ಮಾಡುವ ಪರಿಸ್ಥಿತಿಯಿರಲಿಲ್ಲ. ನಾಟಕ ಕಂಪನಿಯ ಜತೆಗೆ ಬೇರೆ ಬೇರೆ ಊರಿಗೆ ಹೋಗಬೇಕಾಗುತ್ತಿತ್ತು. ಹೀಗಾಗಿ 'ಮುಲ್ಕೀ' ಪರೀಕ್ಷೆಗೆ ಕೂಡಲು ಅನುಮತಿ ಸಿಗಲಿಲ್ಲ. ಶ್ರೀಪಾದರ ಶಿಕ್ಷಣ ಹೈಸ್ಕೂಲು ಮಟ್ಟಕ್ಕೆ ಏರಲೇ ಇಲ್ಲ. ಗದಗದಲ್ಲಿದ್ದಾಗ, ಪಂ.ಜಿ.ಬಿ. ಜೋಶಿಯವರ ಹಿರಿಯ ಮಗ, ಈಗಿನ ಸುಪ್ರಸಿದ್ಧ ಹಿಂದೂಸ್ತಾನೀ ಗಾಯಕ ಭೀಮಸೇನ ಜೋಶಿ. ಶ್ರೀಪಾದರ 'ಕ್ಲಾಸ್‌ಮೇಟ್' ಆಗಿದ್ದುದು ಒಂದು ಅಪರೂಪದ ಯೋಗಾಯೋಗ. ಭೀಮಸೇನರದು ಗಾಯನ ಕಲೆಯ ಕಡೆಗಿನ ಒಲವು: ಶ್ರೀಪಾದರರು ಅಭಿನಯದ ಕಡೆಗೆ ಎಳೆತನದಲ್ಲಿಯೇ ಭೀಮಣ್ಣನು ಹಾಡಿಗಾಗಿ ಹೇಗೆ ಹಾತೊರೆಯುತ್ತಿದ್ದನೆಂಬುದರ ಸವಿನೆನಪನ್ನು ಶ್ರೀಪಾದರು ಈಗಲೂ ನೆನೆಸಿಕೊಳ್ಳುವುದುಂಟು.

## ೧. ಹುಡುಗಾಟಕ್ಕೆ ನಾಟಕ

ಗದಗಿನ ಮನೆಯಲ್ಲಿ ಅಕ್ಕ, ಅಣ್ಣ, ತಮ್ಮಂದಿರ ಜೊತೆಗೆ ಶಾಲಾ ದಿನಗಳನ್ನು ಕಳೆಯುವಾಗ, ಶ್ರೀಪಾದರ ಪಾಲಿಗೆ ಬಿಡುವಿನ ಸಮಯವೆಂದರೆ, 'ನಾಟಕ'ದ ಆಟವನ್ನು ಮನದಣಿಯೇ ಆಡುವುದು. ಹಾಲ್‌ನಲ್ಲಿ ಚಾದರ, ಜಮಖಾನೆಗಳಿಂದ ಪರದೆ ಕಟ್ಟಿ ಒಂದರ್ಧ ಭಾಗ ಸ್ಟೇಜು; ಇನ್ನರ್ಧ 'ಪ್ರೇಕ್ಷಾಗೃಹ'. ಕಂಪನಿ ಮನೆಯಲ್ಲಿ ನಾಟಕದ ತಯಾರಿ, ಮೇಕಪ್ಪು, ನಟನೆಯ ಚಟುವಟಿಕೆಗಳು ಹೇಗೆ ಜರುಗುತ್ತಿದ್ದವೋ ಅದರ ಯಥಾವತ್ ಅನುಕರಣೆ. ನಾಟಕಗಳನ್ನು ನೋಡಿ ನೋಡಿ ಮುಖ್ಯ ಪಾತ್ರಗಳ ಮಾತುಗಳು

ಬಾಯಿಪಾಠ ಬರುತ್ತಿದ್ದವು. ಹಾಡುಗಳು ನಾಲಗೆಯ ಮೇಲೆ ನಲಿಯುತ್ತಿದ್ದವು. ನಟನೆ ಸಲೀಸಾಗಿ ಹೊರಹೊಮ್ಮುತ್ತಿತ್ತು. ಕಾಲಹರಣಕ್ಕಾಗಿ ಹುಡುಗಾಟಿಕೆಯಿಂದ ಆರಂಭವಾದ ನಾಟಕ, ಒಮ್ಮೊಮ್ಮೆ ಗಂಭೀರವಾಗಿಯೇ ಮುಂದುವರಿಯುತಿತ್ತು. ಓಣಿಯ ವಾರಿಗೆಯ ಹುಡುಗ-ಹುಡುಗಿಯರೇ ಪ್ರೇಕ್ಷಕರು. ನಾಟಕ ನೋಡಲು ಈ ಬಾಲ ತಂಡದವರು ಆ ಹುಡುಗರಿಂದ ಪಡೆಯುತ್ತಿದ್ದ ಪ್ರವೇಶ ಶುಲ್ಕವೆಂದರೆ, ಒಂದು ಪೇಣಿ (ಬಳಪ) ತುಂಡು ! ಅಭಿನಯದ ಹುಚ್ಚು ಶ್ರೀಪಾದರಲ್ಲಿ ಬೆಳೆದ ರೀತಿ ಹಾಗಿತ್ತು.

## ೩. ಪಾತ್ರ ಪ್ರವೇಶ

ದತ್ತಾತ್ರೇಯ ಕಂಪನಿ ಹತ್ತು ವರ್ಷಗಳ ಬಿಡುವಿನ ನಂತರ ೧೯೩೦ ರಲ್ಲಿ ಕಲಬುರ್ಗಿಗೆ ಮರುಪ್ರವೇಶ ಮಾಡಿದ ಸಂದರ್ಭ, ಶ್ರೀಪಾದರ ರಂಗಜೀವನಕ್ಕೆ ನೆನಪಿಡುವ ಸನ್ನಿವೇಶ. “ಚವತೀ ಚಂದ್ರ" (ಶಮಂತಕೋಪಾಖ್ಯಾನ) ನಾಟಕದ ಎರಡನೆಯ ದೃಶ್ಯದಲ್ಲಿ ದೇವಲೋಕದ ಗಾನಲೋಲ ನಾರದನ ಪ್ರವೇಶವಾಗಬೇಕು. ಆ ದಿನ ಅನಿರೀಕ್ಷಿತವಾಗಿ ಪಾತ್ರ ಬದಲಾವಣೆಯ ಪ್ರಸಂಗ ಒದಗಿತು. ನಾಟಕದಲ್ಲಿ ಸದಾಶಿವರಾಯರದು ಶ್ರೀಕೃಷ್ಣನ ಪಾತ್ರ. ಆ ಸಂಜೆಯ ಹೊತ್ತು ಮೈತುಂಬ ಜ್ವರ. ನಾರದನ ಪಾತ್ರಧಾರಿಯಾಗಿದ್ದ ನೀಲಕಂಠ ಬುವಾರಿಗೆ ಕೃಷ್ಣನ ಪಾತ್ರ ತೆಗೆದುಕೊಳ್ಳಲು ಯಜಮಾನರಿಂದ ನಿರ್ದೇಶನ. ನಾರದನ ಪಾತ್ರ ನಿರ್ವಹಿಸುವವರಾರು ? ಈಗಾಗಲೇ ಮನೆಯಲ್ಲಿ ‘ಹುಡುಗಾಟಿಕೆ' ಗಾಗಿ ನಾರದನಾಗಿ “ನಾರಾಯಣವರ ಗುಣಗಾನ ನಿರುತ ಮಾಡು ರಸನೇ” ಎಂದು ಹಾಡುತ್ತಿದ್ದ ಶ್ರೀಪಾದನೇ ನಾರದನಾಗಿ ಬರಲಿ ಎಂದರು ಗರುಡರು. ನಾಟಕದ ಸಂಗೀತ ನಿರ್ದೇಶಕರಾಗಿದ್ದ ಗೋವಿಂದರಾವ ಭಾವೆ (ಈತ, ಶ್ರೀಮತಿ ಶಾಮಲಾ ಭಾವೆಯವರ ತಂದೆ)ಯವರಿಗೆ ಶ್ರೀಪಾದನನ್ನು ತೋರಿಸಿ, “ಇಂವಾ ನಾರದನ ಪಾರ್ಟ ಮಾಡ್ತೀನಂತ ಭಾಳ ಹಾರಾಡತಾನ. ನೋಡೋಣ, ಏನ್ಮಾಡತಾನ ! ನೀವ ಅಂವಗ ಥೊಲೋ ತಯಾರ್ ಮಾಡಿ ಸ್ಟೇಜಿಗೆ ಬಿಡ್ರಿ” ಎಂದರು. ಭಾವೆಯವರು ಹಾಡನ್ನು ಕಲಿಸಿ, ಹಾಡಿಸಿ ಕೇಳಿಸಿಕೊಂಡರು. ನಾರದ ಪಾತ್ರದ ಸಂಭಾಷಣೆಯಂತೂ ಶ್ರೀಪಾದನಿಗೆ ಕಂಠಪಾಠವಾಗಿತ್ತು. ನೂರಾರು ಪ್ರೇಕ್ಷಕರ ಎದುರು ಹತ್ತರ ಹರಯದ ಈ ‘ಬಾಲ ನಾರದ'ನ ನಟನೆ ಮೆಚ್ಚುಗೆಯ ಚಪ್ಪಾಳೆ ಗಿಟ್ಟಿಸಿತು. ಆ ದಿನದಿಂದ ನಾರದನ ಪಾತ್ರ ಶ್ರೀಪಾದನಿಗೇ ಕಾಯಂ ಆಯಿತು. ನಾರಾಯಣನ ಕೃಪೆ ಬಾಲ ನಟನಲ್ಲಿ ವಿಶ್ವಾಸ, ಧೈರ್ಯ ತುಂಬಿತು. ಮುಂದೆ ‘ಕಂಪನಿ' ಮುಂಬೈಗೆ ಹೋದಾಗ, ನಾರದನ ಪಾತ್ರ ತಪ್ಪಿತು. ಏಕೆಂದರೆ ಗಾಯನ ಗಂಧರ್ವ ನೀಲಕಂಠ ಬುವಾ ಗಾಡಗೋಳಿಯವರನ್ನು ಅಲಕ್ಷ್ಯ ಮಾಡುವಂತಿರಲಿಲ್ಲ. ಮುಂಬೈ ಕ್ಯಾಂಪು ಯಾವಾಗ ಮುಗಿದೀತೋ, ಕರ್ನಾಟಕಕ್ಕೆ ಬಂದು ಮತ್ತೆ ನಾರದನಾಗಿ ಹಾಡುವ ಪಾಳಿ ತನಗೆ ಯಾವಾಗ ದಕ್ಕೀತೋ ಎಂದು ಶ್ರೀಪಾದ ಚಾತಕ ಪಕ್ಷಿಯಂತೆ ಕಾದದ್ದಾಯಿತು. ನಿರೀಕ್ಷಿಸಿದಂತೆ. ಮುಂದಿನ ಒಂದೆರಡು ವರುಷಗಳ ಕಾಲ ನಾರದನಾಗಿ ಗಾನಲೋಲುಪತೆಯಲ್ಲಿ ಮೆರೆಯುವ ಅವಕಾಶ ಯಥೇಚ್ಛ ಸಿಕ್ಕಿತು.

ಮುಖದಲ್ಲಿ ಮೀಸೆ ಮೊಳೆಯುವ ತನಕ ಶ್ರೀಪಾದರಿಗೆ ಸಿಕ್ಕದ್ದು ಬಾಲ ಪಾತ್ರಗಳು ಹಾಗೂ ಕೆಲವು ಸಲ ಸ್ತ್ರೀ ಪಾತ್ರಗಳು. "ಸಂಪೂರ್ಣ ಕೃಷ್ಣಲೀಲೆ"ಯಲ್ಲಿ ಬಾಲಕೃಷ್ಣ ಹಾಗೂ ಸುದಾಮನ ಮಗ ಜಯಂತ: "ಮಹಾತ್ಮಾ ಕಬೀರ್" ದಲ್ಲಿ ಕಬೀರನ ಮಗ ಕಮಾಲ್. "ವಿಷಮ ವಿವಾಹ"ದಲ್ಲಿ ಸುವಿಚಾರನ ಪಾತ್ರ ಅವರ ಆಗಿನ ಪ್ರಮುಖ ನಟನೆಗಳು. ನಾಟಕದಲ್ಲಿ ಪಾತ್ರ ಯಾವಾಗಾದರೂ ಬರಲಿ, ಆರಂಭಕ್ಕೇ ಮೇಕಪ್‌ನೊಂದಿಗೆ ಕಾಯುತ್ತ ನಾಟಕದ ಪ್ರತಿ ದೃಶ್ಯ ನೋಡುತ್ತ ಕುಳಿತಿರುವುದು ಶ್ರೀಪಾದನ ಮಾಮೂಲಿ ರೂಢಿಯಾಗಿತ್ತು. ಪ್ರತಿ ನಾಟಕದ ಪ್ರತಿ ದೃಶ್ಯ, ಮಾತುಗಳು ಗಮನದಲ್ಲಿರುತ್ತಿದ್ದವು. ಆಕಸ್ಮಿಕ ಪ್ರಸಂಗ ಒದಗಿದರೆ, ಯಾವುದೇ ಪಾತ್ರದ ಮೇಕಪ್ ಮಾಡಿಕೊಂಡು ನಟಿಸಿ ಬಿಡುವ ಸಿದ್ಧತೆ ಒಳಗಿರುತ್ತಿತ್ತು.

## ೪. ಗಾಂಧೀ ದರ್ಶನ

೧೯೩೦-೩೧ರ ಒಂದು ರಾತ್ರಿ. "ಸತ್ಯ ಸಂಕಲ್ಪ" ನಾಟಕ ನಡೆಯುತ್ತಿತ್ತು. ಕುಂದಾಪುರದ ಕ್ಯಾಂಪು, ಮಹಾತ್ಮಾ ಗಾಂಧೀಜಿ ಕರ್ನಾಟಕದ ಪ್ರವಾಸಕ್ಕೆ ಬಂದಿದ್ದವರು ಆ ದಿನ ಕುಂದಾಪುರಕ್ಕೆ ಭೇಟ್ಟಿ ಕೊಟ್ಟಿದ್ದರು. ಕಾಂಗ್ರೆಸ್ ಕಾರ್ಯಕರ್ತರಿಂದ 'ಸತ್ಯ ಸಂಕಲ್ಪ'ದ ಬಗ್ಗೆ ಕೇಳಿಕೊಂಡ ಗಾಂಧೀಜಿ, ನಾಟಕ ನೋಡುವ ಆಸೆ ವ್ಯಕ್ತಪಡಿಸಿದರು. ಸದಾಶಿವರಾಯರು ಗಾಂಧೀ ಭಕ್ತರು. ಮಹಾತ್ಮರನ್ನು ಕರೆಸಿಕೊಂಡರು. ಗಾಂಧೀಜಿ ನಾಟಕದ ಕೆಲವು ದೃಶ್ಯಗಳನ್ನು ಮಾತ್ರ ನೋಡಿ ಎದ್ದು ಹೊರ ಹೊರಟಾಗ, ಎಂಟರ ಹರಯದ ಶ್ರೀಪಾದನನ್ನು ಮೇಕಪ್‌ನಲ್ಲಿ ನೋಡಿ, ತಲೆ ಮೇಲೆ ಪ್ರೀತಿಯಿಂದ ಕೈಯಾಡಿಸಿ. "ಅಚ್ಛಾ ಕಾಮ್ ಕರತಾ ಹೈ ಲಡಕಾ" ಎಂದು ಮುಗುಲ್ನಕ್ಕರು. ಗಾಂಧೀ ಎಂದರೇನು, ಯಾರು, ಎಂಥವರು ಎಂಬುದು ಆ ಬಾಲಕನಿಗೇನು ಗೊತ್ತು ! ಆ ಕ್ಷಣಗಳಲ್ಲಿ ಶ್ರೀಪಾದನಿಗೆ ಏನೂ ಅನ್ನಿಸದಿದ್ದುದು ಸರಿಯೆ; ಆದರೆ, ಅಂದಿನ ಆ ಘಟನೆಯನ್ನು ಈಗ ನೆನಪಿಸಿಕೊಂಡಾಗ "ಧನ್ಯತೆ"ಯ ಭಾವ ಅವರಲ್ಲಿ ಉಕ್ಕುತ್ತದೆ.

## ೫. ಸ್ತ್ರೀ ಪಾತ್ರಗಳಲ್ಲಿ

೧೯೩೫ರ ಮುಂಚೆ, ವ್ಯವಸಾಯ ನಾಟಕ ಮಂಡಳಿಗಳಲ್ಲಿ ಸ್ತ್ರೀಪಾತ್ರಗಳನ್ನು ಹೆಣ್ಣು ಮುಖದ ಗಂಡಸರೇ ನಿರ್ವಹಿಸುವುದು ಮಾಮೂಲಾಗಿತ್ತು. ಉತ್ತರ ಕರ್ನಾಟಕದ ಮೊಟ್ಟ ಮೊದಲ ನಾಟಕ ಕಂಪನಿಯ ಒಡೆಯರಾದ ಕೊಣ್ಣೂರಿನ ಶಿವಮೂರ್ತಿಸ್ವಾಮಿ ಕಣಬರಗಿಮಠರು ೧೯೧೮-೨೦ ರಲ್ಲೇ ಸ್ತ್ರೀಯರನ್ನು ನಾಟಕರಂಗಕ್ಕೆ ಕರೆತಂದು ಕ್ರಾಂತಿಕಾರಕ ಸಾಧನೆ ಮಾಡಿದ್ದರಾದರೂ ಮುಂದೆ ಎರಡು ದಶಕಗಳ ಕಾಲ ಕಳೆದ ಮೇಲೂ ಅದು ವ್ಯಾಪಕಗೊಂಡಿರಲಿಲ್ಲ. ಸದಾಶಿವರಾಯರು ತಮ್ಮ ಮನೆಯ ಹೆಣ್ಣು ಮಕ್ಕಳಿಗೆ ಆಗಾಗ ಪಾತ್ರ ಕೊಡುತ್ತಿದ್ದರೇ ಹೊರತು, ಮುಖ್ಯ ಪಾತ್ರಗಳಿಗಾಗಿ ಯಾವ ಸ್ತ್ರೀಯನ್ನೂ ನೇಮಿಸಿಕೊಳ್ಳಲಿಲ್ಲ. ಧ್ವನಿ ಒಡೆಯದ, ಮುಖದ ಮೇಲೆ ಗಡ್ಡ ಮೀಸೆ ಮೊಳೆಯದ ಹುಡುಗರಿಗೇ ಸ್ತ್ರೀಪಾತ್ರ ನಿರ್ವಹಿಸಲು ತರಬೇತಿ

ಕೊಟ್ಟಿದ್ದರು. ಮುಂದೆ, ಹಮ್ಮಿಗಿ ನೀಲಕಂಠಪ್ಪನವರೊಬ್ಬರು ಬಹುಕಾಲ ದತ್ತಾತ್ರೇಯ ಕಂಪನಿಯ ಸ್ತ್ರೀಪಾತ್ರಕ್ಕೆ ಮೀಸಲಾಗಿ ಉಳಿದಿದ್ದರು. ಹನ್ನೆರಡರ ಹರಯದ ಶ್ರೀಪಾದನಿಗೆ ಮೊದಲ ಸಲ ನಾಟಕದ ಪ್ರಮುಖ ಪಾತ್ರ ಸಿಕ್ಕದ್ದೇ ಸ್ತ್ರೀರೂಪದಲ್ಲಿ.

'ಮಾಯಾ ಬಜಾರ' ನಾಟಕದ ಕಥಾನಾಯಕಿ ವತ್ಸಲಾ; "ಕೃಷ್ಣ ಲೀಲಾ"ದ ಸಖಿ ಪಾತ್ರ; ಚವತೀ ಚಂದ್ರ"ದ ಸತ್ಯಭಾಮೆ ಪಾತ್ರ ಶ್ರೀಪಾದರಿಗೆ ಆಪ್ಯಾಯಮಾನವಾಗಿದ್ದವು. ಮೃದು ಮಧುರ ಕಂಠದಿಂದ ಮಾತಾಡುವ, ಹಾಡುವ ಅವಕಾಶಗಳಿಂದಾಗಿ ಪ್ರೇಕ್ಷಕರ ಹೃನ್ಮನ ತಣಿಸುವ ಅಭಿನಯ ತೋರಿಸಿ ಯಜಮಾನರ ಮೆಚ್ಚಿಗೆಗೂ ಪಾತ್ರರಾದರು.

## ೬. ಪ್ರಬುದ್ಧತೆಯ ಹೆಜ್ಜೆ

ಹನ್ನೆರಡರ ಹರಯದಲ್ಲಿ, ಮಂಗಳೂರಿನಲ್ಲಿ ಕ್ಯಾಂಪು ನಡೆದಾಗ ಶ್ರೀಪಾದನ ಧ್ವನಿ ಒಡೆಯಿತು. ಅಂದಿನಿಂದ ಸ್ತ್ರೀ (ರಾಣೀ ಪಾತ್ರ) ಪಾತ್ರದಿಂದ ವಂಚನೆ. ಕೆಲವು ತಿಂಗಳ ಕಾಲ ನಾಟಕದ ಫಲಕ ಬರೆಯುವುದು; ಊರ ತುಂಬ ಫಲಕ ಪ್ರದರ್ಶನ ಮಾಡುವುದು ಹತ್ತಿತು. - ಗರುಡರಿಗೆ 'ನಟವರ್ಗ'ದ ಎಲ್ಲರೂ ಒಂದೇ. ಸ್ವಂತ ಮಗನಾದರೇನು, ಕಂಪನಿಗೆ ಅನಿವಾರ್ಯವಿರುವ ಯಾವ ಕೆಲಸವನ್ನೂ ಆತ ನಿರ್ವಹಿಸಬೇಕು. ಶ್ರೀಪಾದ ಅದನ್ನೆಲ್ಲ ನಿರ್ವಹಿಸಿ ತಂದೆಯ ಪ್ರೀತಿ, ವಿಶ್ವಾಸ ಹೆಚ್ಚಿಸಿಕೊಂಡರು. ಧ್ವನಿ ಒಡೆದ ನಂತರ ಮಾತಿನ ಸರಳ ಉಚ್ಚಾರಣೆ, ಧ್ವನಿ ನಿಯಂತ್ರಣ ಮಾಡಲು ಗರುಡರು ಮಗನನ್ನು ಸಂಜೆಯ ಹೊತ್ತು ಕಾರಿನಲ್ಲಿ ಕೂಡಿಸಿಕೊಂಡು ಸಮುದ್ರ ತೀರಕ್ಕೆ ಹೋಗುತ್ತಿದ್ದರು. ನಿರ್ಜನವಾದ ಆ ಪ್ರದೇಶದಲ್ಲಿ ದನಿ ಎತ್ತರಿಸಿ (ತಾರಕಕ್ಕೇರಿಸಿ), ಕೂಗಿ, ಇಳಿಸಿ ಮಾತನ್ನು ಹೇಳಬೇಕು. ಸ್ವರದ ಮೇಲೆ ಹಿಡಿತ ಬರುವ ತನಕ ಅಭ್ಯಾಸ ಮುಂದುವರಿಯುತ್ತಿತ್ತು. ರಂಗದ ಮೇಲೆ ಧ್ವನಿವರ್ಧಕದ ಬಳಕೆ ಆಗಿನ್ನೂ ಪ್ರಚಲಿತವಿರಲಿಲ್ಲ. ಒಂದು ಪಾತ್ರ ತನ್ನ ಮಾತನ್ನು ಗಟ್ಟಿಯಾಗಿ, ಸ್ಪಷ್ಟವಾಗಿ ಹದ ತಪ್ಪದಂತೆ ಆಡಬೇಕು: ಪ್ರೇಕ್ಷಾಗೃಹದ ಯಾವುದೇ ಮೂಲೆಗೂ ಮಾತು ನಿಚ್ಚಳವಾಗಿ ಕೇಳಬೇಕು. ಅದೊಂದು ಬಗೆಯ ಯೋಗ ಸಾಧನೆಯೇ. ಗರುಡರು ಶ್ರೀಪಾದರನ್ನು ಹಾಗೆ ತಿದ್ದಿದರು; ತೀಡಿದರು. ಪುರುಷ ಪಾತ್ರದ ಹಾವಭಾವಗಳು ಸ್ವರ ಸಾಂಗತ್ಯದಲ್ಲಿ ಖಚಿತವಾಗಿ ವ್ಯಕ್ತವಾಗುವಂತೆ ತರಬೇತಿ ಕೊಟ್ಟರು. ಸಂಗೀತ ಮಾಸ್ತರ ಭಾವೆಯವರು ರಂಗ ಗೀತೆಗಳ ಹಾಡಿಕೆಯನ್ನು ಮಾತ್ರ ಕಲಿಸಲಿಲ್ಲ; ಹಿಂದುಸ್ತಾನೀ ರಾಗಗಳ ವಿಸ್ತೃತ ಪರಿಚಯ ಮಾಡಿಕೊಟ್ಟರು. ವಿಠ್ಠಲಸಾ ಕಬಾಡಿ(ಗದುಗಿನ ಬೆಟಗೇರಿ)ಯವರು 'ಹಾರ್ಮೋನಿಯಂ' ಮಾಸ್ತರರಾಗಿ ಕಲಿಸಿದ್ದು ಬಹಳ. ವಿಠ್ಠಲಸಾ ಅವರಲ್ಲಿ ಪ್ರೀತಿ, ಕಳಕಳಿ ತುಂಬಿರುತ್ತಿತ್ತು. ರಾಗ ಸಂಯೋಜನೆಯಲ್ಲಿ ಬೇರೆ ಬೇರೆ ಪ್ರಯೋಗ ಮಾಡಿ ಕಲಿಸುವುದು ಅವರ ಪದ್ಧತಿಯಾಗಿತ್ತು. ಶ್ರೀಪಾದ ಒಳ್ಳೆಯ ಹಾಡುಗಾರನಾಗಿ ಆನಂತರ ಮುಂದೆ ಬಂದಿರಲಿಕ್ಕಿಲ್ಲ; ಆದರೆ ಸಂಗೀತ ಕಲೆಯ ಅನೇಕ

ಅಂಶಗಳನ್ನು ಅರಿತದ್ದೇ ಅಂದಿನ ಗಳಿಕೆ. ಅದು ಇಂದಿಗೂ ಸ್ಮೃತಿಯಲ್ಲಿ ಉಳಿದು ಬಂದುದನ್ನು ಶ್ರೀಪಾದರಾಯರು ಕೃತಜ್ಞತೆಯಿಂದ ನೆನೆಯುತ್ತಾರೆ. ನೂರಾರು ರಂಗಗೀತೆಗಳು ಈಗಲೂ ಅವರ ಕಂಠದಲ್ಲಿ ರೆಕಾರ್ಡ್ ಆಗಿ ಉಳಿದಿವೆ. ಕೇಳಿಸಿಕೊಳ್ಳುವವರದೇ ಅಭಾವ ಇಂದಿನ ಕಾಲದಲ್ಲಿ.

೧೯೨೪-೧೯೩೮ರ ಕಾಲವೆಂದರೆ, ದತ್ತಾತ್ರೇಯ ನಾಟಕ ಮಂಡಳಿಯ ಉಚ್ಛ್ರಾಯ ಕಾಲ. ನಾಡಿನಾದ್ಯಂತ ಕಂಪನಿ ದಿಗ್ವಿಜಯ ಸಾಧಿಸಿದಂತೆ ಸಂಚರಿಸಿತು. ಉಳಿದೆಲ್ಲ ಕಂಪನಿಗಳಲ್ಲಿ ಸ್ತ್ರೀಪಾತ್ರಗಳಿಗೆ ಸ್ತ್ರೀಯರು ಬರತೊಡಗಿದ್ದರು. ಹೆಂಗಸು ರಂಗಕ್ಕೆ ಬರಬಾರದೆನ್ನುವ ಕಟು ನಿಯಮವನ್ನು ಗರುಡರು ಹಾಕಿಕೊಂಡಿದ್ದರಿಂದ, ಹಮ್ಮಿಗಿ ನೀಲಕಂಠಪ್ಪ, ಜಾಲವಾದಿ ಗುರಪ್ಪ, ಮೊರಬದ ಶಿವಪ್ಪ - ಈ ಮೂವರು 'ನಟಿಯ' ರಾಗಿ ಹೆಸರು ಮಾಡಿದರು. ಮರಾಠೀ 'ಬಾಲಗಂಧರ್ವ'ರ ಸಮಿ-ಸಮೀಪಕ್ಕೆ ಹೋಗುವಂತಹ ನಟನೆ, ರೂಪಗಳನ್ನು ನಿರ್ವಹಿಸುವುದರ ಜೊತೆಗೆ ಕಂಪನಿಯ ಆಗುಹೋಗುಗಳತ್ತ ಲಕ್ಷ್ಯವಹಿಸಬೇಕಾಯಿತು.

## ೭. ಕಾರಂತರಿಂದ ರಂಗಪರಿಕರ ಶಿಕ್ಷಣ

ದತ್ತಾತ್ರೇಯ ನಾಟಕ ಮಂಡಳಿಗೆ ಮೇಲಿಂದ ಮೇಲೆ ಪ್ರೋತ್ಸಾಹ ಕೊಟ್ಟ ಪ್ರದೇಶವೆಂದರೆ ದಕ್ಷಿಣ ಕನ್ನಡ ಜಿಲ್ಲೆ. ಶ್ರೀಪಾದರಾವ ಹುಟ್ಟಿ, ರಂಗಾನುಭವ ಪಡೆದದ್ದು ದಕ್ಷಿಣ ಕನ್ನಡ ಜಿಲ್ಲೆಯ ಮಲೆಘಟ್ಟ ಸೋಪಾನ ಕೆಲಪಟ್ಟಿಯಲ್ಲಿ ಕಡಲ ಕುದಿತದ ತೀರಗಳಲ್ಲಿ. ನವೋದಿತ ಸಾಹಿತಿಯಾಗಿ, ನಾಟ್ಯಾಭಿವ್ಯಕ್ತಿಯ ಕಲಾವಿದನಾಗಿ ಬರೆಹ ಹಾಗೂ ಅಭಿನಯ ಲೋಕದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಶಿವರಾಮ ಕಾರಂತರು ಗರುಡ ಕಂಪನಿಯ ಜೊತೆ ನಿಕಟ ಸ್ನೇಹ, ಸಂಪರ್ಕ ಇರಿಸಿಕೊಂಡಿದ್ದರು. ಸದಾಶಿವರಾಯರ ಜತೆ ನಾಟ್ಯಕಲೆ, ನಾಟಕ ವಸ್ತುವಿನ್ಯಾಸದ ಬಗ್ಗೆ ವಿಪುಲ ಚರ್ಚೆ ಮಾಡುತ್ತಿದ್ದರು. ಹೊಸ ಹೊಸ ಆಲೋಚನೆಗಳನ್ನು ಮಥಿಸುತ್ತಿದ್ದರು. ೧೫-೧೬ ವಯಸ್ಸಿನ ಶ್ರೀಪಾದರಿಗೆ ಕಾರಂತರ ಮಾತುಗಾರಿಕೆಯತ್ತ ಒಲವು ಮೂಡಿತ್ತು. ಕಾರಂತರು ಗರುಡರ "ಮಹಾತ್ಮಾ ಏಸುಕ್ರಿಸ್ತ" ನಾಟಕದ ಸಿದ್ಧತೆಯಲ್ಲಿ ಸಹಕರಿಸಲು ನಿತ್ಯ ಕಂಪನಿ ಮನೆಗೆ ಬರುತ್ತಿದ್ದರು. ಕಾರಂತರ ಲೇಖಕ ಮಿತ್ರ ಪಡುಕೋಣೆ ರಮಾನಂದರಾಯರೂ ಗರುಡರ ನಾಟಕಗಳ ಬಗ್ಗೆ ಆಸ್ಥೆ, ಗೌರವ ತಳೆದಿದ್ದರು. ''ಏಸುಕ್ರಿಸ್ತ'' ನಾಟಕದ ವೇಷಭೂಷಣದ ಅಲಂಕಾರಕ್ಕೆ ರಮಾನಂದರಾಯರು ಹೊಣೆ ಹೊತ್ತರೆ, ಮುಖ ವಿನ್ಯಾಸ ಅಭಿನಯ ನಿರ್ದೇಶನದ ಜವಾಬ್ದಾರಿ ಕಾರಂತರದಾಗಿತ್ತು. ಮಂಗಳೂರು ಕ್ಯಾಂಪಿನ ಆ ೪೫ ದಿನಗಳ ರಂಗತಾಲೀಮು ವಿಶಿಷ್ಟವಾಗಿದ್ದಿತು. ಶ್ರೀಪಾದರಾಯ ಮತ್ತು ಓರಗೆಯ ಗೆಳೆಯ ನಟ ಆರ್.ಡಿ.ಕಾಮತ್ ಇಬ್ಬರೂ ಕಾರಂತರಲ್ಲಿ 'ಶಿಷ್ಯತ್ವ'ವನ್ನು ವಹಿಸಿಕೊಂಡು ಪಡೆದ ಅಂದಿನ ಅನುಭವಗಳು ಚಿರಸ್ಮರಣೀಯವಾಗಿವೆ. ಪಾತ್ರಗಳ ಮೈಬಣ್ಣಕ್ಕೆ ಸೂಕ್ತವಾದ ವರ್ಣಛಾಯೆ ಎಂತಹದಿರಬೇಕು: ಪ್ರತಿ ಪಾತ್ರದ ಕುಲ, ಪ್ರದೇಶ, ಸಂಸ್ಕೃತಿಗಳ ಸ್ಪಷ್ಟ ಅಭ್ಯಾಸ ಮೇಕಪ್‌ಮನ್‌ನಿಗೆ ಇರಬೇಕಾದುದರ ಅಗತ್ಯವನ್ನು ಕಾರಂತರು

ಕಲಿಸಿದರು. ಅವರು ಪಾಶ್ಚಾತ್ಯರಂಗ ಪ್ರಸಾಧನ ಕಲೆಯನ್ನು ಅಧ್ಯಯನ ಮಾಡಿದ್ದರು. "ಏಸುಕ್ರಿಸ್ತ'' ನಾಟಕದಲ್ಲಿ ಕಾಲ ಹಾಗೂ ಪ್ರದೇಶಗಳ ಸ್ವಾಭಾವಿಕ ವಾತಾವರಣ ಸೃಷ್ಟಿಯಾಗುವುದಕ್ಕೆ ರಂಗಸಜ್ಜಿಕೆಯನ್ನು ಕಾರಂತರು ಕಲ್ಪಿಸಿದ್ದರು. ಆದರೆ ಕಾರಣಾಂತರಗಳಿಂದ 'ಮಹಾತ್ಮ ಏಸುಕ್ರಿಸ್ತ' ರಂಗದ ಮೇಲೆ ಬೆಳಕನ್ನೇ ಕಾಣಲಿಲ್ಲ. ಬಹುದೊಡ್ಡ ಕಲಾತ್ಮಕ ಪರಿಶ್ರಮವೊಂದು ವ್ಯರ್ಥವಾದುದರ ನೋವನ್ನು ಗರುಡರು, ಕಾರಂತರು, ಪಡುಕೋಣೆಯವರು ಅನುಭವಿಸಿದರು. ಆದರೆ ಕಾರಂತರಿಂದ ಪಡೆದ ರಂಗ ವಿನ್ಯಾಸದ ತರಬೇತಿ, ಶ್ರೀಪಾದರಾವ ಮತ್ತು ಕಾಮತರ ಪಾಲಿಗೆ ಮುಂದೆ ಲಾಭಕರ ಆಸ್ತಿಯೇ ಆಗಿ ಉಳಿಯಿತು.

### ೮. ಗರುಡರ ರಂಗಶಾಲೆ

ಸದಾಶಿವರಾಯರು 'ದತ್ತಾತ್ರೇಯ ನಾಟಕ ಮಂಡಳಿ'ಯನ್ನು ಒಂದು ರಂಗಶಾಲೆಯಂತೆಯೇ ರೂಪಿಸಿದ್ದರು. ನಟ-ನಟಿಯರಿಗಾಗಿ ಅಭಿನಯ ಪರಂಪರೆಗಳನ್ನು ಬೆಳೆಸಬೇಕೆಂಬುದು ಅವರ ಧ್ಯೆಯವಾಗಿತ್ತು. ಔಪಚಾರಿಕ ಶಿಕ್ಷಣ(ಶಾಲಾಶಿಕ್ಷಣ)ವನ್ನು ಕೂಡಾ ಪಡೆಯದೆ ಎಳೆ ಪ್ರಾಯದಲ್ಲಿ ಮನೆ ತೊರೆದು ಬಂದು, ನಾಟಕದ ಹುಚ್ಚಿಗಾಗಿ ಕಂಪನಿ ಸೇರುವ ಹುಡುಗರಿಗೆ, ಅಕ್ಷರಾಭ್ಯಾಸದ ಜೊತೆಗೆ ರಂಗ ಶಿಕ್ಷಣ ಕೊಟ್ಟು ನಟ ವ್ಯಕ್ತಿತ್ವವನ್ನು ರೂಪಿಸಬೇಕೆಂದು ಶ್ರಮಿಸುತ್ತಿದ್ದರು.

ಗರುಡರ ಈ "ರಂಗಶಾಲೆ"ಯಲ್ಲಿ ಪ್ರತಿದಿನ ಎರಡು ಹೊತ್ತು ತರಗತಿಗಳು. ವಾರಕ್ಕೆ ಮೂರು, ನಾಲ್ಕು ದಿನ ಮಾತ್ರ ರಾತ್ರಿ ಹೊತ್ತು ನಾಟಕದ ಸಾರ್ವಜನಿಕ ಪ್ರದರ್ಶನ. ಉಳಿದ ಬಿಡುವಿನ ಹೊತ್ತಿನಲ್ಲಿ ನಟವರ್ಗ ಶಿಕ್ಷಣದಲ್ಲಿ ತೊಡಗಬೇಕು. ಮನೆಯಲ್ಲಿ ತಾಯಿ ತನ್ನ ಮಕ್ಕಳಿಗೆ ಹಾಲು ಕುಡಿಸಿ ಪ್ರೀತಿಯಿಂದ ಓದು-ಬರೆಹಕ್ಕೆ ತೊಡಗಿಸುವ ಹಾಗೆ, ಗರುಡರ ಕಂಪನಿ ಮನೆಯಲ್ಲಿ ಪಾಠಗಳು ಆತ್ಮೀಯವಾಗಿ, ಹಾರ್ದಿಕವಾಗಿ ನಡೆಯುತ್ತಿದ್ದವು.

ಮೊದಲ ಹಂತದಲ್ಲಿ ಸಂಗೀತದ ಸಾಮೂಹಿಕ ಪಾಠ; ನಂತರ ಮಾತುಗಳ ಅಭ್ಯಾಸ. ರಂಗ ತಾಲೀಮನ್ನು ಯಾರೂ ತಪ್ಪಿಸುವಂತಿಲ್ಲ. ಪಾತ್ರವಿಲ್ಲದವರು ಚೋಪಡಿ(ಕಿರುಪುಸ್ತಕ)ಯಲ್ಲಿ ಸಂಭಾಷಣೆಗಳನ್ನು ಬರೆದಿಟ್ಟ ಸುಂದರ ಪ್ರತಿಗಳನ್ನು ಸಿದ್ಧಪಡಿಸಬೇಕು. ತಿಳಿಯದಿದ್ದ ಸಂಗತಿ, ಸನ್ನಿವೇಶಗಳ ಬಗ್ಗೆ ನಟರು ಪ್ರಶ್ನೆ ಕೇಳಿದರೆ ಗರುಡರು ಉತ್ತರಿಸುತ್ತಿದ್ದರು; ವಿವರಿಸುತ್ತಿದ್ದರು. ಈ ಪುರಾಣ, ಇತಿಹಾಸದ ಕಥಾವಸ್ತುವನ್ನು ವಿಶ್ಲೇಷಿಸಿ, ಮೂಲ ಕತೆಯಲ್ಲಿಯ ಯಾವ ಒಂದು ಅಂಶದ ಮೇಲೆ ಯಾಕೆ ಒತ್ತು (stress) ಕೊಡಲಾಗಿದೆ ಎಂಬುದನ್ನು ತಿಳಿಸುತ್ತಿದ್ದರು. ನಟನಿಗೆ ನಾಟಕದ ಒಟ್ಟು ಶಿಲ್ಪದ ಕಲ್ಪನೆಯಿರಬೇಕಲ್ಲದೆ, ತನ್ನ ಪಾತ್ರದ ''ವ್ಯಕ್ತಿತ್ವ'' ವಿಶೇಷತೆಯ ಸ್ಪಷ್ಟ ಅರಿವಿರಬೇಕೆಂಬುದಕ್ಕಾಗಿ ಈ ವಿಧಾನ ಅನುಸರಿಸುತ್ತಿದ್ದರು.

ಮಾತನ್ನು ''ಬಾಯಿಪಾಠ'' ಮಾಡಿ ಒಪ್ಪಿಸುವುದಾಗಲಿ, ಗ್ರಾಂಥಿಕ ಶೈಲಿಯಲ್ಲಿ (ಕೃತಕವಾಗಿ ನಿರೂಪಿಸುವುದಾಗಲಿ ಗರುಡರಿಗೆ ಸಮ್ಮತವಿರಲಿಲ್ಲ. ಮಾತಿನ ಅರ್ಥ, ಭಾವಗಳ ನಿಚ್ಚಳ ಅರಿವು ನಟನಿಗಿದ್ದು, ತನ್ನ ವೈಶಿಷ್ಟ್ಯವನ್ನು ಅದಕ್ಕೆ ಬೆರೆಸಿ ಸಹಜ ಅಭಿವ್ಯಕ್ತಿ ತೋರುವಂತೆ ನಟನನ್ನು ಅಣಿಗೊಳಿಸುತ್ತಿದ್ದರು. ನಾಟಕದ ಯಾವುದೋ ಒಂದು ಮಾತನ್ನು ಆರಿಸಿಕೊಂಡು ನಟನ ಎದುರು ನಿಲ್ಲುವುದು; ಅದಕ್ಕೆ ಎದುರಾದ ಮಾತನ್ನು ನಟ, ಹಾವಭಾವ ಸಮೇತ ಹೇಳಬೇಕು. ಆ ನಂತರವೇ ಒಂದೊಂದು ಸನ್ನಿವೇಶದ ತಾಲೀಮು. ಒಮ್ಮೆ ಗರುಡರು ಶ್ರೀಪಾದರ ಎದುರು ಅನಿರೀಕ್ಷಿತವಾಗಿ ಬಂದು ನಿಂತು,

"ನೋಡು, ಈ (ಭರತನ) ಮಾತಿನಲ್ಲಿ ಮಿಶ್ರ ಅಭಿನಯ
ಬರ್ತದ, ತಿಳಕೋ. ಮಾತಾಡು. ಹ್ಞೂಂ" ಎಂದರು.

ಭರತ ಪಾತ್ರಧಾರಿ ಶ್ರೀಪಾದ : ಏನು ರಾಜದಂಡ ಬಲದಿಂದ ಪ್ರಜಾಸಹಾನುಭೂತಿ
ಸಂಪಾದಿಸಬೇಕೆನ್ನುವಿಯಾ ! ಈ ರಾಜನೀತಿಯನ್ನು
ನೀನೆಲ್ಲಿಂದ ಕಲ್ತುಕೊಂಡೆ ! ಮಾರಿ, (ಕೈಕೆಯಿಗೆ) ದಂಡ
ನೀತಿಯಿಂದ ಮನ ಬಂದಂತೆ ನಡೆದುಕೊಳ್ಳಲು ಪ್ರಜರು
ನಿನ್ನ ಪಾಲಿಗೆ ಕುರಿಗಳಾದರಲ್ಲ! (ತಿರಸ್ಕಾರ ಭಾವ ಪ್ರದರ್ಶನ)

ಭರತನಲ್ಲಿ ಸಿಟ್ಟು ಮತ್ತು ತಿರಸ್ಕಾರ ಭಾವಗಳೆರಡೂ ಇಲ್ಲಿ ಮಿಳಿತವಾಗಿವೆ. ಇವೇ ಮಿಶ್ರಭಾವ. ಈ ಮಾತಿಗೆದುರಾಗಿ ಕೈಕೆಯಿಯ ಮಾತನ್ನು ಭರತ ಸಂಪೂರ್ಣ ಅನುಭವಿಸಿ, ತನ್ನ ಮತ್ತೊಂದು ಮಾತು ಹೇಳಬೇಕು.

ಸಂಭಾಷಣೆಯ ಅಭಿವ್ಯಕ್ತಿಯಲ್ಲಿ ಇನ್ನೊಂದು ಗಡುಚಾದ ಶೈಲಿ ಇದೆ. ಅದು ತ್ರಿಶ್ರ: ಮೂರು ಭಾವಗಳ ಮಿಶ್ರಣ : ಮಾತಿನ ಸ್ಫೋಟ ಸಂಭವಿಸುವ ರೀತಿಯಲ್ಲಿ.

ಭರತನಿಗೆ ಕೈಕೆಯಿಯ ಮೇಲೆ ಕೋಪವಿದೆ: ಅಣ್ಣ ರಾಮನ ಬಗ್ಗೆ ಭಕ್ತಿ (ಪ್ರೀತಿ ಇದೆ), ತಂದೆಯ ಸಾವಿನ ಬಗ್ಗೆ ದುಃಖವಿದೆ. ಆಗ ಹೊರಬರುವ ಮಾತು :

"ಸಿಂಹಾಸನದ ಸ್ವಾಮಿಯಾದ ರಾಮಭದ್ರನನ್ನು ಅಡವೀ ಪಾಲು ಮಾಡಿ
(ದುಃಖ): ಪತಿಯನ್ನು ಮರಣಕ್ಕೆ ಈಡು ಮಾಡಿದ ಕೋಪ: ನಿನ್ನ ಮೇಲೆ

## ಪ್ರಜಾ ಜನರ ಪ್ರೀತಿ ಉಳಿದೀತೇ ?

ಇಲ್ಲಿ ದುಃಖವೇ ಸ್ಥಾಯೀ ಭಾವ. ಕೋಪ ಹಾಗೂ ಪ್ರೀತಿಗಳು ಸಂಚಾರೀ ಭಾವಗಳು. ಮಾತಿನ ಉಚ್ಚಾರ, ದನಿಯ ಏರಿಳಿತ, ಮುಖದ ಮೇಲಿನ ಭಾವ ಪ್ರದರ್ಶನ ಇವುಗಳು ಏಕಕಾಲಕ್ಕೆ ಪರಿಣಾಮಕಾರಿಯಾಗಿ ವ್ಯಕ್ತವಾಗುವವರೆಗೆ ಗರುಡರು ತಿದ್ದಿ, ತೀಡಿ ಶ್ರಮಿಸುತ್ತಿದ್ದರು.

ಗರುಡರ ಅಭಿನಯ ತರಬೇತಿಯ ಇನ್ನೊಂದು ವಿಧಾನ ಹೀಗಿದ್ದಿತು :

ಕೋಣೆಯ ಒಂದು ಗೋಡೆಗೆ ಆಳೆತ್ತರದ ಕನ್ನಡಿ. ಅದರೆದುರಿನ ಕುರ್ಚಿಯ ಮೇಲೆ ನಟ. ಅವನೆದುರಿಗೆ ಗುರು ಗರುಡರು. ಭಾವ ಭರಿತ ಅಭಿನಯದೊಂದಿಗೆ ನಟ ಮಾತು ಹೇಳಬೇಕು: ಕನ್ನಡಿಯೊಳಗೆ ಕಣ್ಣು ಹಾಕಬೇಕು. ಗರುಡರ ನೋಟ ನಟನ ಮೇಲೆ, ತಪ್ಪು. ಕೊರತೆ ಆಯಿತೋ ತತ್‌ಕ್ಷಣ ಅವನನ್ನು ಸ್ವಚ್ಛಗೊಳಿಸಿ, ಭಾವಧ್ವನಿ ಪ್ರಕಟಿಸಿ 'ಹೀಗೆ ಅನ್ನು' ಎನ್ನಬೇಕು ಅವರು. ನಟ ಅನುಸರಿಸಬೇಕು. ಹೀಗೆ, ಎರಡು ಮೂರು ಸಲ ಬೆವರಿಳಿಯುವತನಕ ಈ ವಿಧಾನದಿಂದ ಕಲಿಸುವಾಗ ಗರುಡರಿಗೆ ಬೇಸರ, ಸಿಟ್ಟು, ಅಸಹನೆ ಎಂದೂ ಉಂಟಾದುದಿಲ್ಲ. ''ನಟನಿಗಾಗಿ ತಲೆ ಒಡೆದುಕೊಳ್ಳುತ್ತಿದ್ದೇನೆ' ಎಂದು ಯಾವತ್ತೂ ಅವರು ಗೊಣಗಿದುದಿಲ್ಲ. ಅಭಿನಯದಲ್ಲಿ ಭಾವಾಭಿವ್ಯಕ್ತಿ ಬರುವುದಕ್ಕಾಗಿ ಗರುಡರು ನಟನನ್ನು ''ಶಿಕ್ಷಿ'' ಸುವುದಕ್ಕೆ ಅವರದೇ ಒಂದು ತಿಳಿವಳಿಕೆ ಕಾರಣವಾಗಿತ್ತು. “ಮೈಗೆ ತ್ರಾಸಾದಾಗಲೇ ಕೆಲವರಲ್ಲಿಯ ಸುಪ್ತ ಪ್ರತಿಭೆ-ಶಕ್ತಿ ಜಾಗೃತವಾಗಿ ಪ್ರಜ್ಞಾ ಸ್ತರಕ್ಕೆ ಬರುವುದು....."

ಬೆಟದೂರ ಶಂಕ್ರಯ್ಯನವರಿಗೆ 'ಸತ್ಯ ಸಂಕಲ್ಪ'ದಲ್ಲಿ ಶಾರದೆಯ ಪಾತ್ರ. ವಿಧವೆಯಾದ ಶಾರದೆ ಗರ್ಭಿಣಿಯಾಗಿದ್ದು ತಿಳಿದಾಗ ಆಕೆಯ ಪ್ರಿಯಕರ ಭರ್ತ್ಸನೆಯ ಮಾತಾಡುತ್ತಾನೆ. ಕೋಪ, ಶೋಕಗಳಿಂದ ಆರ್ತಳಾದ ಶಾರದೆಯ ಮಾತಿನಲ್ಲಿ ಶಂಕ್ರಯ್ಯನವರಿಗೆ ಭಾವಾವೇಶ ತುಂಬಲಿಕ್ಕೇ ಆಗಲೊಲ್ಲದು.

"ನನ್ನನ್ನು ಹೀಗೆ ತಿರಸ್ಕರಿಸಬೇಡವೋ” ಎಂದು ಆರಂಭವಾಗುವ ಮಾತಿನ ಶುರುವಿಗೇ ದುಃಖ ಹೊಮ್ಮಬೇಕು; ಆದರದು ನೀರಸವಾಗುತ್ತಿದೆ. ಗರುಡರು ಪದೇ ಪದೇ ತಿದ್ದಿದರು: ತೀಡಿದರು. ಪರಿಣಾಮ ಶೂನ್ಯ. ಒಂದು ಹಂತಕ್ಕೆ ತಲುಪಿದ ಗರುಡರು ಮೌನ ವಹಿಸಿ ಕುಳಿತುಬಿಟ್ಟರು. ಇದ್ದಕ್ಕಿದ್ದಂತೆಯೇ ಮೌನ ಮುರಿದು, ಪ್ರಶಾಂತ ಸ್ವರದಲ್ಲಿ “ಈಗ ಆಡು" ಎಂದರು. ಶಂಕ್ರಯ್ಯನನ್ನು ದಿಟ್ಟಿಸುತ್ತ, ಶಂಕ್ರಯ್ಯನಲ್ಲಿ ಮಾರ್ಪಾಡೇ ಇಲ್ಲ. ದಡಕ್ಕನೇ ಎದ್ದು ಕಪಾಳಕ್ಕೊಂದು ಬಲವಾದ ಏಟು ಬಿಗಿದರು. ಶಂಕ್ರಯ್ಯನ ಕಣ್ಣಲ್ಲಿ ಪಳಕ್ಕನೇ ನೀರು, "ಹಾಂ. ಈಗ ಆ ಮಾತು ಅನ್ನು, ಅನ್ನು" - ಗರುಡರು ಆಗ್ರಹಿಸುತ್ತಿದ್ದಾರೆ. ಶಂಕ್ರಯ್ಯನ ಬಾಯಿಯಿಂದ ದುಃಖಾವೇಶ ಸಹಿತ ಹೊರಬಂದ ಮಾತು ಕೇಳಿ 'ಭೇಷ್' ಅನ್ನಬೇಕಾಯಿತು ಗರುಡರು.

## ೬. ಸಂಗೀತ ಶಾಲೆ

ಗರುಡರ ನಾಟ್ಯಶಾಲೆ, ಕನ್ನಡ ರಂಗಭೂಮಿಗೆ ಪ್ರತಿಭಾವಂತರೆಂದು ಹೆಸರು ಪಡೆದ ಹಲವರನ್ನು ತಯಾರಿಸಿದ್ದು ಸ್ಮರಣೀಯ ಸಾಧನೆ. ಚೆನ್ನಬಸಯ್ಯ ಕರ್ಲವಾಡ (ಈಗ ಗೋಕರ್ಣದಲ್ಲಿ ವಿಶ್ರಾಂತ ಜೀವನ): ಅವರ ತಮ್ಮ ದಿ. ಸಿದ್ದಯ್ಯ: ಕೆಲಗೇರಿಯ ಗುರುಪಾದಯ್ಯ: ಮೂಡಬಿದ್ರಿಯ ರಾಮಕೃಷ್ಣ, ಆರ್.ಡಿ.ಕಾಮತ್, ವಿಠ್ಠಲರಾವ ಅಣ್ಣಿಗೇರಿ (ಈಗ ಹರಿಹರದಲ್ಲಿ): ಕಿನ್ನಾಳದ ನಿಂಗಪ್ಪ ಗುನ್ನಾಳ; ಶ್ರೀಪಾದರಾಯರ ಅಣ್ಣ ದತ್ತಾತ್ರೇಯ (ಈಗ ಬೆಂಗಳೂರಲ್ಲಿ): ಹಮ್ಮಿಗಿ ನೀಲಕಂಠಪ್ಪ: ಡಿ.ಎನ್.ಒಡೆಯರ್ ("ಸತ್ಯನಾರಾಯಣ ವ್ರತ" ಖ್ಯಾತಿಯವರು. ಈಗ ಜಮಖಂಡಿಯಲ್ಲಿದ್ದಾರೆ); ಡಿ.ದುರ್ಗಾದಾಸ (ಈಗ ಮರಿಯಮ್ಮನಹಳ್ಳಿಯಲ್ಲಿ ವಿಶ್ರಾಂತ ಜೀವನ). ಈ ಪಟ್ಟಿ ಇನ್ನೂ ಉದ್ದವಿದೆ. ಇವರೆಲ್ಲ ದತ್ತಾತ್ರೇಯ ನಾಟಕ ಮಂಡಳಿಗಳಿಗೆ ಸೇರಿ ತಮ್ಮ ನಟನಾ ವೈಶಿಷ್ಟ್ಯವನ್ನು ದಶಕಗಳ ಕಾಲ ಪ್ರೇಕ್ಷಕರಿಗೆ ತೋರಿಸಿದರು.

ಅಭಿನಯಕ್ಕೆ ಕೊಟ್ಟಷ್ಟೇ ಮಹತ್ತ್ವವನ್ನು ಗರುಡರು ಸಂಗೀತ ಶಿಕ್ಷಣಕ್ಕೂ ಕೊಟ್ಟಿದ್ದರು. ಗೋವಿಂದರಾವ ಭಾವೆ. ದತ್ತಾತ್ರೇಯ ನಾಟಕ ಮಂಡಳಿಯ ಸಂಗೀತ ನಿರ್ದೆಶಕರಾಗಿ ಒಳ್ಳೇ ತಳಹದಿ ಹಾಕಿದರು. ಆಮೇಲೆ ವಿಠ್ಠಲಸಾ ಕಬಾಡಿಯವರು ಮುಂದುವರಿಸಿದರು. ಕಿನ್ನಾಳ ಶಿವರುದ್ರಪ್ಪ ಹಾಡುಗಳನ್ನು ಹೇಳುವುದರಲ್ಲಿ ಎತ್ತಿದ ಕೈ.

ಭಾವೆ ಮಾಸ್ತರರು ಶ್ರೀಪಾದರಿಗೆ ತಬಲಾ ವಾದನದ ಮೂಲಕ ತಾಳಜ್ಞಾನವನ್ನು ಮನದಟ್ಟು ಮಾಡಿಕೊಟ್ಟರು. ಏಕತಾಲ್ ಮೊದಲು ಮಾಡಿಕೊಂಡು ಝುಮ್ರಾ, ಟಪ್ಪಾ. ಸವಾರ್ -ಹೀಗೆ ೧೬ ತಾಳಗಳನ್ನು (ಮಾತ್ರಾ ಲೆಕ್ಕದಲ್ಲಿ) ಕಲಿಸಿದರು. ಈ ತಾಳಗಳೆಲ್ಲವನ್ನೂ ನೃತ್ಯಕ್ಕೆ ಅಳವಡಿಸಿ ಹೇಳಿಕೊಟ್ಟಿದ್ದರು...

"ಹೀಗಾಗಿ ಇವತ್ತಿಗೂ ಹಾಡು ಮತ್ತು ನೃತ್ಯಕ್ಕೆ ಸೊಗಸಾಗಿ ತಾಳವನ್ನು ಸಂಯೋಜಿಸಬಲ್ಲೆ. ಅಂದಿನ ನಾಟಕಗಳಲ್ಲಿ ನಾನೇ ಹಾಡಬೇಕಾಗಿದ್ದ ಪ್ರಸಂಗಗಳಲ್ಲಿ ಈ ತಾಳಜ್ಞಾನ ಬಂದೋಬಸ್ತ ರೀತಿಯಲ್ಲಿ ನೆರವಾಯಿತು. ಉದಾಹರಣೆಗೆ "ವಿಷಮ ವಿವಾಹ"ದಲ್ಲಿ ಕಮಲಾಕರನಾಗಿ ನಾನು

ಆಹಾ ! ಏನೇ ಕುಮಾರನೊಳು ನೀನು

ವಿನೋದವನು ತೋರುವಿ

ಎಂದು ಶುರುವಾಗುವ ಹಾಡನ್ನು ಶ್ರುತಿಯೊಳಗೆ ಹಿಡಿದು ಭಾವಪೂರ್ಣವಾಗಿ ವಿಸ್ತರಿಸಿ ಹಾಡುತ್ತಿದ್ದೆ." ಶ್ರೀಪಾದರಾಯರು ನೆನಪಿಸಿಕೊಂಡು ಹೇಳುವ ಮಾತಿದು.

ಹುಡುಗರಿಗೆ ಸಂಗೀತದ ಪಾಠ ಬೆಳಗಿನ ನಾಲ್ಕೂವರೆಗೇ ಆರಂಭವಾಗುತ್ತಿತ್ತು. ಎರಡು ತಾಸು ಸಾಧನೆ ನಡೆಯುತ್ತಿತ್ತು. ನಾಟಕದ ಪ್ರದರ್ಶನ ರಾತ್ರಿ ಒಂಬತ್ತೂವರೆಯಿಂದ ಬೆಳಗಿನ ಎರಡೂವರೆ, ಮೂರರ ತನಕ ಇರುತ್ತಿತ್ತು. ನಾಟಕದ 'ನಾಂದೀ ಪದ್ಯ'ವನ್ನು ಸಾಮೂಹಿಕವಾಗಿ ಹಾಡಿದ ನಂತರ ಹುಡುಗರು ಮಲಗಲು ಹೋಗಲೇಬೇಕು. ಏಕೆಂದರೆ ಬೆಳಿಗ್ಗೆ ನಾಲ್ಕಕ್ಕೆ ಏಳುವುದು ಕಡ್ಡಾಯ. ಸಂಗೀತ ಪಾಠವಿಲ್ಲದ ಹುಡುಗರು ನಾಟಕವನ್ನಿಡೀ ನೋಡುತ್ತ ಕುಳಿತುಕೊಳ್ಳುತ್ತಿದ್ದರು. ವೀಕ್ಷಣೆಯಿಂದಲೆ ಕಲಿಯುವುದು ಸಾಕಷ್ಟಿತ್ತು. ನಾಟಕ ಇಲ್ಲದ ದಿನಗಳಲ್ಲಿ ರಂಗ ತಾಲೀಮು ಬೆಳಿಗ್ಗೆ ಒಂಬತ್ತೂವರೆಗೆ ಆರಂಭವಾದಾಗ ಪ್ರತಿಯೊಬ್ಬರೂ ಅದಕ್ಕೆ ಹಾಜರಿರುವುದು ಕಡ್ಡಾಯ. ನಟವರ್ಗದ ಯಾರಿಗೇ ಆಗಲಿ ಬೇರೆ ವ್ಯಸನ, ಹವ್ಯಾಸ, ಚಟ ಅಥವಾ ಆಲಸ್ಯಕ್ಕೆ ಅವಕಾಶವಿರಬಾರದೆಂಬುದು ಗರುಡರ ಇಂಗಿತವಾಗಿದ್ದಿತು.

ಹಾಗಾದರೆ ನಟವರ್ಗಕ್ಕೆ ರಂಜನೆಯ ಅವಕಾಶವೇ ಇದ್ದಿರಲಿಲ್ಲವೆಂದಲ್ಲ; ಮನರಂಜನೆಯ ಕಾರ್ಯಕ್ರಮ ಕೂಡ ನಾಟಕ ಶಿಕ್ಷಣಕ್ಕೆ ಪೂರಕವಾಗೇ ಇರುತ್ತಿತ್ತು. ನಾಟಕ ಇಲ್ಲದ ದಿನ, ಸಂಜೆ ಆರರಿಂದ ಎಂಟರವರೆಗೆ, ನಾಟಕದಲ್ಲಿ ಯಾವ ಪಾತ್ರವೂ ಇಲ್ಲದವರು, ಇದ್ದ ನಟರ ಮುಂದೆ ಆ ನಾಟಕದ ಆಯ್ದ ದೃಶ್ಯಗಳನ್ನು ಅಭಿನಯಿಸಿ ತೋರಿಸುವುದು. ಇದು ನಟರ ಅನುಕರಣೆಯ ಅಂಶದಿಂದಲೂ ತುಂಬಿರುತ್ತಿತ್ತು; ಅಣಕ(ಫಾರ್ಸ್)ವೂ ಆಗಿರುತ್ತಿತ್ತು. ಅಣಕಾಟವನ್ನು ಹಿರಿಯರು ಕ್ರೀಡಾ ಮನೋಭಾವದಿಂದಲೇ ಸ್ವೀಕರಿಸುತ್ತಿದ್ದರು. ಗರುಡರು ಆಗ, ಈ ಹುಡುಗಾಟಿಕೆಯಲ್ಲಿ ಕಾಣಿಸುತ್ತಿದ್ದ ಲೋಪದೋಷಗಳನ್ನು ಎತ್ತಿತೋರಿ ತಿದ್ದುಪಡಿ ಸೂಚಿಸುತ್ತಿದ್ದರು...

## ೧೦. ತಂದೆ-ಮಗ

"ವಿಷಮ ವಿವಾಹ" ದತ್ತಾತ್ರೇಯ ಕಂಪನಿಯ ಬಹುಶ್ರುತ ನಾಟಕ. ಕೌಟುಂಬಿಕ ಅಥವಾ ಸಾಮಾಜಿಕವೆನ್ನಬಹುದಾದ ಕಥಾವಸ್ತು ಇಲ್ಲಿದ್ದರೂ ಗರುಡರು ಇದನ್ನು ಐತಿಹಾಸಿಕ ವೇಷಭೂಷಣಗಳಲ್ಲಿ ಪ್ರದರ್ಶಿಸುತ್ತಿದ್ದರು. ಅಶೋಕ (ತಂದೆ) ವೃದ್ಧಾಪ್ಯದಲ್ಲಿ ಶರಾವತಿ(ತರುಣಿ)ಯನ್ನು ಮದುವೆಯಾಗಿ ವಿಷಮ ದಾಂಪತ್ಯದ ಪರಿಸ್ಥಿತಿ ತಂದೊಡ್ಡಿದ್ದಾನೆ. ಶರಾವತಿಗೆ ಅಶೋಕನ ಯುವ ಪುತ್ರ ಕಮಲಾಕರನ ಮೇಲೆ ಒಲವಿನ ಸೆಳೆತ. 'ತಾಯಿ'ಯಾಗಿದ್ದವಳ ಪ್ರೇಮವನ್ನು ಸ್ವೀಕರಿಸುವ, ನಿರಾಕರಿಸುವ ದ್ವಂದ್ವಕ್ಕೆ ಬಲಿಯಾಗುವ ಕಮಲಾಕರನ ಪಾತ್ರವು ನಿರ್ವಹಣೆಗೆ ಗಡುಚಿನದು. ಸದಾಶಿವರಾಯರು ಅಶೋಕನಾಗಿ; ಶ್ರೀಪಾದರು

ಕಮಲಾಕರನಾಗಿ ಅಭಿನಯಿಸುವ ಅಪರೂಪದ - ಅವಕಾಶ ೧೯೩೮ ರಲ್ಲಿ ಒದಗಿಬಂದಿತು. ಶ್ರೀಪಾದರಾಯರು ಆ ಪ್ರಸಂಗ ನೆನಪಿಸಿಕೊಂಡುದು ಹೀಗೆ:

"ತಂದೆಯ ಕೋಪೋದ್ವೇಗದ ಎದುರು ಮಗನಾಗಿ ನಾನು ನಿರ್ವಹಿಸಬೇಕಾದ್ದುದು ಶಾಂತ, ಸಹನೆಯ ಪಾತ್ರ. ಯುವಕನಲ್ಲಿ ಸಹನೆಯ ಗುಣ ಸ್ವಾಭಾವಿಕವೆ ? ಆದರೆ ಅದನ್ನು ನಟಿಸುವ ಆಹ್ವಾನ ಸ್ವೀಕರಿಸಿದೆ. ತಂದೆ ಅಶೋಕನ ಬಗ್ಗೆ ಕಮಲಾಕರನಿಗೆ ಬೇಸರ, ಜಿಗುಪ್ಸೆಯ ಭಾವನೆ. ಆದರೆ ಇದನ್ನು ತೋರ್ಪಡಿಸುವಂತಿಲ್ಲ. ಮುದಿ ತಂದೆಯ ಕೈ ಹಿಡಿದು ಆಂತರಿಕವಾಗಿ ಮಿಡಿಯುತ್ತಿದ್ದ ಶರಾವತಿಯ ಬಗ್ಗೆ ಕಮಲಾಕರನಿಗೆ ಅನುಕಂಪ, ಸಹಾನುಭೂತಿ. ಈ ಭಾವ ಸಂಕೀರ್ಣ ನಟನೆಯನ್ನು ತುಂಬ ಕಷ್ಟಪಟ್ಟು ನಿರ್ವಹಿಸುತ್ತಿದ್ದೆ. ಯಜಮಾನರ ತರಬೇತಿಯ ಫಲ ಬಳಸುವ ಅವಕಾಶ ನನಗೆ ಸಿಕ್ಕಿತ್ತು. 'ವಿಷಮ ವಿವಾಹ'ದ ಪ್ರತಿ ಪ್ರಯೋಗಕ್ಕೂ ಯಜಮಾನರು ಪಾರ್ಶ್ವ(ವಿಂಗ್)ದಲ್ಲಿ ಕುಳಿತು, ನನ್ನ ನಟನೆಯನ್ನು ತದೇಕ ದೃಷ್ಟಿಯಿಂದ ನೋಡುವರು. ಆ ನಿಷ್ಠುರ-ನೇರ ನೋಟಕ್ಕೆ ಪ್ರತಿಕ್ರಿಯೆಯಾಗಿ ನಾನು ಮಾತು ಹೇಳಬೇಕು. ಹೇಳುತ್ತಿದ್ದೆ."

ಒಂದು ಭಾವ ಸನ್ನಿವೇಶವನ್ನು ರಂಗದ ಮೇಲೆ ನಟರು ಸೃಷ್ಟಿಸಿದಾಗ, ಅದಕ್ಕೆ ಪೂರಕವಾಗಿ ಇನ್ನೊಂದು ಸನ್ನಿವೇಶವನ್ನು ಮುಂದುವರಿಸಿ, ಒಟ್ಟು ವಸ್ತುವಿನ ಆಶಯವನ್ನು ರಸಾನುಭವಕ್ಕೆ ಎತ್ತರಿಸಬೇಕೆಂಬುದು ಗರುಡರ ಉದ್ದೇಶವಿರುತ್ತಿತ್ತು. ಶ್ರೀಪಾದರಾವ ಅದನ್ನು ಅರಿತು, ಕಲಿಸಿದ್ದನ್ನು ಧ್ಯಾನಿಸಿ, ಮನನ ಮಾಡಿ ಸಾಧಿಸಿ ತೋರಿಸುತ್ತಿದ್ದರು.

"ಪಾದುಕಾ ಪಟ್ಟಾಭಿಷೇಕ"ದ ಭರತನ ಪಾತ್ರ ಮತ್ತು ಆ "ಚವತೀ ಚಂದ್ರ"ನ ಕೃಷ್ಣನ ಪಾತ್ರಗಳು ಶ್ರೀಪಾದರಾಯರ ಪಾಲಿಗೆ ಬಂದದ್ದು ಕಮಲಾಕರನ ಪಾತ್ರದಲ್ಲಿ ತೃಪ್ತಿಕರ ಕೆಲಸ ಮಾಡಿದ್ದಕ್ಕಾಗಿ. ಗರುಡರ ನಾಟಕದಲ್ಲಿ ಸಾಹಿತ್ಯಾಭಿವ್ಯಕ್ತಿಯೇ ಪ್ರಧಾನವಾಗಿದ್ದುದರಿಂದ ಭಾಷೆಯ ಉಚ್ಚಾರಣೆ ಮತ್ತು ಶೈಲಿಯ ವೈಶಿಷ್ಟ್ಯವನ್ನು ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕಾಗುತ್ತಿತ್ತು. "ಭಾವಾಭಿವ್ಯಕ್ತಿಯ ಆ ತರಬೇತಿಯ ಲಾಭ ನನಗೆಷ್ಟಾಗಿದೆಯೆಂದರೆ, ಈಗಲೂ ಕೂಡಾ ನವರಸಾಭಿವ್ಯಕ್ತಿಯ ಒಂದು ಸ್ವತಂತ್ರ ಪ್ರದರ್ಶನವನ್ನು ಹತ್ತು ನಿಮಿಷಗಳ ಕ್ಲುಪ್ತ ಕಾಲಾವಧಿಯಲ್ಲಿ ನಾನು ಕೊಡಬಲ್ಲೆ." ಎನ್ನುತ್ತಾರೆ ಶ್ರೀಪಾದರಾವ.

'ದತ್ತಾತ್ರೇಯ ಕಂಪನಿ'ಯಲ್ಲಿ ಎಂ.ಶಾಂತಕುಮಾರ ಹಾಸ್ಯ ಪಾತ್ರಕ್ಕೆ ಮೀಸಲಾಗಿದ್ದ ನಟರು. ೧೯೪೦ರ ನಂತರ ಶ್ರೀಪಾದರಾಯರು ಪೋಷಕ ಹಾಗೂ ಹಾಸ್ಯ ಪಾತ್ರಗಳನ್ನು ನಿರ್ವಹಿಸಬೇಕಾಯಿತು. ಶಾಂತಕುಮಾರ- ಶ್ರೀಪಾದರ ಜೋಡಿ ಕೆಲಕಾಲ ಜನಪ್ರಿಯ ಹಾಸ್ಯ ಜೋಡಿಯಾಗಿತ್ತು. ಇವರಿಬ್ಬರ ಗೆಳೆತನ ಮುಂದೆ ೪೫ ವರ್ಷಗಳ ನಂತರ 'ನೆಂಟಸ್ತಿಕೆ'ಯಾಗಿ ಬೆಳೆಯಿತೆಂಬುದು ಗಮನಿಸಬೇಕಾದ ಸಂಗತಿ. ಶ್ರೀಪಾದರಾಯರು ತಮ್ಮ ಎರಡನೆಯ ಮಗ ಅಣ್ಣಯ್ಯ (ಸದಾಶಿವ-ಅಜ್ಜನ ಹೆಸರು)ನಿಗೆ ಹೆಂಡತಿಯನ್ನಾಗಿ

ಶಾಂತಕುಮಾರರ ಮಗಳು ಸುಮಿತ್ರಾಳನ್ನು ತಂದುಕೊಂಡರು. ಕಲಾ ಜೀವನದ ನೆಂಟಸ್ತಿಕೆ, ವಾಸ್ತವ ಜೀವನಕ್ಕೂ ಬೆಳೆದುದು ಒಂದು ಅಪರೂಪದ ಘಟನೆ.

'ಶಕ್ತಿ ವಿಲಾಸ'ದ ಸುಗ್ರೀವ; "ಕೃಷ್ಣಲೀಲೆ'ಯ ವಿಜಯ ಹಾಗೂ 'ಸತ್ಯ ಸಂಕಲ್ಪ'ದ ಭಗೀರಥನ ಪಾತ್ರಗಳನ್ನು ಶ್ರೀಪಾದರಾಯರು ಅತ್ಯಂತ ಪ್ರಭಾವಶಾಲಿಯಾಗಿ ನಿರ್ವಹಿಸುತ್ತಿದ್ದರು. ಆದರೆ, ಪ್ರೇಕ್ಷಕರಿಗೆ ಇವರ ಹಾಸ್ಯ ನಟನೆಯೇ ಹೆಚ್ಚು ಸೇರುತ್ತಿತ್ತು. 'ಸದಾಶಿವರಾಯರ ಮಗ' ಎಂಬ ಕಾರಣಕ್ಕಾಗಿ ಪ್ರೇಕ್ಷಕರು ಶ್ರೀಪಾದರಾಯರಿಂದ ವಿಶೇಷವಾದುದನ್ನು ನಿರೀಕ್ಷಿಸುತ್ತಿದ್ದರು. ಆ ನಿರೀಕ್ಷೆಗೆ ಭಂಗ ಬರದಂತೆ, ಪಾತ್ರ ಯಾವುದೇ ಇರಲಿ ದಕ್ಷತೆಯಿಂದ, ಎಚ್ಚರದಿಂದಲೇ ನಿರ್ವಹಿಸುವುದು ರೂಢಿಯಾಯಿತು.

ಕುಂದಾಪುರದ ಕಂಪೌಂಡರ್ ರಾಮಭಟ್ಟರು ಮತ್ತು ಮಂಜುನಾಥ ಶಾನಭಾಗರು ಶ್ರೀಪಾದರಾಯರನ್ನು ಪ್ರೀತಿ, ವಿಶ್ವಾಸಗಳಿಂದ ಬೆಳೆಸಿದ ಆ ಕಾಲದ ಗಣ್ಯ ಪ್ರೇಕ್ಷಕರು. ಸುಸಂಸ್ಕೃತರೂ ರಸಿಕರೂ ಆಗಿದ್ದ ಈ ಹಿರಿಯರ ಸ್ನೇಹ, ಮಾರ್ಗದರ್ಶನ ಶ್ರೀಪಾದರಾಯರನ್ನು ವೃತ್ತಿನಟನನ್ನಾಗಿ ಪೋಷಿಸಿದವು.

# ತೆರೆ - ಮೂರು

## ೧. ತೆರೆಯೊಂದು ಮುಚ್ಚಿದಾಗ

"ನಾನು ಜೀವನದಲ್ಲಿ ಮೊದಲ ಬಾರಿಗೆ ಕಕ್ಕಾವಿಕ್ಕಿಯಾದೆ."

ಶ್ರೀಪಾದರಾಯರು ಈ ಮಾತನ್ನು ಈಗ ಹೇಳುವಾಗ, ೧೯೪೧ಕ್ಕೆ ಅವರ ನೆನಪು ಹೋಗುತ್ತಿದೆ. "ರಾಣೇಬೆನ್ನೂರು ಕ್ಯಾಂಪು" "ದತ್ತಾತ್ರೇಯ ಕಂಪನಿ" ನಾಟಕ ಆಡಿದ ಕೊನೆಯ ಕ್ಯಾಂಪು. ಯಜಮಾನರು ಸಕ್ರಿಯ ಪಾತ್ರ ವಹಿಸುವುದನ್ನು ಬಿಟ್ಟು ಆಗಲೇ ಮೂರು ವರುಷ ಆಗಿತ್ತು. ೧೯೩೮ರಲ್ಲಿ ನನ್ನ ತಂಗಿ, ಗರುಡರ ಕೊನೆಯ ಮಗಳು ಯಶೋಮತಿ ಏಳರ ಕಿರು ಪ್ರಾಯದಲ್ಲಿ ತೀರಿಕೊಂಡ ಘಟನೆಯು ಯಜಮಾನರ ಮೇಲೆ ತೀವ್ರ ಪರಿಣಾಮ ಮಾಡಿತ್ತು. ಯಶೋಮತಿಗೆ ವಿಷಮ ಜ್ವರ (ಟೈಫೈಯ್ಡ್) ಆಯಿತು. ಸರಿಯಾದ ಔಷಧೋಪಚಾರ ಆಗಲಿಲ್ಲ. ಏಳುವರ್ಷ ಆಗುವುದರೊಳಗೇ ಯಶೋಮತಿ, ತಾನೊಬ್ಬ ಪ್ರತಿಭಾವಂತ ನಟಿ ಆಗುವ ಎಲ್ಲಾ ಆಸೆಗಳನ್ನು ಹುಟ್ಟಿಸಿದ್ದಳು. ಇಪ್ಪತ್ತಾರು ಮೆಡಲು(ಪದಕ)ಗಳನ್ನು ಗೆದ್ದುಕೊಂಡಿದ್ದ ಅವಳು ಉತ್ಸಾಹಿಯಾಗಿದ್ದಳು; ಚುರುಕಾಗಿ ಓಡಾಡಿ ಹೇಳಿದ ಕೆಲಸವನ್ನೆಲ್ಲ ಚೊಕ್ಕಟ ಮಾಡುತ್ತಿದ್ದಳು. ಯಜಮಾನರಿಗೆ ಆಕೆಯ ಮೇಲೆ ಪ್ರೀತಿ, ಭರವಸೆ ತುಂಬಾ ಇತ್ತು. ಯಶೋಮತಿಯ ಸಾವಿನ ನಂತರ, ಬಣ್ಣ ಹಚ್ಚುವುದನ್ನೇ ಬಿಟ್ಟರು. ನಾಟಕ ಮಂಡಳಿಗೆ ಮಂಕು ಕವಿಯಿತು. ಮುಂದಿನ ಮೂರುವರೆ ವರುಷ, ಯಜಮಾನರಿಲ್ಲದ ನಾಟಕಗಳನ್ನು ನಾವು ಆಡುತ್ತ ಬರಬೇಕಾಯಿತು; ಹೇಗೋ ಬಂದೆವು."

'ಮೋಹಿನಿ-ಭಸ್ಮಾಸುರ' ಮತ್ತು 'ಗಿರಿಜಾ ಕಲ್ಯಾಣ' ನಾಟಕಗಳನ್ನೇ ಆ ವರುಷಗಳಲ್ಲಿ ಮತ್ತೆ ಮತ್ತೆ ಆಡಿದರು. ಸದಾಶಿವರಾಯರಲ್ಲಿ ಹುಟ್ಟಿದ ಅನಾಸಕ್ತಿಯ ಪರಿಣಾಮವಾಗಿ ನಾಟಕ ಮಂಡಳಿಯಲ್ಲಿ ಆಂತರಿಕ ಮತಭೇದಗಳು ಹೆಚ್ಚಾದವು; ಅಶಿಸ್ತು, ಅವ್ಯವಸ್ಥೆಗಳಿಂದಾಗಿ ನಾಟಕ ಪ್ರದರ್ಶನಗಳಲ್ಲಿ ನಿಯಮಿತತೆ-ಅಚ್ಚುಕಟ್ಟುತನ ಮಾಯವಾದವು. ನಟವರ್ಗದ ಪರಸ್ಪರರಲ್ಲಿ ಅಸಮಾಧಾನಗಳಿದ್ದವು. ಪ್ರೇಕ್ಷಕರೇನೋ 'ಗರುಡ ಕಂಪನಿ'ಯ ಮೇಲಿನ ಆದರ, ವಿಶ್ವಾಸಗಳಿಂದ ಪ್ರೇರಿತರಾಗಿ ಪ್ರದರ್ಶನಗಳಿಗೆ ಬರುತ್ತಿದ್ದರು ಹಾಗೂ ಉತ್ತೇಜಿಸುತ್ತಿದ್ದರು. ಅದನ್ನು ಬಳಸಿಕೊಂಡು, ಬೆಳೆಯುವಂತಹ ತಾಕತ್ತು ಒಳಗಿನವರಿಗೆ ಉಳಿದಿರಲಿಲ್ಲ. ನಾಟಕ ಕಂಪನಿಯ ಯಶಸ್ಸಿಗೆ ಯಜಮಾನರ ನಿರ್ದೇಶನವೇ ಮುಖ್ಯ. ಅದು ದೊರೆಯದಂತಾದಾಗ, ಅವರ ಸ್ಥಾನದಲ್ಲಿ ನಿಂತು ಮಾರ್ಗದರ್ಶನ ಮಾಡುವ ಹಾಗೂ ಬೇರೆ ಕಂಪನಿಗಳ ಜತೆ ಸ್ಪರ್ಧಿಸಲು ಬದಲಾವಣೆ-ಬೆಳವಣಿಗೆ ಹುಟ್ಟಿಸುವ ಮತ್ತೊಬ್ಬ (ಪರ್ಯಾಯ) ಯಜಮಾನರು ಮಂಡಳಿಯಲ್ಲಿ ತಲೆ ಎತ್ತಲಿಲ್ಲ.

ಮಂಡಳಿ ಕುಂಠಿತಗೊಳ್ಳಲು ಶ್ರೀಪಾದರಾಯರಿಗೆ ತಿಳಿದ ಇನ್ನೂ ಒಂದು ಕಾರಣವುಂಟು : "ಕಂದಗಲ್ಲ ಹನಮಂತರಾಯರ ನಾಟಕಗಳು (ಚಿತ್ರಾಂಗದಾ, ಮಾತಂಗ ಕನ್ಯಾ ಇತ್ಯಾದಿ) ಅತ್ಯಂತ ಪ್ರಭಾವಶಾಲಿಯಾಗಿದ್ದ ಕಾಲ ಅದು. ಅವರ ನಾಟಕಗಳನ್ನು ಗರುಡ ಕಂಪನಿಯವರೇಕೆ ಆಡಬಾರದು ಎಂಬ ಸೂಚನೆಗಳು, ಒತ್ತಾಯಗಳೂ ಪ್ರೇಕ್ಷಕರಿಂದ ಬಂದವು. ಗರುಡ ಶೈಲಿಯ ನಾಟಕಗಳನ್ನೇ ಆಡಿ, ಅದರ ಪ್ರಭಾವದಲ್ಲಿದ್ದ ನಟವರ್ಗಕ್ಕೆ ಈ ಸೂಚನೆಗಳನ್ನು ಮನ್ನಿಸುವುದಕ್ಕೆ ಸಾಧ್ಯವಿರಲಿಲ್ಲ. ಯಾವುದೇ ಬದಲಾವಣೆಗೆ ಒಗ್ಗಬೇಕೆಂದರೆ ಆಂತರಿಕ ಹುರುಪು ಬತ್ತಿ ಹೋಗಿತ್ತು. "ಗರುಡರ ಗಾಢ ಪ್ರಭಾವದಿಂದ ಹೊರಬಂದು, ಇತರರನ್ನು ಅನುಸರಿಸುವ ಜಾಣತನ, ಗತ್ತುಗಾರಿಕೆ ನಮಗಾರಿಗೂ ಇರಲಿಲ್ಲ" ಎಂದು ಶ್ರೀಪಾದರಾವ ಒಪ್ಪಿಕೊಳ್ಳುವ ಸತ್ಯ ಸಂಗತಿ. ಆದರೂ ಕಂದಗಲ್ಲರ 'ಬಡತನದ ಭೂತ' ನಾಟಕವನ್ನು ಮಂಡಳಿ ಎತ್ತಿಕೊಂಡಿತು. ಶ್ರೀಪಾದರಾವ ಕುಶನ ಪಾತ್ರವನ್ನು ಕಷ್ಟಪಟ್ಟು ಅಭ್ಯಸಿಸಿ, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು. ಒಡನಾಡಿ ದುರ್ಗಾದಾಸ ಹಾಗೂ ಮಲ್ಹಾರಿ ಜೋಶಿಯವರ ನಟನೆಯೂ ನಾಟಕದ ಪರಿಣಾಮ ಹೆಚ್ಚಿಸಿದವು. ನಟವರ್ಗದ ಅಭಿನಯ ಕೌಶಲ, ಮಂಡಳಿಯ ಜೀವ ಹಾಗೂ ಹೀಗೂ ನಾಲ್ಕು ವರ್ಷ ಉಳಿಯಲು ನೆರವಾಯಿತು.

ಆದರೆ, ಶದಾಶಿವರಾಯರ ನಿರ್ದೇಶನವಿಲ್ಲದೆ ಮಂಡಳಿಯು ಪುನರುತ್ಥಾನ ಹೊಂದುವ ಲಕ್ಷಣ ಕಾಣಲಿಲ್ಲ. ಆಗಲೇ ಗದಗಿಗೆ ಹೊರಟು ಹೋಗಿದ್ದ ಸದಾಶಿವರಾಯರು ೧೯೪೨ರ ಒಂದು ದಿನ, ಮಂಡಳಿಯನ್ನು ಮುಚ್ಚಿ ಬಿಡಲು ಆದೇಶ ಕಳಿಸಿದರು. ಜೀವನದಲ್ಲಿ ಮೊಟ್ಟ ಮೊದಲು "ಹೌಹಾರಿ ನಿಲ್ಲುವ ಪಾಳಿ ಶ್ರೀಪಾದರಾಯರದ್ದಾಯಿತು. ನಾಲ್ವರು ಗಂಡುಮಕ್ಕಳಲ್ಲಿ ಕಂಪನಿಯ ಹೆಚ್ಚಿನ ಜವಾಬ್ದಾರಿ ಹೊತ್ತವರು ಇವರೇ. ನಟನಾಗಿ, ಸದಾಶಿವರಾಯರ 'ಉತ್ತರಾಧಿಕಾರಿ' ಎಂಬ ಬಿರುದನ್ನು ಪಡೆದಿದ್ದವರು ಇವರೇ. ತಂದೆಯ ಆದೇಶವನ್ನು ಮನ್ನಿಸಿ, ರಾಣೇಬೆನ್ನೂರ ಕ್ಯಾಂಪನ್ನು ಕೊನೆಗೊಳಿಸಿ ಗದಗಿಗೆ ಹಿಂದಿರುಗುವಾಗ

ಶ್ರೀಪಾದರಾಯರ ಎದೆ ಭಾರವಾಗಿತ್ತು; ತಲೆ ಚಿಂತೆಯಿಂದ ತುಂಬಿತ್ತು: ಮನಸ್ಸಿನ ತುಂಬ ಪ್ರಶ್ನೆಗಳೇ; ಅನುಮಾನ ಆತಂಕಗಳೇ. ಮುಂದೇನು ಎನ್ನುವ ಸಮಸ್ಯೆ. ನಟನೆಯೊಂದನ್ನು ಬಿಟ್ಟರೆ ಬೇರೇನೂ ಕಲಿಯಲಿಲ್ಲ: ರೂಢಿಸಿಕೊಳ್ಳಲಿಲ್ಲ. ಕಂಪನಿಯನ್ನು ಇತ್ತೀಚಿನ ವರ್ಷಗಳಲ್ಲಿ ನಡೆಸಿದ್ದರಿಂದ, ಆರ್ಥಿಕವಾಗಿ ಬಂದ 'ಹೊರೆ'ಯನ್ನು ತಾನೊಬ್ಬನೇ ಹೊರಬೇಕು ಮತ್ತು ತೀರಿಸಬೇಕು. ಇದು ಸಾಧ್ಯವೇ ಒಬ್ಬನಿಂದ?

ಕಂಪನಿಯನ್ನು ಅದರ ಹೆಸರು ಬದಲಿಸದೆ, ಸ್ವತಂತ್ರವಾಗಿ ತಾನೊಬ್ಬನೇ ನಿರ್ವಹಿಸಿಕೊಂಡು ಹೋದರೆ ಹೇಗೆ, ಎಂದೆನ್ನಿಸಿತು ಶ್ರೀಪಾದರಾಯರಿಗೆ. ಬದಲಾದ ಪರಿಸ್ಥಿತಿಯಲ್ಲಿ ನಾಟಕಕ್ಕೆ ಹೊಸ ನಮೂನೆಯ 'ಗಿಮಿಕ್ಕು'ಗಳನ್ನು ಸೇರಿಸಬೇಕು. ಅದು ಭಾರೀ ಮೊತ್ತದ ಬಂಡವಾಳ ಬೇಡುವ ಬಾಬತ್ತು. ಯಾವುದೇ ಗಿಮಿಕ್ಕು ಬೇಡವೆಂಬ ಕಾರಣಕ್ಕಾಗಿಯೇ ಯಜಮಾನರು ಹಿಂಜರಿದಿದ್ದರಲ್ಲವೆ ! ನಾಟಕದ ಅಭಿವೃದ್ಧಿಯು ಕಲಾತ್ಮಕ ಲಕ್ಷಣಗಳಿಂದ ಸಾಧ್ಯವಾಗಬೇಕೇ ಹೊರತು ಚಂಚಲಚಿತ್ತ ಪ್ರೇಕ್ಷಕರನ್ನು ರಮಿಸುವ ರೀತಿಯಲ್ಲಿ ಅಲ್ಲ. ತನ್ನ ಅಣ್ಣ-ತಮ್ಮಂದಿರಾದರೂ ಧೈರ್ಯ, ವಿಶ್ವಾಸ, ಸಕ್ರಿಯ ಬೆಂಬಲ ಕೊಡುತ್ತಾರೆಂದರೆ ಅವರೆಂದೋ 'ಕಂಪನಿ'ಯ ಕಲಾತ್ಮಕ ಅಭಿವೃದ್ಧಿಯಿಂದ ವಿಮುಖರಾಗಿದ್ದರು.

ಹೀಗಾಗಿ ಶ್ರೀಪಾದರಾವ ಏಕಾಂಗಿವೀರನಾಗಿ ಮುಂದುವರಿಯಲು ಹಿಂಜರಿದರು. ೨೫ ವರ್ಷಗಳ ಕಾಲ ನಾಟ್ಯ ಪ್ರಪಂಚದಲ್ಲಿ ಉಜ್ವಲ ತಾರೆಯಾಗಿ ಮಿನುಗಿ, ನೋಡುಗರ ಕಣ್ಣು ಕೋರೈಸುವಂತೆ ಮಾಡಿದ್ದ ದತ್ತಾತ್ರೇಯ ನಾಟಕ ಮಂಡಳಿ ಮಂಕಾಯಿತು: ಆ ದಿನ (ಡಿಸಂಬರ್ ೩೧, ೧೯೪೧) ಅದು ರಾಣೇಬೆನ್ನೂರಲ್ಲಿ ಮುಳುಗಿ ಮರೆಯಾಯಿತು.

## ೨. ರಂಗಸಂಚಾರ

೧೯೪೨ರ ಜನವರಿ ೧, ಶ್ರೀಪಾದರಾಯರ ಜೀವನದಲ್ಲಿ ಬೇರೊಂದು ತಿರುವು ಕೊಟ್ಟ ದಿನ. ಸ್ವಂತ ಕಾಲ ಮೇಲೆ ನಿಂತು ಕಂಪನಿಯನ್ನು ಏಕಾಕಿಯಾಗಿ ಮುನ್ನಡೆಸಿಕೊಂಡು ಹೋಗದಂತಹ ಇವರ ಪರಿಸ್ಥಿತಿಯನ್ನು, ಹಿತೈಷಿಯೊಬ್ಬರು ಗಮನಿಸುತ್ತಿದ್ದರು. ಅವರು ಪೇಂಟರ್ ಬಾಬೂರಾವ ರಾಣೆ. ಹೆಸರಿಗೆ ತಕ್ಕಂತೆ ಇವರು, ನಾಟಕದ 'ಸೀನರಿ'ಗಳನ್ನು ರಚಿಸುವ ಕಲಾವಿದರು. ಇವರ ತಂದೆ ಜನಾರ್ದನ್ ರಾಣೆಯವರು ವಾಮನರಾವ ನಾಟಕ ಕಂಪನಿ ವಿಶ್ವಗುಣಾದರ್ಶದಲ್ಲಿ ಪೇಂಟರ್ ಆಗಿ ಒಳ್ಳೆಯ ಹೆಸರು ಮಾಡಿದ್ದರು. ಬಾಬುರಾವ್ ಅನೇಕ ಕಾಲ ದತ್ತಾತ್ರೇಯ ಕಂಪನಿಯಲ್ಲಿದ್ದು ಬೇರೆಡೆಗೆ ಹೋದವರು. ಡಿ.ದುರ್ಗಾದಾಸನ ಅಕ್ಕನ ಗಂಡನಾಗಿದ್ದ ಬಾಬುರಾವ, ಮೊದಲಿನಿಂದಲೂ ಶ್ರೀಪಾದರಾಯರ ಹಿತಚಿಂತಕರು. ಹರಪನಹಳ್ಳಿಯ ಈಶ್ವರಪ್ಪ ಎಂಬವರ "ಟೋಲ್ ಗೇಟ್ ಬಸವೇಶ್ವರ ನಾಟಕ ಕಂಪನಿ"ಯಲ್ಲಿ ನೆಲೆಯೂರಿದ್ದ ಪೇಂಟರ್ ಬಾಬುರಾವ್, ಶ್ರೀಪಾದರಾಯರನ್ನು ಹರಪನಹಳ್ಳಿಗೆ ಕರೆಸಿಕೊಂಡರು. ಕಂಪನಿ ಮಾಲಕ

ಈಶ್ವರಪ್ಪನವರಿಗೆ. ತಮ್ಮ ಕಂಪನಿಗೊಬ್ಬ ಕವಿ, ನಿರ್ದೇಶಕ, ನಟ ಬೇಕಾಗಿದ್ದನು. ಶ್ರೀಪಾದರಾವ ಆ ಸ್ಥಾನವನ್ನು ತುಂಬಬಲ್ಲವನಾಗಿದ್ದುದು ಸಕಾಲಿಕವಾಗಿತ್ತು. ಗರುಡರ ಸುಪ್ರಸಿದ್ದ ನಾಟಕಗಳಾದ ಲಂಕಾ ದಹನ, ಭಸ್ಮಾಸುರ-ಮೋಹಿನಿ, ಗಿರಿಜಾ ಕಲ್ಯಾಣಗಳನ್ನಲ್ಲದೆ ಕಂದಗಲ್ಲರ ಚಿತ್ರಾಂಗದಾ, ಬಡತನದ ಭೂತ ನಾಟಕಗಳನ್ನು ಕೂಡಿಸಿ ಆಡಿಸಬೇಕೆಂದು ಒಪ್ಪಂದವಾಯಿತು. ಡಿ. ದುರ್ಗಾದಾಸ, ಚಿತ್ರಾಂಗದಾ ನಾಟಕದ ಮುಖ್ಯ ಪಾತ್ರ 'ಅರ್ಜುನ'ನಾಗಿ ನಟಿಸಬೇಕೆಂದು ನಿಶ್ಚಯವಾಯಿತು. ಶ್ರೀಪಾದರಾವ ಈ ಕಂಪನಿಯ 'ಸೂತ್ರಧಾರ'ನಾಗಿ ದೊಡ್ಡ ಹೊಣೆ ಹೊರಬೇಕಾಯಿತು. ಸಂತೋಷದಿಂದಲೇ ಹೊತ್ತರು. ಒಂದೂವರೆ ವರ್ಷಗಳ ಕಾಲ ಟಿ.ಜಿ. ಬಸವೇಶ್ವರನಾಟಕ ಕಂಪನಿಯಲ್ಲಿ ದುಡಿದದ್ದಾಯಿತು.

ಗದಗ ಮನೆಯಿಂದ, ತಂದೆ-ತಾಯಿಗಾಗಲಿ, ಮತ್ತಾರಿಗೋ ಆಗಲಿ ಹೇಳದೆ ಕೇಳದೆ ಹರಪನಹಳ್ಳಿಗೆ ಹೋಗಿದ್ದರಿಂದ, ಭೀಮಕ್ಕನಿಗೆ ಶ್ರೀಪಾದನ ಬಗ್ಗೆ ಕಳವಳ, ಕಾಳಜಿ ಆಗಿತ್ತು. ಒಮ್ಮೆ ಅವರು ಯಜಮಾನರ ಜೊತೆಗೂಡಿ ಹರಪನಹಳ್ಳಿಗೆ ಧಾವಿಸಿ ಬಂದರು. ಆ ಸನ್ನಿವೇಶವನ್ನು ಶ್ರೀಪಾದರಾವ ನೆನಪಿಸಿಕೊಂಡು ಹೇಳುತ್ತಾರೆ : "ಗರುಡರ ಆಗಮನದಿಂದ ಈಶ್ವರಪ್ಪ ಮೊದಲು ಗಾಬರಿಗೊಂಡರು. ತಂದೆಯವರು ಯಾರಿಗೂ ಏನೂ ಅನ್ನಲಿಲ್ಲ. ನನ್ನ ನಾಟಕವನ್ನಂದು ನೋಡಿದರು: ಖುಷಿಪಟ್ಟರು. ಹೊರಗಿನವರ ಜೊತೆ ಯಾಕೆ ಕಷ್ಟಪಟ್ಟು ದುಡಿಯಬೇಕು ? ಮನೆಗೆ ಹೋಗೋಣ ನಡಿ; ಬೇರೇನಾದರೂ ಒಳ್ಳೇ ಉದ್ಯೋಗ ಮಾಡುತ್ತ ನನ್ನ ಕಣ್ಣೆದುರೇ ಇರು" ಎಂದು ಮರುದಿನವೇ ಗದುಗಿಗೆ ಕರೆದೊಯ್ದರು.

### ೩. ಹಾಲಿನ ಸರಬರಾಜು

"ಗದಗಿನ ಮನೆಗೆ ಬಂದೆ. ಸ್ವಲ್ಪೇ ದಿನದೊಳಗೆ ಯಜಮಾನರು "ಹಾಡಿನ ಡೇರಿ" ಆರಂಭಿಸಿ ನನಗೆ ಒಪ್ಪಿಸಿದರು. ದಿನಾ ಮುಂಜಾನೆ ಎಮ್ಮೆ ಹಾಲು ಹಿಂಡಿಸುವುದು, ಮನೆ ಮನೆಗೆ ತಲುಪುವಂತೆ ಕಳಿಸುವುದು; ಗಿರಾಕಿಗಳಿಂದ ಹಣ ವಸೂಲಿ ಮಾಡುವುದು: ಲೆಕ್ಕಪತ್ರ ಬರೆದಿಡುವುದು. ಕೆಲಕಾಲ ಇದು ಸ್ವಾರಸ್ಯಕರ ಉದ್ಯೋಗವಾಗಿ ಕಂಡಿತು. ಮುಖ್ಯವಾಗಿ ತಾಯಿ ಭೀಮಕ್ಕನಿಗೆ ನನ್ನ ಇರವು ನೆಮ್ಮದಿ ತಂದಿತ್ತು.

"ಆದರೆ ಹಾಲಿನ ಸರಬರಾಜು ವ್ಯವಸ್ಥಿತ ನಡೆಸುವಷ್ಟು ನಾನು ದಕ್ಷನಾಗಿರಲಿಲ್ಲ. ಪದೇ ಪದೇ ಮನಸ್ಸು "ಬಣ್ಣದ ಮನೆ'ಯ ಕಡೆಗೆ ಎಳೆಯುತ್ತಿತ್ತು. ರಂಗದ ಮೇಲೆ ಚಟುವಟಿಕೆ ನಡೆಸಿದರೇ ಉಂಡ ಊಟ ಮೈಗೆ ಹತ್ತೀತು ಎನಿಸತೊಡಗಿತು. ನಿಷ್ಠುರವಾಗಿ 'ಹಾಲಿನ ಡೇರಿ' ಬಿಟ್ಟು ಹೋಗಲೂ ಸಾಧ್ಯವಿರಲಿಲ್ಲ.

"ತಳಕಲ್ಲದ ಯಂಕರಡ್ಡಿ ಎಂಬವರು ಒಂದು ಸಣ್ಣ ಪ್ರಮಾಣದ ನಾಟಕ ಕಂಪನಿ ಆರಂಭಿಸಿದ್ದರು. ಗದಗಿಗೆ ಬಂದಾಗಲೆಲ್ಲ 'ಕಂಪ್ನಿ ಸೇರು' ಎಂದು ಆಸೆ ಹಚ್ಚುತ್ತಿದ್ದರು. ತರುಣ ನಟ, ಅನುಭವಿಕ ವ್ಯವಸ್ಥಾಪಕ,

ಸಾಹಿತ್ಯದ ಇತಿವೃತ್ತ ಬಲ್ಲವನೊಬ್ಬ ಅವರಿಗೆ ಬೇಕಾಗಿದ್ದ. ನನ್ನನ್ನವರು ಬಿಡಲಿಕ್ಕೆ ತಯಾರಿರಲಿಲ್ಲ. ಯಂಕರಡ್ಡಿಯವರ ಆಗ್ರಹ ಮನ್ನಿಸಿ, 'ಹಾಲಿನ ಡೇರಿ'ಗೆ ಶರಣು ಹೇಳಿ ತಳಕಲ್ಲಿಗೆ ಓಡಿದೆ. ತಳಕಲ್ಲ ಕಂಪನಿಯಲ್ಲಿ ನಾನು ವಹಿಸಿದ್ದು 'ಹೇಮರಡ್ಡಿ ಮಲ್ಲಮ್ಮ'ನ ಅತ್ತೆಯ ಪಾತ್ರ. ಸೊಸೆಯನ್ನು ಕಾಡಿ ಗೋಳು ಹೊಯ್ದುಕೊಳ್ಳುವ ಅತ್ತೆಯೆಂದರೆ, ಖಲ ಪಾತ್ರವೇ. ನಾನದನ್ನು ಚಾತುರ್ಯದಿಂದ ನಟಿಸಿ ನೋಡುಗರಿಗೆ ಅಚ್ಚುಮೆಚ್ಚಿನವನಾದೆ. "ಬಡತನದ ಭೂತ"ದಲ್ಲಿ ಕುಶನ ಪಾತ್ರವಂತೂ ನನಗೆ ನೀರು ಕುಡಿದಷ್ಟು ಸಲೀಸಾಗಿತ್ತು. ನೋಡುಗರ ಕಣ್ಣಲ್ಲಿ ಶ್ರೀಪಾದನೆಂದರೆ ಕುಶರಾಜನ ಪಾತ್ರಕ್ಕೆ 'ಪೇಟೆಂಟ್', ಅತ್ಯಂತ ಖುಷಿಯಿಂದ ಆ ಪಾತ್ರದಲ್ಲಿ ಮೆರೆದೆ. ತಳಕಲ್ಲ ಕಂಪನಿಯ ವಾತಾವರಣದಲ್ಲಿದ್ದಾಗ ನನಗೆ ಸ್ವಾತಂತ್ರ್ಯದ ಸುಖ ಅಮಿತವಾಗಿ ಸಿಕ್ಕಂತಾಗಿತ್ತು. ನಾಟಕ, ನಟನೆ ಬಿಟ್ಟರೆ ಬೇರೇನೂ ಬೇಡ ಎನ್ನುವಷ್ಟು ಗಾಢ ಸಂಬಂಧ ಉಂಟಾಗಿತ್ತು.

"ಮತ್ತೆ ಮನೆ ಕಡೆಯಿಂದ ಕರೆ. ಕಳೆಗುಂದಿದ ಮುಖದಿಂದಲೇ ಹೋದೆ. ಯಜಮಾನರೆದುರು ಸ್ಪಷ್ಟವಾಗಿ ಹೇಳಿಬಿಟ್ಟೆ :" ನನಗೆ ಬೇರೆ ಯಾವ ಉದ್ಯೋಗ-ದಂಧೆ ಒಗ್ಗೂದಿಲ್ಲ. ಪಾರ್ಟು ಮಾಡುವುದು ನನಗೆ ಬಿಡಲಾಗದ ನಂಟು. "ಸರಿ. ಯಜಮಾನರಿಗೆ ಅದು ಸಮ್ಮತವಾಯಿತು. "ಭೇಷ್ ! ಹಾಗಾದರೆ ನಟನೆಗೆ ಏನು ಬೇಕೋ ಅದರ ತಯಾರಿ ಚೆನ್ನಾಗಿ ಮಾಡಿಕೋ. ಏಕೋಭಾವದಿಂದ ಅದರೊಳಗೆ ಬೆರೆತು ಮುಂದುವರಿ" ಎಂದು ಹೃನ್ಮನಗಳಿಂದ ನನಗೆ ಆಶೀರ್ವದಿಸಿ ಬೀಳ್ಕೊಟ್ಟರು. "ನಾಟಕದೊಳಗೆ ನೀ ದೇವರನ್ನು ಕಾಣು; ನಿನ್ನ ದೈವವನ್ನು ನೀನೇ ರೂಪಿಸಿಕೋ" ಎಂದು ಅವರು ಆಡಿದ ಆ ಮಾತು, ನನ್ನ ಸಂಕಲ್ಪ ಬಲಕ್ಕೆ ಮೂಲಾಧಾರ. ಅವರ ಹರಕೆ, ಹಾರೈಕೆಗಳನ್ನು ನಿಜ ಮಾಡುವತ್ತಲೇ ನಾನು ಆಗಿನಿಂದ ಶ್ರಮಿಸಿದ್ದೇನೆ: ಸಾಧಿಸುತ್ತಿದ್ದೇನೆ."

ಶ್ರೀಪಾದರಾಯರು ೧೯೪೩ರಿಂದ ಮತ್ತೆ ಬೇರೆ ಬೇರೆ ಕಂಪನಿಗಳಲ್ಲಿ ನಾಯಕ, ಖಳನಾಯಕ, ಪೋಷಕ ಅಥವಾ ಹಾಸ್ಯ ಪಾತ್ರಗಳನ್ನು ನಿರ್ವಹಿಸುತ್ತ ಮುಂದಿನ ಮೂವತ್ತು ವರ್ಷ ರಂಗ ಸಂಚಾರಕ್ಕೆ ತೊಡಗಿದರು.

## ೪. ಅಭಿನಯ ಸಂಚಾರಿ

ಹುಲಿಮನೆ ಸೀತಾರಾಮ ಶಾಸ್ತ್ರಿಗಳು ರಂಗನಟ, ಬರೆಹಗಾರ ಮತ್ತು ಸಂಘಟಕನಾಗಿ ಕರ್ನಾಟಕದ ರಂಗಭೂಮಿಗೆ ಅನುಪಮ ಸೇವೆ ಸಲ್ಲಿಸಿದ ಕಲಾವಿದರು. ಹಿರಿಯರಾದ ಗರುಡರಲ್ಲಿ ಹಲವಾರು ವರ್ಷ ಶಿಷ್ಯತ್ವ ವಹಿಸಿದ್ದ ಹುಲಿಮನೆ ಸೀತಾರಾಮ ಶಾಸ್ತ್ರಿಗಳು "ಜಯ ಕರ್ನಾಟಕ ನಾಟಕ ಮಂಡಳಿ, ಸಿದ್ದಾಪುರ (ಉ.ಕ.)" ಸ್ಥಾಪಿಸಿ ನಾಟಕಗಳನ್ನು ಆಡತೊಡಗಿದಾಗ ಶ್ರೀಪಾದರಾಯರನ್ನು ಕರೆಸಿಕೊಂಡು "ಅಕ್ಷಯಾಂಬರ"ದಲ್ಲಿ ದುರ್ಯೋಧನನ ಪಾತ್ರ: "ಬಡತನದ ಭೂತ"ದಲ್ಲಿ ಮಲ್ಲೇಶಿಯ ಪಾತ್ರವನ್ನು ಜನಮನ ಸೆಳೆಯುವಂತೆ

ನಟಿಸಿದರು. ಸೀತಾರಾಮ ಶಾಸ್ತ್ರಿಗಳದು ಪರಿಣತ ರಂಗ ಪ್ರಜ್ಞೆ: ಶ್ರೀಪಾದರಾಯರಿಗೆ ಹುಲಿಮನೆಯವರಲ್ಲದೆ ಮಧ್ವರಾಜ ಉಮರ್ಜಿ, ಆರ್.ಡಿ.ಕಾಮತ್ ಮತ್ತಿತರರು ಅತ್ಯಂತ ಗೆಳೆಯರಾಗಿದ್ದವರು; ಗರುಡರ ಶಿಷ್ಯರೇ ಆಗಿದ್ದರಿಂದ ಅವರೊಡನಾಟವು ನಟನೆಯಲ್ಲಿ ಸಂತೃಪ್ತಿ, ಸಮಾಧಾನಗಳನ್ನು ತಂದವು. ಆದರೆ ಅವರ ಮಂಡಳಿಯಲ್ಲಿಯೇ ಮುಂದುವರಿಯುವುದಕ್ಕೆ ಸಾಧ್ಯವಾಗದೇ ೧೯೪೭ ರಲ್ಲಿ ಚಿತ್ತರಗಿಯ "ಕುಮಾರ ವಿಜಯ ನಾಟ್ಯ ಸಂಘ"ವನ್ನು ಸೇರಿದರು. "ನಾರೀ ಸಾಹಸ" ನಾಟಕದಲ್ಲಿ ಜೀವನ ಮಂತ್ರಿ ಪಾತ್ರ ಸಿಕ್ಕವು. ಇದು ಶ್ರೀಪಾದರಾವ ಅಭಿನಯಿಸಿದ ಯಶಸ್ವೀ ಪಾತ್ರಗಳಲ್ಲಿ ಒಂದು. ನಲವಡಿ ಶ್ರೀಕಂಠ ಶಾಸ್ತ್ರಿ ವಿರಚಿತ "ಪ್ರಪಂಚ ಪರೀಕ್ಷಾ" ನಾಟಕದಲ್ಲಿ 'ಘೋಡಾ ಸವಾರ್'ನ ಪಾತ್ರ ಸಿಕ್ಕಿತು.

ಚಿತ್ತರಗಿ ಕಂಪನಿಯಲ್ಲಿದ್ದಾಗ ಹಾಸ್ಯ, ಖಳ ಪಾತ್ರಗಳೂ ಸಿಕ್ಕಿದವು. ಈ ವೈವಿಧ್ಯಮಯ ಕೆಲಸಗಳಿಂದಾಗಿ ನಟನ ಜೀವಂತಿಕೆ ಉಳಿಯಲು ಸಾಧ್ಯವಾಯಿತು ಎನ್ನುವುದು ಶ್ರೀಪಾದರಾಯರ ಅನುಭವ.

### ೫. ಬಾಳಪ್ಪನವರೊಂದಿಗೆ

ಏಣಗಿ ಬಾಳಪ್ಪನವರು "ಕಲಾ ವೈಭವ ನಾಟ್ಯ ಸಂಘ, ಬೆಳಗಾವಿ"ಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೊರಟ ಕಲಾವಿದರು. ಶ್ರೀಪಾದರಾಯರ ಹಿತೈಷಿ ಹಾಗೂ ಸನ್ನಿತರಾದ ಬಾಳಪ್ಪನವರು ಇವರನ್ನು ತಮ್ಮ ಕಂಪನಿಗೆ ಕರೆಸಿಕೊಂಡದ್ದು ಇವರ ಸಹವಾಸ, ಸಹಯೋಗ ತಮಗಿರಲಿ ಎಂದು. "ಕಿತ್ತೂರ ರುದ್ರಮ್ಮ" ಕಲಾ ವೈಭವದವರು ಆಡುತ್ತಿದ್ದ ಐತಿಹಾಸಿಕ ನಾಟಕ. ಇದರಲ್ಲಿ ನಂಜುಂಡ ಮತ್ತು ಕೆಂಚನ ಪೋಷಕ ಪಾತ್ರವನ್ನು ನಿರ್ವಹಿಸುತ್ತಿದ್ದರು. ಮಹಾಂತೇಶ ಶಾಸ್ತ್ರಿಗಳು ಬರೆದ "ಕುಂಕುಮ" ನಾಟಕ ಬಾಳಪ್ಪನವರ ಕಂಪನಿಗೆ ಹೆಸರು, ಹಣ ತಂದುಕೊಟ್ಟ ಕಾಲ ಅದು. ಅದರಲ್ಲಿ ಶ್ರೀಪಾದರಾಯರದು 'ಹುಬ್ಬಾ' ಎಂಬ ಪಾತ್ರ. ಈ ಹಾಸ್ಯಪಾತ್ರ ಪ್ರೇಕ್ಷಕರಿಗೆ ಆಪ್ಯಾಯಮಾನವಾಗಿತ್ತು. ೧೯೪೮ ರಲ್ಲಿ ಮದುವೆಯಾಗಿ ಏಣಗಿಯವರ ಸಂಘಕ್ಕೆ ಬಂದರು. ವಧುವಿನ ಹೆಸರು ಅನಸೂಯ. 'ಕುಂಕುಮ' ಎಂದು ಸದಾಶಿವರಾಯರು ಪುನರ್ನಾಮಕರಣ ಮಾಡಿದರು.

ಈ ಮುಂಚೆ, ಅನ್ಯ ಕಂಪನಿಯಲ್ಲಿ ಅಭಿನಯ ವೃತ್ತಿಯಲ್ಲಿದ್ದಾಗ ನಟೀಮಣಿಯೊಬ್ಬಳ ಪ್ರೇಮಪಾಶಕ್ಕೆ ಶ್ರೀಪಾದರು ಒಳಗಾಗಿದ್ದರು. ಅನ್ಯಜಾತಿಯಳಾದ ಅವಳನ್ನು ಕೈ ಹಿಡಿಯುವುದು ತರವಲ್ಲ, ಎಂದು ಅವರ ಹಿತೈಷಿಗಳು ಕಿವಿಮಾತು ಹೇಳಿದಾಗ, ಚಿಂತಾಕ್ರಾಂತರಾದರು. ಈ ಪ್ರೇಮ ವಾರ್ತೆ ಸದಾಶಿವರಾಯರ ಕಿವಿಗೂ ತಲುಪಿತು. ಅವರು ಅಂತರ್ಜಾತಿ ವಿವಾಹಕ್ಕೆ ವಿರೋಧಿಯಂತೂ ಆಗಿರಲಿಲ್ಲ. ಏಕೆಂದರೆ,

“ಉಗ್ರಕಲ್ಯಾಣ”ದಂತಹ ನಾಟಕವನ್ನು ಬರೆದು, ಅಂತರ್ಜಾತೀಯ ವಿವಾಹವನ್ನು ಉದಾತ್ತ ಆದರ್ಶವಾಗಿ ಪರಿಗಣಿಸಿದ ಸಹಜ ಸಾತ್ತ್ವಿಕ ವ್ಯಕ್ತಿ ಅವರು. ಆ ನಟೀಮಣಿಯ ಪ್ರೀತಿ ಎಷ್ಟು ಶಾಶ್ವತ ಅಥವಾ ನಂಬಲರ್ಹ ಎಂಬುದು ಅವರಿಗಿದ್ದ ಅನುಮಾನ. ಆದ್ದರಿಂದ ಅವರು ಶ್ರೀಪಾದನಿಗೆ, ಒಬ್ಬ ಗೆಳೆಯನಂತೆ ಕೊಟ್ಟ ಸಲಹೆ ಇದು : “ಆರು ತಿಂಗಳ ಕಾಲ ನೀನು ಆಕೆಯಿಂದ ದೂರವಿರು. ಭಾವುಕನಾಗಬೇಡ. ಆಕೆಯೂ ನಿನ್ನಿಂದ ದೂರವಿರುವುದನ್ನು ಅರಿತು ಆಚರಿಸಲಿ. ಆ ನಂತರವೂ ನಿಮ್ಮಿಬ್ಬರಲ್ಲಿ ಪ್ರೇಮದ ಒರತೆ ಪ್ರವಹಿಸುವುದು ನಿಜವಿದ್ದರೆ, ಚತುರ್ಭುಜರಾಗಿರಿ -ನಮ್ಮ ಆಶೀರ್ವಾದ ಖಂಡಿತ."

ತಂದೆಯ ಸಲಹೆಯನ್ನು ಶ್ರೀಪಾದ ಅಕ್ಷರಶಃ ಆಚರಿಸಿದರು. ಆ ಪ್ರೀತಿ, ಆಂತರಿಕ ಒತ್ತಡದಿಂದ ಆದುದಲ್ಲ, ಎಂಬುದು ಅವರಿಗೆ ಮನದಟ್ಟಾಯಿತು. ನೋವು, ಪಶ್ಚಾತ್ತಾಪಗಳ ಅನುಭವವಿಲ್ಲದೇ ಆ ಸಂಬಂಧ ನಿರ್ಲಿಪ್ತವಾಗಿ ವಿಶ್ಲೇಷವಾಗಿ ಮರೆಯಾಯಿತು. ಹೆಂಡತಿ ಅನಸೂಯೆಯಲ್ಲಿ ‘ಕುಂಕುಮ'ಳನ್ನು ಕಂಡ ಶ್ರೀಪಾದ, ೫೨ ವರ್ಷಗಳ ಪರ್ಯಂತ ಸುಖೀ ದಾಂಪತ್ಯದ ಅನುಭವ ತುಂಬಿಕೊಂಡಿದ್ದಾರೆ. ಸಂಸಾರ ತೂಗುವ ಹೊಣೆ ಹೊತ್ತ ಮೇಲೆ, ಅಭಿನಯ ವೃತ್ತಿಯನ್ನು ಹೆಚ್ಚು ಗಂಭೀರವಾಗಿ ನಿರ್ವಹಿಸಬೇಕಾಯಿತು. ಸೌ. ಕುಂಕುಮ ಬೆಂಬಲವಾಗಿ ನಿಂತರು.

ಏಣಗಿಯವರ ಜತೆಗಿದ್ದಾಗ 'ಕಲಾ ವೈಭವ ಮಂಡಳಿ'ಯ ಒಬ್ಬ ಕುಟುಂಬ ಸದಸ್ಯನಂತೆ ಶ್ರೀಪಾದರು ಇದ್ದರು. ಬಾಳಪ್ಪನವರ ಅಂತರಂಗದ ಮಿತ್ರನಾಗಿ, ಕಂಪನಿಯ ಸುಗಮ ಚಾಲನೆಗೆ ಸಹಕಾರ ಇತ್ತರು. ಬಾಳಪ್ಪನವರೊಂದಿಗಿನ ಮೈತ್ರಿ ೫೫ ವರ್ಷಗಳಿಂದ ಸೌಹಾರ್ದಯುತವಾಗಿ ಇದೆ ಈಗಲೂ.

೧೯೫೫ ರಲ್ಲಿ ಸ್ವಂತ ನಾಟಕ ಮಂಡಳಿ ಕಟ್ಟಬೇಕೆಂದೆನ್ನಿಸಿ “ನಟರಾಜ ನಾಟ್ಯ ಮಂಡಳಿ”ಯನ್ನು ಗದಗಿನಲ್ಲಿ ಆರಂಭಿಸಿದರು. ಹನಮಂತರಾಯ ಕಂಠಿ (ಬಾಗಲಕೋಟೆ) ರಚಿಸಿದ “ಭಾಗ್ಯ ಮಂದಿರ" ನಾಟಕವನ್ನು ಲಕ್ಕುಂಡಿಯಲ್ಲಿ ಆಡುವ ಮೂಲಕ ಈ ಸ್ವಂತ ಸಾಹಸ ಆರಂಭಗೊಂಡಿತು. ಶುರುವಿನಲ್ಲಿ ಯಶಸ್ಸಿನ ಅನುಭವ ಉಂಟಾಗಿ ವಿಶ್ವಾಸ ಹೆಚ್ಚಿತು. ಆದರೆ, ಕಂಪನಿ ಆರಂಭಿಸಲು ಬೇಕಾಗಿದ್ದ ನಾಟಕದ ಸಾಮಾನು ಕೊಟ್ಟವರಿಗೆ ಅದೇನೋ ಆಸೆ ಹುಟ್ಟಿತು ! ಕಂಪನಿಗೆ ತಾನೊಬ್ಬನೇ ‘ಮಾಲಿಕ' ನಾಗಿ ಉಳಿದು. ಶ್ರೀಪಾದರಾವ ಕೇವಲ ನಟ, ನಿರ್ದೇಶಕನಾಗಿ ಕೆಲಸ ಮಾಡಬೇಕು! ಇಬ್ಬರ ನಡುವೆ ಈ ಕುರಿತು ಸಹಮತ ಸಾಧ್ಯವೇ ಆಗಲಿಲ್ಲ. ವರ್ಷೊಪ್ಪತ್ತಿನಲ್ಲಿ ನಾಟಕ ಮಂಡಳಿ ಮುಚ್ಚಿತು. ಹರಿಶ್ಚಂದ್ರ, ಚಿತ್ರಾಂಗದಾ, ಮಲ್ಲಮ್ಮ ನಾಟಕಗಳಿಂದಾಗಿ ಜನಪ್ರಿಯತೆ ಪಡೆದಿದ್ದರೂ ರಂಗಸೇವೆಯನ್ನು ಮುಂದುವರಿಸಲಾಗದ ಬೇಸರ, ವಿಷಾದ ಉಳಿದುಕೊಂಡವು. ಜೊತೆಗೆ, ಸೂಡಿಯಲ್ಲಿ ಕಂಪನಿ ವಿಸರ್ಜನೆಗೊಂಡ ಪ್ರಸಂಗ ಒದಗಿದಾಗ ೧೦ ಸಾವಿರ ರೂ.ಗಳ ಸಾಲದ ಹೊರೆ ಶ್ರೀಪಾದರಾಯರೊಬ್ಬರ ಮೇಲೆಯೇ ಬಿದ್ದಿತು.

ನಾಟ್ಯ ಜೀವನದಲ್ಲಿ ಎರಡನೆಯ ಬಾರಿ ಹೌಹಾರುವ ಪರಿಸ್ಥಿತಿ. ಯಾರಿಗೂ ಮುಖ ತೋರಿಸುವ ಮನಸ್ಸು ಇರಲಿಲ್ಲ. ಆ ಹೊತ್ತಿನಲ್ಲಿ ಶ್ರೀಪಾದರಾಯರ ಸಹಾಯಕ್ಕೆ ಮುಂದಾದವರು ಇಳಕಲ್ಲದ ಗಿರಿಯಪ್ಪಾ ಮೆದಿಕೇರಿಯವರು. “ಬನಶಂಕರೀ ನಾಟ್ಯ ಸಂಘ”ದ ಮಾಲಿಕರಾದ ಗಿರಿಯಪ್ಪ ದಿಲ್‌ದಾರ್ ಮನುಷ್ಯ. ನಾಟಕ ಕಂಪನಿಯ ಮಾಲಿಕರಲ್ಲಿ ಮಾಮೂಲಾಗಿರುತ್ತಿದ್ದ ದುರ್ಗುಣ, ದುಶ್ಚಟಗಳಿಂದ ಹೊರತಾಗಿದ್ದ ಗಿರಿಯಪ್ಪ, ನಾಟಕ ಪ್ರದರ್ಶನಗಳಿಂದ ಲಾಭ ಮಾಡಿಕೊಳ್ಳುವ ವೃತ್ತಿವಂತಿಕೆ ಉಳ್ಳವರಾಗಿದ್ದರು. ಸದಭಿರುಚಿಯ ನಾಟಕಗಳ ಮೂಲಕವೇ ಅದು ಸಾಧ್ಯವಾಗಬೇಕು ಎಂಬುದಕ್ಕಾಗಿ ಅವರು ಶ್ರೀಪಾದರಾಯರ ಸಹಕಾರ ಅಪೇಕ್ಷಿಸಿ, ಇಳಕಲ್ಲಿಗೆ ಕರೆದೊಯ್ದರು.

ಬನಶಂಕರೀ ನಾಟ್ಯ ಸಂಘಕ್ಕಾಗಿ ಎಚ್.ಎನ್.ಹೂಗಾರರ “ದಸರಾ”, ಹುನಗುಂದ ಮಹಮದಲಿಯವರ “ಸೇಡಿನ ಕಿಡಿ” ಮುಂತಾದ ನಾಟಕಗಳನ್ನು ಕೂಡಿಸಿ ಆಡಿದರು. ನಟನೆಯನ್ನು ಬದಿಗಿರಿಸಿ, ಕಂಪನಿಯ ಆಡಳಿತವನ್ನು ವಹಿಸಿಕೊಂಡರು.

ಮಾಲಿಕರಿಗೆ ಲಾಭ ತರುವಂತೆ ನಟರನ್ನು ದುಡಿಸಿಕೊಂಡರು. ಮೆದಿಕೇರಿಯವರ ಮಕ್ಕಳಿಗೆ ಪಾಠ ಹೇಳುವ ‘ಮಾಸ್ತರ'ರೂ ಆಗಿದ್ದುದು ಶ್ರೀಪಾದರಾಯರ ಒಂದು ಒಳ್ಳೆಯ ಅನುಭವ.

## ೬. ಪರದಾಟ - ಹೊಂದಾಣಿಕೆ

ಕರ್ನಾಟಕದಲ್ಲಿ ವೃತ್ತಿರಂಗಭೂಮಿ ಯಾವ ಕಾಲಾವಧಿಯಲ್ಲೂ ಸ್ಥಿರತೆ, ನಿರಂತರತೆ ಸಾಧಿಸಿದ್ದಿಲ್ಲ. ‘ಗುಬ್ಬಿ’, ‘ಗೋಕಾಕ’, ‘ಏಣಗಿ' ಕಂಪನಿಗಳಂತಹ ಕೆಲವೇ ಕೆಲವು ವೃತ್ತಿ ಸಂಘಗಳು ನಿರಂತರತೆಯನ್ನು ಸಾಧಿಸಿದ್ದವು. ಅಧಿಕಾಂಶ ಕಂಪನಿಗಳು ಐದೋ-ಹತ್ತೋ ವರುಷಗಳ ಅಲ್ಪಾವಧಿಯಲ್ಲಿ ಯಶಸ್ಸು, ಕೀರ್ತಿಗಳನ್ನು ಗಳಿಸಿ ವಿಸರ್ಜನೆಗೊಳ್ಳುತ್ತಿದ್ದುದೇ ಸಾಮಾನ್ಯ. ಈ ಏರಿಳಿವುಗಳು ನಟರ ಕಲಾಸಾಧನೆಯ ಮೇಲೆ, ವೈಯಕ್ತಿಕ ಜೀವನದ ಮೇಲೆ ಮಾಡಿದ ಪರಿಣಾಮಗಳದ್ದೇ ಒಂದು ಬೃಹತ್ ಕತೆ. ವೃತ್ತಿವಂತಿಕೆಯನ್ನು ಯಾವೊಂದು ಕಂಪನಿಯಾಗಲಿ, ನಟನಾಗಲಿ ನಿಶ್ಚಿಂತೆಯಿಂದ ನಂಬಿ, ಕಲೆಯ ಉನ್ನತಿಯತ್ತ ಲಕ್ಷ್ಯ ಕೇಂದ್ರೀಕರಿಸಿ ಬಾಳುವಂತಹ ಅವಸ್ಥೆ ಒದಗಿದುದು ತೀರಾ ಅಪರೂಪ. ಶ್ರೀಪಾದರಾಯರು ಪರಿಸ್ಥಿತಿ-ಪರಿಣಾಮಗಳ ‘ಶಿಶು'ವಾಗಿ ಹರಿದಾಡುವಂತಾಯಿತು: ಕೆಲವು ಸಲ, ತಮ್ಮ ಕಲೆಯ ಅಭಿವ್ಯಕ್ತಿಗಾಗಿ ಪರದಾಡಲೂ ಬೇಕಾಯಿತು.

೧೯೫೦-೫೫ರ ಅವಧಿಯಲ್ಲಿ ಗದಗಿನ ಮನೆಯಲ್ಲಿ ತಂದೆಯವರ ಜತೆಗೆ ಹೆಚ್ಚು ಕಾಲ ಕಳೆಯುವ ಅವಕಾಶವಿತ್ತು. ತಂದೆಯವರು ವಾನಪ್ರಸ್ಥಾಶ್ರಮ ಸ್ವೀಕರಿಸಿದ್ದರು. ಅವರ ಸಮಯ ಓದಿನಲ್ಲಿ ಚಿಂತನೆಯಲ್ಲಿ

ಚರ್ಚೆಯಲ್ಲಿ ಉಪಯುಕ್ತವಾಗಿ ಕಳೆಯುತ್ತಿತ್ತು. 'ಉಗ್ರ ಕಲ್ಯಾಣ' ನಾಟಕವನ್ನು ಶ್ರೀಪಾದನಿಂದ ಬರೆಸಿದ್ದು ಆಗಲೇ. ನಾಟಕ ಶಾಸ್ತ್ರದ ಬಗ್ಗೆ ತಮ್ಮಲ್ಲಿ ಹುಟ್ಟುತ್ತಿದ್ದ ಕಲ್ಪನೆಗಳನ್ನು ವಿವರಿಸಿ ಹೇಳುತ್ತಿದ್ದರು. ಶ್ರೀಪಾದ ಅವನ್ನೆಲ್ಲ ಆಲಿಸಿ, ಟಿಪ್ಪಣಿ ಮಾಡಿಕೊಳ್ಳಬೇಕು. ನಾಟಕ ಕಲೆಯ ಪರಿಪಕ್ವ ಅನುಭವಗಳಿಂದ ಕೂಡಿದ ಆ ವಿಚಾರಗಳು ಶ್ರೀಪಾದರಾಯರ ಮನೋಭೂಮಿಕೆಯನ್ನು ತುಂಬಿ ಶ್ರೀಮಂತಗೊಳಿಸಿದವು. ಗಾಂಧೀವಾದಿ ತಂದೆಯವರ ಮುಖ್ಯ ಹವ್ಯಾಸವಾಗಿದ್ದ ಚರಕಾದಿಂದ ನೂಲು ತೆಗೆಯುವುದು; ಆ ನೂಲಿನಿಂದಲೇ ತಮಗೆ ಬೇಕಾದ ಧೋತರ, ಲುಂಗಿ, ಅಂಗಿ, ಒಳ ಅಂಗಿ, ಮೈ ಒರೆಸುವ ಪಂಜೆಗಳನ್ನು ನೇಯ್ದುಕೊಳ್ಳುವುದು ಶ್ರೀಪಾದರಾಯರಿಗೆ ಒದಗಿ ಬಂತು. "ಉಗ್ರ ಕಲ್ಯಾಣ"ವನ್ನು ಹವ್ಯಾಸೀ ಕಲಾವಿದರೊಂದಿಗೆ ರೂಢಿ ಮಾಡಿಕೊಂಡು ಮುಂಬೈ, ದೆಹಲಿಗೆ ಹೋಗಿ ಬಂದ ಅನುಭವ ಶ್ರೀಪಾದರಾಯರ ನಾಟ್ಯ ಜೀವನಕ್ಕೆ ಹೊಸ ಸಾಧ್ಯತೆಗಳನ್ನು ತೆರೆದು ತೋರಿಸಿತು.

೧೯೫೪ ತಂದೆಯವರು ನಿಧನರಾದ ವರ್ಷ. ಅಮೂಲ್ಯ ಜೀವ, ಅತ್ಯಮೂಲ್ಯ ಜೀವನವನ್ನು ಕಳೆದುಕೊಂಡ ಅನುಭವ. ಆದರೆ ಭಾವನೆಗಳಿಂದ ವಿಚಲಿತರಾಗುವಂತಿಲ್ಲ. ಕುಟುಂಬ ಜೀವನವೂ ನಡೆಯಬೇಕು; ನಾಟ್ಯ ಜೀವನವೂ ಮುಂದುವರಿಯಬೇಕು.

ಬಳ್ಳಾರಿಯಿಂದ ಶ್ರೀಪಾದರಾಯರಿಗೆ ಕರೆ ಬಂತು. ಅದು, ಬಿ.ಲಲಿತಮ್ಮನವರ 'ಲಲಿತಕಲಾ ನಾಟಕ ಮಂಡಳಿ'ಯ ಕರೆ. ಅಲ್ಲಿ ಇದ್ದುದು ಒಂದೇ ವರುಷ. 'ಎಚ್ಚಮ ನಾಯಕ' ನಾಟಕದಲ್ಲಿ ಖಳನ ಪಾತ್ರ (ಜಗದೇವ): 'ದೇವದಾಸಿ'ಯಲ್ಲಿ ಸಿದ್ಧನ ಪಾತ್ರ.

ಆನಂತರ ಜಮಖಂಡಿಯ "ಗಜಾನನ ನಾಟಕ ಮಂಡಳಿ"ಯ ದತ್ತಂ ಭಟ್ಟ ಒಡೆಯರರಿಂದ ಕರೆ ಬಂದಿತು. ೧೯೬೪ ರಿಂದ ೧೯೭೦ರ ವರೆಗಿನ ಅವಧಿಯಲ್ಲಿ ಗದಗ, ಹುಬ್ಬಳ್ಳಿ, ಸಿರ್ಸಿಗಳಲ್ಲಿ ಗಜಾನನ ಕಂಪನಿಯ ಸತ್ಯನಾರಾಯಣ ವ್ರತ, ಲಂಬಾಣಿ ಹುಡುಗಿ, ರಾಮಾಯಣ, ಲಂಕಾದಹನ, ರಕ್ತರಾತ್ರಿ ನಾಟಕಗಳು ಜಯಭೇರಿ ಬಾರಿಸಿದವು. ಶ್ರೀಪಾದರಾಯರಿಗೆ 'ಸತ್ಯನಾರಾಯಣ ವ್ರತ'ದಲ್ಲಿ ಹನುಮನ ಪಾತ್ರ ಪೇಟೆಂಟ್ ಆಗಿತ್ತು. ಎಚ್.ಎನ್.ಹೂಗಾರರ "ಲಂಬಾಣಿ ಹುಡುಗಿ"ಯ ಖಳ ಪಾತ್ರ (ಹಕಾರೆಯದು) ಶ್ರೀಪಾದರಾಯರಿಗೆ ಹೇಳಿ ಮಾಡಿಸಿದಂತಿತ್ತು. ಒಬ್ಬ ನಟ, ಹಾಸ್ಯ ಮತ್ತು ಖಳ ಹೀಗೆ ವೈರುಧ್ಯಮಯ ಪಾತ್ರ ನಿರ್ವಹಣೆ ಮಾಡುತ್ತಿದ್ದುದು ವಿಶಿಷ್ಟವೆನಿಸುತ್ತಿತ್ತು ಪ್ರೇಕ್ಷಕರಿಗೆ. ಕಂದಗಲ್ಲರ "ರಕ್ತರಾತ್ರಿ"ಯಲ್ಲಿ ಇವರದು 'ನವಲೀ ಪಕ್ಕ' ಎಂಬ ವಿಚಿತ್ರ ಪಾತ್ರ. ಗಜಾನನ ಕಂಪನಿಯಲ್ಲಿ ದುಡಿಯುವಾಗಲೇ ಗದಗಿನಲ್ಲಿ ನೆಲೆಯೂರಿದ್ದ ಕುಟುಂಬವನ್ನು ತಮ್ಮಲ್ಲಿಗೆ ಕರೆಸಿಕೊಂಡರು. ಸೌ.ಕುಂಕುಮ ಜೋಕೆ-ತೂಕದಿಂದ ಸಂಸಾರ ನಿರ್ವಹಿಸುತ್ತಿದ್ದರು. ಮಕ್ಕಳ ವಿದ್ಯಾಭ್ಯಾಸಕ್ಕೆ ಗಮನ ಕೊಡುವುದು ಅವಶ್ಯವಿತ್ತು. ೧೯೭೦ರ ಸುಮಾರಿಗೆ ಮನೆ-ಕುಟುಂಬದಿಂದ

ದೂರವಿದ್ದು ಸಂಚಾರೀ ಜೀವನ ನಡೆಸುವುದು ಆರ್ಥಿಕವಾಗಿ ಹಾಗೂ ಆರೋಗ್ಯದ ದೃಷ್ಟಿಯಿಂದ ವಿಹಿತವೆನಿಸಲಿಲ್ಲ. ವೃತ್ತಿಯಿಂದ ನಿವೃತ್ತಿ ಎಂಬುದು ನಟನಿಗೆಲ್ಲಿರುತ್ತದೆ? ನಟನೇ ಸ್ವಯಂ ನಿರ್ಧಾರದಿಂದ ಒಂದು ಹಂತಕ್ಕೆ ವಿದಾಯ ಹೇಳಬೇಕು. ಶ್ರೀಪಾದರಾಯರಿಗೆ ವಿಶ್ರಾಂತಿ ಬೇಕು ಅನ್ನಿಸತೊಡಗಿತು. ಗದಗಿನ ಮನೆಗೆ ಹಿಂದಿರುಗಿ, ಸ್ವತಂತ್ರ, ನೆಮ್ಮದಿಯ ಜೀವನವನ್ನು ಒಪ್ಪಿಕೊಂಡರು.

## ೭. ನಿವೃತ್ತಿ - ಪ್ರವೃತ್ತಿ

ಹಿರಿಯ ಮಗ ರತ್ನಾಕರ ಬಿ.ಎ. ಮುಗಿಸಿ, ಬಿ.ಕಾಂ. ಪದವಿಗಾಗಿ ಹವಣಿಸಿದ. ಅಕ್ಕಿಯವರ 'ವಿಜಯಕಲಾ ಮಂದಿರ'ದಲ್ಲಿ ಹತ್ತಾರು ವರ್ಷ ತಬಲಾ ಶಿಕ್ಷಕನಾಗಿ ಕೆಲಸ ಮಾಡುತ್ತ ಶಾಸ್ತ್ರೀಯ ಗಾಯನವನ್ನೂ ಕಲಿತ. ಅವನದು ಕಲಾವಿದನಾಗಿ ಬಾಳುವ ಹಾದಿ. ಆ ಸ್ವಾತಂತ್ರ್ಯ ಅವನಿಗೆ ಕೊಟ್ಟೆ. ಮುಂದೆ ಆತ ನವೋದಯ ಶಾಲೆಯಲ್ಲಿ ಸಂಗೀತ ಶಿಕ್ಷಕನೇ ಆದದ್ದು ಒಳ್ಳೆಯದೇ ಆಯಿತು. ಮಗಳು ವಸುಧಾಳ ಮದುವೆಯನ್ನು ಒಳ್ಳೆ ಮನೆಗೆ ಕೊಡುವ ಮೂಲಕ ನೆರವೇರಿಸಿದೆ. ಅಣ್ಣಯ್ಯ (ಸದಾಶಿವ) ಸ್ವಂತ ಉದ್ಯೋಗ ಹುಡುಕಿಕೊಂಡು ಹೋದ. ಅವನದು ವ್ಯಾಪಾರೋದ್ಯಮದ ಒಲವು. ಹಲವಾರು ವರುಷ ಕಷ್ಟಪಟ್ಟು ತನ್ನ ಕಾಲಮೇಲೆ ತಾನು ನಿಲ್ಲುವಷ್ಟು ಶಕ್ತಿ-ಯುಕ್ತಿ ಬೆಳೆಸಿಕೊಂಡಿದ್ದಾನೆ. ಕೊನೆಯ ಮಗ ಪ್ರಕಾಶ, ಬಿ.ಎಸ್ಸಿ. ಪಾಸಾದ ನಂತರ ಯಾವುದೇ ಉದ್ಯೋಗ ಸಿಗದೆ ಅಭಿನಯದ ಮೇಲೆಯೇ ಕಣ್ಣಿಟ್ಟು ಕುಳಿತವ. ತೀರ ತಡವಾಗಿ ಆತ 'ನೀನಾಸಂ' ತರಬೇತಿ ಪಡೆದ. ನಾಟಕ ಕಲೆಯಲ್ಲಿ ಸ್ನಾತಕೋತ್ತರ ಪದವಿ(ಮಧುರೈ ಕಾಮರಾಜ ವಿ.ವಿ.ದಿಂದ)ಯನ್ನೂ ಗಳಿಸಿದ. ಅವನ ಭವಿಷ್ಯಕ್ಕಾಗಿ ಚಿಂತೆ ಹತ್ತಿತು. ಕುಟುಂಬದ ಆರ್ಥಿಕ ಸ್ಥಿತಿ ಕುಂಟುತ್ತ ಸಾಗಿತ್ತು. 'ದೇಹಿ' ಎಂದು ಯಾರಿಗೂ ಎಂದೂ ಬೇಡಿಕೊಂಡ ಉದಾಹರಣೆ ಇಲ್ಲ. ಆಗಾಗ, ಏಣಗಿಯವರ ಕಂಪನಿಗೆ ಹೋಗುವುದು: ಸಹಕಾರಿ ಸಹಾಯಕನಾಗಿ ಕೆಲಸ ಮಾಡುವುದು ನಡೆದಿತ್ತು. ಗದುಗಿನಲ್ಲಿ 'ಹವ್ಯಾಸಿ' ನಟರೊಂದಿಗೆ, ಸಂಘಟನೆಗಳೊಂದಿಗೆ ಯಾವಾಗಾದರೊಮ್ಮೆ ನಾಟಕ ಕೂಡಿಸುವ, ನಟಿಸುವ, ರಂಗಕರ್ಮ ನೆರವೇರಿಸುವ ಚಟುವಟಿಕೆಗಳು ಇದ್ದೇ ಇದ್ದವು.

'ಪ್ರಕಾಶನ ಭವಿಷ್ಯದ ಹಾದಿ 'ನೀನಾಸಂ'ಗೆ ಹೋಗಿ ಬಂದ ನಂತರ ನಿಚ್ಚಳವಾಯಿತು. ಎಂ.ಎ.ಪದವೀಧರನಾದ ಕೂಡಲೇ ಆತ ಹಂಪಿ ವಿಶ್ವವಿದ್ಯಾಲಯಕ್ಕೆ ಹೋಗಿ ಪಿಎಚ್.ಡಿ. ಗಾಗಿ ಸಂಶೋಧಕ ವಿದ್ಯಾರ್ಥಿ ಎಂದು ಸೇರಿಕೊಂಡ. ಅದಾಗಲೇ ತಿರುಗಾಟ ೯೦-೯೧ ರಲ್ಲಿ ನಟನಾಗಿ ಆತ ತನ್ನ ಅಜ್ಜನ ನೆನಪು ಮರುಕಳಿಸುವಂತಹ ಸಾಧನೆ ತೋರಿಸಿದ್ದನು. ಗರುಡ ಮನೆತನದಲ್ಲಿ ನಟನಾವೃತ್ತಿ, ನನ್ನ ಹಂತಕ್ಕೇ ನಿಂತು, ಒಂದು ಪರಂಪರೆಯೇ ನಿಂತು ಹೋಯಿತಲ್ಲ ಎಂದು ಚಿಂತಿತನಾಗಿದ್ದ ನನಗೆ, ಪ್ರಕಾಶ ಹಿಡಿದ ಹಾದಿ, ನಡೆದ ಹೆಜ್ಜೆ ನನಗೆ ನೆಮ್ಮದಿ, ತೃಪ್ತಿಯನ್ನಂತೂ ತಂದಿವೆ. ಹಂಪಿ ವಿಶ್ವವಿದ್ಯಾಲಯದಿಂದ ಆತ ಪಡೆದ ಪಿಎಚ್.ಡಿ.

ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ : "ವೃತ್ತಿರಂಗಭೂಮಿಯ ಸ್ವರೂಪ". ಈ ಪ್ರಬಂಧ ರಚನೆಗೆ ನನ್ನ ವೃತ್ತಿ ನೆನಪುಗಳು ಮೂಲ ಸಾಮಗ್ರಿಯಾಗಿವೆ. ಗರುಡ ನಾಟ್ಯಪರಂಪರೆ ಎಂದರೆ, ವೃತ್ತಿ-ಪ್ರವೃತ್ತಿಗಳನ್ನು ಬೆಸೆದುಕೊಂಡಿದ್ದ : ಕಲಾಭಿವ್ಯಕ್ತಿಯ ಹಳೆ-ಹೊಸ ಸೂತ್ರಗಳನ್ನು ಸಮನ್ವಯಗೊಳಿಸಿಕೊಂಡಿದ್ದ ; ನಟನೇ ನಾಟಕದ ಕೇಂದ್ರವಾಗಿದ್ದ ವಿಶಿಷ್ಟ ಪದ್ಧತಿಯ ಅನುಸರಣೆ. ಗುಬ್ಬಿ ಕಂಪನಿಗೆ ಹೇಗೆ ಅದರದೇ ಕೆಲವು ವೈಶಿಷ್ಟ್ಯಗಳಿವೆಯೋ ಹಾಗೆ, ನಮ್ಮ ಕಂಪನಿಗೂ ಇವೆ. ಅದನ್ನೆಲ್ಲ ದಾಖಲಿಸುವ ಕೆಲಸ ಪ್ರಕಾಶನಿಂದಾಗಿದೆ. ಪ್ರಕಾಶನ ಮದುವೆ ರಂಗತಜ್ಞೆಯಾಗಿರುವ ಕೆರೆಕೈಯ ರಜನೀ ಭಟ್ಟಳೊಂದಿಗೆ ನೆರವೇರಿದ್ದೂ ಕೂಡ ನಮ್ಮ ಮನೆತನದ ಒಂದು ಉತ್ತಮ ಪರಂಪರೆಯ ಸೂಚನೆ ಎಂದೇ ನಾನು ಭಾವಿಸಿದ್ದೇನೆ. ಅವರಿಬ್ಬರೂ ಸಂಬಳ ತರುವ ನೌಕರಿಗೆ ಹೋಗಲಿಲ್ಲ. ರಂಗಭೂಮಿಯನ್ನು ಆಧುನಿಕ ಸಂದರ್ಭದಲ್ಲಿ ಅರ್ಥಪೂರ್ಣವಾಗಿ ಬಳಸಿಕೊಂಡು ಬದುಕಬಹುದೆಂಬುದನ್ನು ತೋರಿಸುತ್ತಿದ್ದಾರೆ. ಶಿಕ್ಷಣ, ತರಬೇತಿ, ಪ್ರಾತ್ಯಕ್ಷಿಕೆ ಮತ್ತು ನಾಟಕ ಪ್ರದರ್ಶನ ಕಾರ್ಯಕ್ರಮಗಳನ್ನು ರೂಪಿಸಿ ಈ ಮಗ-ಸೊಸೆ ಗರುಡ ನಾಟ್ಯ ಪರಂಪರೆಯನ್ನು ಮುಂದುವರಿಸಿಕೊಂಡು ಹೊರಟಿರುವುದು ನನಗೆ ತೃಪ್ತಿ-ಹೆಮ್ಮೆ ಎರಡನ್ನೂ ತಂದಿದೆ."

ಮೇಲಿನ ಮಾತುಗಳನ್ನು ಮೆಲುಕು ಹಾಕುವ ಶ್ರೀಪಾದರಾಯರಿಗೀಗ ಎಂಬತ್ತೆರಡರ ಹರಯ. ಒಳ್ಳೇ ಆರೋಗ್ಯ ಭಾಗ್ಯ ಅವರಿಗಿರುವುದಕ್ಕೆ ಕಾರಣ, ದುಶ್ಚಟಗಳ ಸೋಂಕಿಲ್ಲದಿರುವುದು ಮತ್ತು ಗರುಡರು ಹೇಳಿಕೊಟ್ಟ ಜೀವನ ಸೂತ್ರದನ್ವಯ ಬಾಳನ್ನು ಸಾಗಿಸಿರುವುದು. ೧೯೪೨ ರ ನಂತರ, ನಟನಾ ವೃತ್ತಿಯನ್ನೇ ನಂಬಿ, ಅನುಸರಿಸಿ ಬಾಳಿದ್ದು, ತಂದೆಯವರು ವಿಧಿಸಿದ ಧ್ಯೆಯವನ್ನು ಪೂರೈಸಲು ಕಷ್ಟ-ನಷ್ಟ, ಅವಮಾನಗಳು ಬಂದರೂ ಎದುರಿಸುವ ತಾಕತ್ತು ಬೇಕಾದಷ್ಟಿತ್ತು. ಆರ್ಥಿಕವಾಗಿ ಮುಗ್ಗಟ್ಟಿನ ದಿನಗಳನ್ನು ಕಳೆದದ್ದೇ ಹೆಚ್ಚು. ತಂದೆಯವರಿಂದ ಬಳುವಳಿಯಾಗಿ ಬಂದ ಭೌತಿಕ ಆಸ್ತಿ ಮನೆಯೊಂದೇ. ಮನೆಯನ್ನೂ ಬಿಡದೆ, ಮನೆತನವನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದ ಸಮಾಧಾನ ಶ್ರೀಪಾದರಾಯರಿಗಿದೆ. ಓದುವ ಹವ್ಯಾಸ ಅವರನ್ನು ಪ್ರಜ್ಞಾವಂತ ಕಲಾವಿದನನ್ನಾಗಿ ಉಳಿಸಿದೆ. ತಂದೆಯಿಂದ ಬಳುವಳಿಯಾಗಿ ಬಂದ ಹವ್ಯಾಸ ಓದು ಮತ್ತು ಬರೆಹ. ಕನ್ನಡದ ಎಲ್ಲಾ ಪ್ರಮುಖ ಲೇಖಕರ ಕತೆ, ಕಾದಂಬರಿ, ವೈಚಾರಿಕ ಕೃತಿಗಳನ್ನು ಓದಿರುವ ಶ್ರೀಪಾದರಾಯರಿಗೆ ನಾಟಕಕ್ಕೂ ಸಾಹಿತ್ಯಕ್ಕೂ ಇರುವ ನಂಟಸ್ತಿಕೆಯ ಬಗ್ಗೆ ಜಿಜ್ಞಾಸೆ ಬಹಳ. "ವೃತ್ತಿ ರಂಗದವರು ಆಡುತ್ತಿದ್ದ, ಜನ ಮೆಚ್ಚಿಗೆ ಗಳಿಸಿದ್ದ ರಂಗಕೃತಿಗಳು ಪುಸ್ತಕ ರೂಪದಲ್ಲಿ ಬರಬಾರದೇಕೆ? ಹಾಗೆ ಬಂದವುಗಳನ್ನು ಸಾಹಿತ್ಯಕೃತಿ ಎಂದೇಕೆ ವಿಮರ್ಶಕರು ಪರಿಗಣಿಸುವುದಿಲ್ಲ!

ಇಂಥ ಪ್ರಶ್ನೆಗಳನ್ನು ಕೇಳುವ ಹಾಗೂ ಉತ್ತರಗಳಿಗಾಗಿ ಚರ್ಚೆ ಮಾಡುವ ಹವ್ಯಾಸವನ್ನವರು ಬೆಳೆಸಿಕೊಂಡಿದ್ದಾರೆ. ವೃತ್ರಿಮಂಡಳಿಯವರು 'ವಾಣಿಜ್ಯೀಕರಣ' ಕ್ಕೆ ಬಲಿಬಿದ್ದು ರಂಗಭೂಮಿಯ ಪ್ರಾಮಾಣಿಕತೆಯನ್ನು ಕೆಡಿಸಿರಬಹುದು; ಹಾಗೆಂದು ಸಾರಾಸಗಟಾಗಿ ವೃತ್ತಿವಂತರನ್ನು ನಾಟ್ಯ ಕಲೆಯ ಆಚೆ

ಇಟ್ಟು, ರಂಗಭೂಮಿಯ ಚರಿತ್ರೆಯನ್ನು 'ಅಕಾಡಮಿಕ್' ಶಿಸ್ತಿನಲ್ಲಿ ಬರೆಯುವವರ ದೃಷ್ಟಿ ಎಷ್ಟು ಸಮಂಜಸ ಎಂಬುದು ಶ್ರೀಪಾದರಾಯರ ಮತ್ತೊಂದು ತಕರಾರು.

"ಸಾಹಿತ್ಯದ ಸೊಗಸು ನಾಟಕದ ಅವಿಭಾಜ್ಯ ಅಂಗ (ಸೊಬಗು)" ಎಂದು ಒಪ್ಪುವ ಶ್ರೀಪಾದರಾಯರು, ಸಣ್ಣಕತೆ, ಕಥನ ಕವನಗಳನ್ನು 'ರಂಗ'ಕ್ಕೆ ಮಾರ್ಪಡಿಸಬೇಕೆಂದು ಅಂದುಕೊಳ್ಳುತ್ತಾರೆ. ಕವಿ ಅಡಿಗರ 'ಭೂಮಿಗೀತ' ಹಾಗೂ ಝುಂಜರವಾಡರ ಖನನೋದ್ಯಮದಂತಹ ಕವಿತೆಗಳನ್ನು ಅಭಿನಯಿಸಿ ದೃಶ್ಯಾತ್ಮಕ ರೂಪಕ್ಕೆ ಮಾರ್ಪಡಿಸಬೇಕೆಂದು ಪ್ರಯತ್ನಪಟ್ಟಿದ್ದಾರೆ. ರಂಗಗೀತೆಯನ್ನು ಯುವ ಗಾಯಕ-ಗಾಯಕಿಯರಿಂದ ಹಾಡಿಸಿ, ಧ್ವನಿ ಮುದ್ರಿಸಿಕೊಂಡು ಆ ಪರಂಪರೆಯ ಪುನರುಜೀವನಕ್ಕೆ ಹಾತೊರೆಯುತ್ತಿದ್ದಾರೆ.

೧೯೮೮ ರಿಂದ ೧೯೯೮ರವರೆಗೆ, ಶ್ರೀಪಾದರಾಯರು ತಮಗಿದ್ದ ಸಾಹಿತ್ಯ-ಸಂಸ್ಕೃತಿ ಪ್ರೇಮವನ್ನು ತೋರಿಸಿದ ಬಗೆಯನ್ನು ಇಲ್ಲಿ ದಾಖಲಿಸಲೇಬೇಕು. ತಮ್ಮ ಮನೆಯ ಅಟ್ಟದ ಭಾಗವನ್ನು ಅವರು "ಸಾಹಿತ್ಯ ಕಲಾ ವೇದಿಕೆ"ಯ ಸಭೆಗಳಿಗೆ ಮುಕ್ತವಾಗಿ ಬಿಟ್ಟುಕೊಟ್ಟಿದ್ದರು. ತಿಂಗಳಿಗೊಮ್ಮೆ ವೇದಿಕೆಯು ಕಾವ್ಯವಾಚನ, ಕಥಾವಾಚನ, ನಾಟಕ ವಿಮರ್ಶೆ, ಪ್ರಸ್ತುತ ರಾಜಕೀಯ, ಶೈಕ್ಷಣಿಕ ವಿಚಾರ ವಿನಿಮಯ, ಚರ್ಚೆ, ಉದಯೋನ್ಮುಖರ ಬರೆಹಗಳ ವಾಚನ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿತ್ತು. ೩೦-೪೦ ಜನ ಸಾಹಿತ್ಯಾಸಕ್ತರು ಒಟ್ಟಿಗೆ ಸೇರಿ "ಸಾಹಿತ್ಯ ಸಂಜೆ"ಯ ಸವಿಯನ್ನು, ಸೊಬಗನ್ನು "ಅನುಭವಿಸುತ್ತಿದ್ದರು. ಶ್ರೀಪಾದರಾಯರು ಪ್ರತಿಯೊಂದು ಸಭೆಯಲ್ಲಿ ಕೇಳುಗನಾಗಿ, ಜಿಜ್ಞಾಸುವಾಗಿ ಪಾಲುಗೊಳ್ಳುತ್ತಿದ್ದರು. ಈಗಲೂ ಅಂತಹ ಸಂದರ್ಭಗಳಿಗಾಗಿ ಹಾತೊರೆಯುತ್ತಿದ್ದಾರೆ.

ನೂಲುವುದು. ಗ್ರಂಥ ಪಾಠ, ವಾಚನ, ಹರಟೆ, ಹೊಸ ಹೊಸ ನಾಟ್ಯ ಪ್ರಯೋಗಗಳ ವೀಕ್ಷಣೆ, ಚರ್ಚೆ, ಹಳೆಯ ನೆನಪುಗಳ ನಿರೂಪಣೆ – ಇವು ಶ್ರೀಪಾದರಾಯರ ಈಗಿನ ಕಾಲಯಾಪನೆಯ ಚಟುವಟಿಕೆಗಳು. ಗರುಡರ ೧೦ ಪ್ರಮುಖ ನಾಟಕಗಳನ್ನು ಈಗಿನ ಯುವ ನಟ-ನಟಿಯರಿಂದ ಆಡಿಸಿ ನೋಡಬೇಕೆಂಬುದು ಅವರ ಕನಸು. ಹಳೆ-ಹೊಸತು ಹದವಾಗಿ ಬೆರೆತು ನವೀನ ನಾಟಕ ರೂಪ ಬೆಳೆಯಬೇಕೆಂಬುದು ಅವರ ಮನದಿಂಗಿತ. ಇವುಗಳ ಈಡೇರಿಕೆಗಾಗಿ ಅವರ ಆಸೆಯ ಕಣ್ಣುಗಳು ಪ್ರಕಾಶ ಗರುಡ ಹಾಗೂ ರಜನಿ ಗರುಡರು ಸದಾ ಹೊರಳಿರುವುದು ಅವರಿಗಿರುವ ಆಶಾವಾದದ ಗುರುತು.

## ತೆರೆ - ನಾಲ್ಕು

ಏಕರೆ

**ಸಾಹಿತ್ಯ ರಚನೆ**

ಶ್ರೀಪಾದರಾಯರಿಗೆ ತಂದೆಯಿಂದ ದೊರೆತ ಮಹತ್ತ್ವದ ಶಿಕ್ಷಣ ಮತ್ತು ತರಬೇತಿಯೆಂದರೆ ಬರೆಹ, ರಚನೆ. ತಂದೆಯ ಹಾಗೆ ಗ್ರಂಥಾಧ್ಯಯನದಲ್ಲಿ ಮಗ್ನರಾಗಿ, ನಾಟಕಕ್ಕೆ ಬೇಕಾದ ವಸ್ತು ವಿಶೇಷ ಸಂಗತಿಗಳನ್ನು ಕಲೆ ಹಾಕುವ ಹವ್ಯಾಸ ಇವರಿಗಿದೆ. ಕಂಪನಿ ನಾಟಕಗಳಲ್ಲಿ ಪ್ರಚಲಿತವಿದ್ದ ಹಾಡಿನ ಕೆಲವು ಮಟ್ಟುಗಳನ್ನು ರೂಢಿಸಿಕೊಂಡು ಭಕ್ತಿಗೀತೆ ಹಾಗೂ ಭಜನಾವಳಿ ರಚಿಸಿದ್ದಾರೆ. ಅವುಗಳಲ್ಲಿ ಹಲವು ಎಚ್.ಎಂ.ವಿ. ಕಂಪನಿಯ 'ಹಾಡಿನ ತಟ್ಟೆ'ಗಳಲ್ಲಿ ಧ್ವನಿ ಮುದ್ರಣಗೊಂಡಿವೆ. ಇತ್ತೀಚೆಗೆ 'ಗಾಯತ್ರೀ ಮಾತಾ' ಎಂಬ ಧ್ವನಿ ಸುರುಳಿಗಾಗಿ ಇವರು ಬರೆದ ಸ್ತುತಿ ರೂಪದ ಹಾಡುಗಳು ಭಾವುಕ ಜನರ ಗಮನ ಸೆಳೆದಿವೆ. ಸ್ವ-ಭಾವಗೀತೆಗಳನ್ನು ಬರೆದಿದ್ದಾರೆ. ಅವು ಅಪ್ರಕಟಿತವಾಗಿದ್ದು, ಅನುಬಂಧದಲ್ಲಿ ಈಗಷ್ಟೇ ಸೇರ್ಪಡೆಯಾಗಿವೆ.

ನಾಟಕ ರಚನೆಯಲ್ಲಿ ಶ್ರೀಪಾದರಾಯರು ಒಂದಿಷ್ಟು ಶ್ರಮ, ಸಾಕಷ್ಟು ಪ್ರತಿಭೆಯನ್ನು ತೋರಿಸಿದ್ದಾರೆ. ಕಂಪನಿ ನಾಟಕಗಳ ಸಹವಾಸ ತೊರೆದ ನಂತರ ಗದಗಿನಲ್ಲಿ ಅವರು ಸುಮ್ಮನೆ ಕೂತು ಹೊತ್ತುಗಳೆದಿಲ್ಲ. ಹವ್ಯಾಸಿ ಕಲಾವಿದರಿಗಾಗಿ ಕೆಲವು ನಾಟಕಗಳನ್ನು ಬರೆದುಕೊಟ್ಟಿದ್ದಾರೆ: ತಾವೇ ನಿರ್ದೇಶನ ಮಾಡಿ ರಂಗದ ಮೇಲೆ ತಂದಿದ್ದಾರೆ. ಅಂಥವುಗಳಲ್ಲಿ ಕೆಲವು ಹೀಗಿವೆ :

### ೧. ಚೋಖಾ ಮೇಳ

• ೧೯೭೯ರಲ್ಲಿ ಗದಗಿನ ಹವ್ಯಾಸಿ ಕಲಾವಿದರ ಒಂದು ಮೇಳವನ್ನು ಕಟ್ಟಿದಾಗ, ಈ ನಾಟಕವನ್ನು ರಚಿಸಿದರು. ಚೋಖಾ ಮೇಳ, ಮಹಾರಾಷ್ಟ್ರದ ಒಬ್ಬ "ಅಸ್ಪೃಶ್ಯ" - ಪಾಂಡುರಂಗ ಭಕ್ತ. ಮಧ್ಯಕಾಲೀನ ಸಮಾಜದಲ್ಲಿ ಅಸ್ಪೃಶ್ಯತೆಯ ಆಚರಣೆ ಎಷ್ಟು ಪ್ರಬಲವಾಗಿತ್ತೆಂದರೆ, ಭಕ್ತಿ ಮಾರ್ಗದಲ್ಲಿ ನಡೆದು ಬಂದ ಶೂದ್ರ, ಅಸ್ಪೃಶ್ಯ ಭಕ್ತರಿಗೆ ದೇವಾಲಯದ ಪ್ರವೇಶ ಕಟ್ಟುನಿಟ್ಟಾಗಿ ನಿಷಿದ್ಧವಿತ್ತು. ಚೋಖಾ ಮೇಳ ಪರಮ ವಿಠ್ಠಲ ಭಕ್ತ, ಬಡವನಾದ ಅವನನ್ನು ಸವರ್ಣಿಯರು ದೂರ ಅಟ್ಟುತ್ತಿದ್ದರು. ತನ್ನ ಕಡು ಭಕ್ತಿಯಿಂದ, ಸದ್ವರ್ತನೆಯಿಂದ ಚೋಖಾ ಮೇಳ ಪಾಂಡುರಂಗನ ಮನಸು ಕರಗಿಸಿ, ದೇವಾಲಯ ಪ್ರವೇಶಿಸಿ ಐಕ್ಯನಾಗುತ್ತಾನೆ. ಸವರ್ಣೀಯರ ದುರಾಗ್ರಹ, ಬಡಿವಾರ. ಬೂಟಾಟಿಕೆಯ ದೈವ ಭಕ್ತಿಯನ್ನು ನಾಟಕದಲ್ಲಿ ವಿಡಂಬಿಸಲಾಗಿದೆ. ಅವರ ದೌರ್ಜನ್ಯವನ್ನು ಎದುರಿಸಿಯೂ ಭಕ್ತಿಯ ಛಲ ಮೆರೆಯುವ ಚೋಖಾನ ಪಾತ್ರ ಕರುಣೆಗೂ ಅನುಕಂಪಕ್ಕೂ ಒಳಗಾಗುವಂತೆ ಚಿತ್ರಿಸಿರುವುದು ಶ್ರೀಪಾದರಾಯರ ವಿಶೇಷತೆ. ನಾಟಕದ ದಾಟಿ-ಶೈಲಿ ಸದಾಶಿವರಾಯರ ಅಪ್ಪಟ ಅನುಕರಣೆಯಾಗಿದ್ದು ಅಲ್ಲಗಳೆಯಲಾಗದ ಅಂಶ. ಚೋಖ ಮೇಳನ ಪಾತ್ರವನ್ನು ವಹಿಸಲು ಶ್ರೀಪಾದರಾಯರು ಕರೆಸಿದ್ದು ತಮ್ಮ ರಂಗಮಿತ್ರ ದುರ್ಗಾದಾಸರನ್ನು, ೧೯೮೧ರಲ್ಲಿ ಗದಗಿನಲ್ಲಿ ಎರಡು ಪ್ರಯೋಗಗಳನ್ನು ಕಂಡ ಈ ನಾಟಕ, ವ್ಯವಸಾಯ ರಂಗಭೂಮಿಯಲ್ಲಿ ಸದಭಿರುಚಿ, ಆದರ್ಶಪರ ನಿಲುವುಗಳು

ಹೇಗಿದ್ದವೆಂಬುದನ್ನು ನೆನಪು ಮಾಡಿಕೊಟ್ಟಿತು. ಆಡುಮಾತಿನ ಸಹಜ ಬಳಕೆಯಿಂದ ಈ ನಾಟಕ ಪ್ರೇಕ್ಷಕರ ಹೃದಯ ಸೆಳೆಯಿತು.

## ೨. ಹರಿಮಾಯಾ (ಕೃಷ್ಣ ಗಾರುಡಿ)

ಭಕ್ತಿಭಾವ ಬಿಂಬಿಸುವ ಇನ್ನೊಂದು ನಾಟಕ ಇದು. ೧೯೮೨ರಲ್ಲಿ ಇದನ್ನು ರಚಿಸಿದ್ದು ರಂಗಪ್ರವೇಶವನ್ನಿನ್ನೂ ಕಂಡಿಲ್ಲ. ಪಂಚಪಾಂಡವರಲ್ಲಿ ಅರ್ಜುನ ಮತ್ತು ಭೀಮರು ರಜೋಗುಣ, ತಮೋಗುಣಕ್ಕೆ ಬಲಿಯಾಗಿ ಶ್ರೀಕೃಷ್ಣನಲ್ಲಿ ತಮಗಿದ್ದ ಸ್ವಾಭಾವಿಕ ಭಕ್ತಿ, ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ. ತಾವು ಸ್ವತಃ ಅಜೇಯರೆಂದು, ಅಸಹಾಯ ಸಾಹಸಿಗಳೆಂದು ಸೊಕ್ಕಿನಿಂದ ಮೆರೆಯತೊಡಗಿದ ಇವರಿಬ್ಬರಿಗೆ ಬುದ್ಧಿ ಕಲಿಸಲು ಶ್ರೀಕೃಷ್ಣ ಹೂಡುವ ಆಟವೇ ಗಾರುಡಿ ವೇಷದ್ದು. ಕೃಷ್ಣನ ಮಾಯಾ ರೂಪವನ್ನು ಗುರುತು ಹಚ್ಚಲಿಕ್ಕಾಗದೇ ಭೀಮಾರ್ಜುನರು ಫಜೀತಿಗೆ ಒಳಗಾಗಿ ಒದ್ದಾಡುತ್ತಾರೆ. ಕೊನೆಗೆ ಫಜೀತಿಯಿಂದ ಪಾರಾಗಲು ಸಾತ್ವಿಕ ಮನೋಭಾವದಿಂದ ಪ್ರೇರಿತರಾಗಿ ಕೃಷ್ಣನಿಗೆ ಶರಣಾಗತರಾಗುತ್ತಾರೆ. ಗೆದ್ದವರಿಗೆ ಸೊಕ್ಕು ವೈರಿ ; ಸೋಲು-ಗೆಲುವು ಏನೇ ಬರಲಿ. ಭಕ್ತನಾದವನು ಹರಿಯ ಕೃಪೆಯ ನೆರಳಲ್ಲೇ ಬದುಕಿ, ನಯ-ವಿನಯದಿಂದ ಶಕ್ತಿ ಪ್ರದರ್ಶನ ಮಾಡಬೇಕು ಎಂಬುದು ನಾಟಕದ ತಿರುಳು. ಹರಿಯ ಮಹಿಮೆಯನ್ನು ಪ್ರತಿಪಾದಿಸುವ ಈ ನಾಟಕ ರಂಜನೀಯವೂ ಆಗಿದೆ; ಬೋಧಪ್ರದವೂ ಆಗಿದೆ. ಶ್ರೀಪಾದರಾಯರ ನಾಟ್ಯಾನುಭವದ ಪಕ್ವತೆ ಇಲ್ಲಿ ನಿದರ್ಶನಕ್ಕೆ ಬಂದಿದೆ.

## ೩. ಕುಂದರನಾಡ ಕಲಿ

ವೀರರಾಣಿ ಕಿತ್ತೂರು ಚೆನ್ನಮ್ಮನ ಬಲಗೈ ಬಂಟನಾಗಿ, ಕಿತ್ತೂರ ನಾಡ ಕಲಿಯಾಗಿ ಬ್ರಿಟೀಶರ ವಿರುದ್ಧ ಸೆಣಸಾಡಿದ ಸಂಗೊಳ್ಳಿ ರಾಯಣ್ಣನ ಕುರಿತ ನಾಟಕ ಇದು. ಬೆಳಗಾವಿ, ಬೈಲಹೊಂಗಲ ತಾಲೂಕುಗಳನ್ನೊಳಗೊಂಡ ಪ್ರದೇಶ ಕುಂದರನಾಡು. ರಾಯಣ್ಣ ಈ ನಾಡಿನ ಜನರ ಕೆಚ್ಚಿನ ಪ್ರತೀಕ. ಕೂಟಯುದ್ಧ (ಗೆರಿಲ್ಲಾ ವಾರ್)ದಲ್ಲಿ ಪರಿಣಿತನಾಗಿದ್ದ ಈತ, ಚೆನ್ನಮ್ಮನ ಪರಾಭವದ ನಂತರ, ದೇಸಗತಿಯನ್ನು ಇಂಗ್ಲೀಷರಿಂದ ಮುಕ್ತಗೊಳಿಸಲು ಸೈನ್ಯ ಕಟ್ಟಿದನು. ರಾಯಣ್ಣನ ಮುಗ್ಧತೆ, ನಾಡಪ್ರೇಮ, ರಾಜಭಕ್ತಿ, ಸಾಹಸಪ್ರಿಯತೆ, ತಂತ್ರಗಾರಿಕೆಯ ಗುಣಗಳನ್ನು ಶ್ರೀಪಾದರಾಯರು ಅಳವಡಿಸಿ ರಚಿಸಿದ ಈ ರಂಗಕೃತಿ ನೀತಿಬೋಧಕವಾಗಿದೆ. ಹಳ್ಳಿಗರ ಮಾತುಗಳನ್ನು ಗ್ರಾಮ್ಯ ಶೈಲಿಯಲ್ಲಿ ದಾಖಲಿಸಿದ್ದು ಒಂದು ವಿಶೇಷತೆ. ೧೯೯೭ರಲ್ಲಿ ರಾಷ್ಟ್ರ ಸ್ವಾತಂತ್ರ್ಯದ 'ಸುವರ್ಣ ಮಹೋತ್ಸವ'ದ ಸಂದರ್ಭಕ್ಕಾಗಿ ಶ್ರೀಪಾದರಾಯರು ಈ ನಾಟಕ ಬರೆದದ್ದು. ಕವಿ-ನಾಟಕಕಾರ ಡಾ.ಚಂದ್ರಶೇಖರ ಕಂಬಾರರ ಕೇಳಿಕೆಯ ಮೇರೆಗೆ, ಬಸವರಾಜ

ಕಟ್ಟಿಮನಿಯವರ ‘ರಾಯನಾಯಕ’ ಕಾದಂಬರಿ ಹಾಗೂ ರಾಯಣ್ಣನ ಕುರಿತು ಪ್ರಕಟವಾದ ಲಾವಣಿಗಳನ್ನು ಶ್ರೀಪಾದರಾಯರು ಅಭ್ಯಸಿಸಿ ಈ ನಾಟಕ ಬರೆದದ್ದರಿಂದ ಗಟ್ಟಿಯಾಗಿದೆ.

### ೪. ಮೈಲಾರ ಮಾರ್ತಾಂಡ ಮಹಿಮೆ

ಮೈಲಾರ (ಮಲ್ಹಾರಿ) ದೇವರು ಧಾರವಾಡ - ಬಳ್ಳಾರಿ ಜಿಲ್ಲೆಗಳ ಗ್ರಾಮೀಣ ವಲಯದಲ್ಲಿಯ ಅಸಂಖ್ಯಾತ ಭಕ್ತ ಸಮುದಾಯಕ್ಕೆ ಪ್ರೀತಿಪಾತ್ರನಾದ ಜನಪದ ದೈವ. ಈಶ್ವರನ ಈ ಅವತಾರ, ದೈವ, ಜನಪದಕ್ಕೆ ಕಿರುಕಳ ಕೊಟ್ಟು ಪೀಡಿಸುತ್ತಿದ್ದ ರಾಕ್ಷಸರನ್ನು ಸಂಹಾರ ಮಾಡಿದನೆಂಬುದು ಐತಿಹ್ಯ: ಈ ಕುರಿತು ರೋಚಕವಾದ ಪುರಾಣಕತೆ ಇದೆ. ಇದನ್ನು “ಮಹಿಮೆ”ಯ ರೂಪದಲ್ಲಿ ತೋರಿಸುವ ಸಿನಿಮಾವೊಂದು ಬಂದಿತ್ತು. ನಾಟಕ ಬಂದಿರಲಿಲ್ಲ. ಮೈಲಾರ ಭಕ್ತರ ಆಗ್ರಹ ಮನ್ನಿಸಿ ಶ್ರೀಪಾದರಾಯರು ಬರೆದ ಈ ನಾಟಕ, ಭಕ್ತಿ, ವೀರರಸಭರಿತವಾಗಿದೆ. ಇದಿನ್ನೂ ಪ್ರದರ್ಶನಕ್ಕೆ ಕಾಯ್ದು ಕುಳಿತಿದೆ.

### ಕಿರುನಾಟಕಗಳು

೧. **ಚಿದಂಬರ ಮಹಿಮೆ :** ಗುರ್ಲಹೊಸೂರಿನ (ಈಗ ಮಲಪ್ರಭೆಯಲ್ಲಿ ಮುಳುಗಡೆಯಾದ, ಸವದತ್ತಿಯ ಬಳಿಯ ಹಳ್ಳಿ) ಚಿದಂಬರ ದೀಕ್ಷಿತರು ಮಹಿಮಾವಂತ ಆಧ್ಯಾತ್ಮಿಕ ಸಾಧಕರು. ಅನೇಕರಿಗೆ ಗುರುವಿನೋಪಾದಿಯಲ್ಲಿ ಮಾರ್ಗದರ್ಶನ ಮಾಡಿದ ಇವರ ಕೆಲವು ಮಹಿಮೆಗಳನ್ನು ಬಿಂಬಿಸುವ ನಾಟಕ. ಇದು ರಂಗಪ್ರದರ್ಶನ ಕಂಡಿದೆ.

೨. **ಭವಿಷ್ಯವಾಣಿ** : "ಚಿದಂಬರ ಮಹಿಮೆ”ಯ ಮತ್ತೊಂದು ಅವತರಣಿಕೆ.

೩. **ಮೋಜಿನ ಮದುವೆ :** ಒಂದು ಅಣಕ ನಾಟಕ

೪. **ಪಂಚನಾಮೆ** : ಹಾಸ್ಯ ಪ್ರಹಸನ, ಬುದ್ಧಿವಂತ ಎಂಬ ಒಂದು ಪಾತ್ರದ ಚತುರ ನುಡಿಗಳು ನಾಟಕದ ಜೀವಾಳ.

೫. **ಶಕ್ತಿಗಿಂತ ಯುಕ್ತಿ ಮೇಲು** : ಮಕ್ಕಳಿಗಾಗಿ ಒಂದು ಗೀತ ರೂಪಕ. ಇದು ಶಾಲೆಗಳಲ್ಲಿ ಪ್ರಯೋಗವಾಗಿದೆ.

**೫, ಲೇಖನಗಳು**

ಶ್ರೀಪಾದರಾಯರು ನಾಟಕಕ್ಕೆ ಸಂಬಂಧಿಸಿದಂತೆ ಸಾಂದರ್ಭಿಕವಾಗಿ ಬರೆದಿರುವ ಲೇಖನಗಳು ಸಾಕಷ್ಟಿವೆ. ಕೆಲವು, 'ರಂಗ ತೋರಣ'ದಲ್ಲಿ ಪ್ರಕಟವಾಗಿವೆ. ವ್ಯವಸಾಯ ರಂಗಭೂಮಿಯ ಪುನರುತ್ಥಾನದ ಆವಶ್ಯಕತೆಯನ್ನು ಮನಗಾಣಿಸುವ ಲೇಖನಗಳನ್ನು ಬರೆದಿದ್ದಾರೆ. ಯಜಮಾನರು ಬರೆದಿಟ್ಟ ಹಲವು ಟಿಪ್ಪಣಿಗಳನ್ನು ಪರಿಷ್ಕರಿಸಿ ಲೇಖನ ರೂಪ ಕೊಟ್ಟಿದ್ದಾರೆ. ರೇಡಿಯೋ ಪ್ರಸಾರಕ್ಕಾಗಿ, ಸದಾಶಿವರಾಯರ 'ಚವತೀ ಚಂದ್ರ', 'ಏಸುಕ್ರಿಸ್ತ', 'ಪಾದುಕಾ ಪಟ್ಟಾಭಿಷೇಕ' ನಾಟಕಗಳನ್ನು ಪರಿಷ್ಕರಿಸಿ 'ಬಾನುಲಿ ರೂಪ' ಕ್ಕೆ ಅಳವಡಿಸಿದ್ದಾರೆ; ಅವು ಪ್ರಸಾರವಾಗಿವೆ. ಶ್ರೀಪಾದರಾಯರಿಗೆ ಒಳ್ಳೆ ನೆನಪಿನ ಶಕ್ತಿ ಇದೆ. ರಂಗ ಜೀವನಕ್ಕೆ ಸಂಬಂಧಿಸಿದ ರಸವತ್ತಾದ ಅನುಭವಗಳೂ ಅವರಲ್ಲಿವೆ. ರಂಗ ಕಲೆಯ ಸಾಂಪ್ರದಾಯಿಕ ಸ್ವರೂಪವನ್ನು ಕುರಿತು ಅವರ ಮಗ ಡಾ.ಪ್ರಕಾಶ ರಚಿಸಿದ ಮಹಾಪ್ರಬಂಧಕ್ಕೆ ವಿಷಯ-ಸಾಮಗ್ರಿಗಳನ್ನು ಒದಗಿಸಿದವರೇ ಶ್ರೀಪಾದರಾಯರು. ೧೯೯೮-೨೦೦೦ದಲ್ಲಿ ಕೇಂದ್ರದ ಮಾನವ ಸಂಪನ್ಮೂಲ ಸಚಿವಾಲಯವು ಇವರಿಗೆ 'ಫೆಲೋಷಿಪ್' ಮಂಜೂರು ಮಾಡಿದಾಗ, ರಂಗಗೀತೆಗಳ ಒಂದು ತರಬೇತಿ ಕಾರ್ಯಕ್ರಮವನ್ನಿವರು ಹೊಸ ಗಾಯಕರಿಗೆ ನಡೆಸಿಕೊಟ್ಟಿದ್ದಾರೆ: ಮರೆತು ಹೋಗಬಹುದಾದ ನೂರಾರು ರಂಗಗೀತೆಗಳನ್ನು ಮೂಲ ರಾಗ, ಧಾಟಿ, ಮಟ್ಟುಗಳಲ್ಲಿ ಗಾಯಕರಿಂದ ಹಾಡಿಸಿ ಧ್ವನಿ ಸುರುಳಿಗಳಲ್ಲಿ ದಾಖಲಿಸಿಟ್ಟಿದ್ದಾರೆ. ಇವು ಮುಂದೆ ಎಂದಾದರೊಮ್ಮೆ ರಂಗ ಕಲಾವಿದರಿಗೆ ಬೇಕಾದಾವು ಎಂಬುದು ಶ್ರೀಪಾದರಾಯರ ನಿರೀಕ್ಷೆ.

## ತೆರೆ - ಐದು

ಸ್ವರಚಿತ ನಾಟಕಗಳಿಗೆ ಸಾಂದರ್ಭಿಕವಾಗಿ ಬರೆದಿದ್ದ ಹಾಡುಗಳು ಅನೇಕ. ೧೯೫೪-೫೫ರಲ್ಲಿ ಬರೆದ ಈ ರಂಗಗೀತೆಗಳನ್ನು ಹೀಜ್ ಮಾಸ್ಟರ್ಸ್ ವಾಯಿಸ್ (HMV) ಕಂಪನಿಯು ಅಮೀರಬಾಯಿ ಕರ್ನಾಟಕ ಹಾಗೂ ಕಮಲಾ ಪುರಂಧರೆ ಮೊದಲಾದ ಗಾಯಕಿಯರಿಂದ ಹಾಡಿಸಿ, ಗಾನದೋಸೆಗಳನ್ನು ಬಿಡುಗಡೆ ಮಾಡಿದೆ. "ಕ್ರತುಪುರ ಭಕುತ" ಅಂಕಿತವಿಟ್ಟುಕೊಂಡು ಶ್ರೀಪಾದರಾಯರು ಬರೆದ ಭಕ್ತಿ ಹಾಡುಗಳಲ್ಲಿ ಎರಡು ಇಲ್ಲಿವೆ : ಇನ್ನುಳಿದವು ನಾಟಕಕ್ಕಾಗಿ ಬರೆದ ಗೀತೆಗಳು.

ಕವನ - ಒಂದು

**ಸಂದರ್ಭ :** ವೃತ್ತಿ ನಾಟಕ ಕಂಪನಿಯಲ್ಲಿ ನಟ-ನಟರ ನಡುವೆ ಸ್ನೇಹ, ಸೌಹಾರ್ದತೆ ಇರುತ್ತಿದ್ದರೂ, ಮಾಲಿಕರು, ಕವಿಗಳು ಹಲವು ಸಲ ನಟನನ್ನು ಕುಹಕತನದಿಂದ ಕಷ್ಟ ಕೋಟಲೆಗೆ ಈಡು ಮಾಡುತ್ತಿದ್ದುದುಂಟು. ಒಮ್ಮೆ ಅಂಥ ಅನುಭವ ಆದಾಗ ದೇವರಿಗೆ ಮೊರೆ ಹೊಕ್ಕು ಆತ್ಮಸಾಂತ್ವನ ಪಡೆಯುವ ಭಾವ ಈ ಹಾಡಿನಲ್ಲಿದೆ. **ರಾಗ : ಬಾಗೇಶ್ರೀ**

**ತಾಳ : ರುಪ ತಾಲ**

ಬರುವುದೆಲ್ಲವು ತಾನೆ ಇಂದೆ ಬರಲಿ |

ಸಿರಿ ರಮಣ ನಿನ್ನ ದಯವೊಂದೆ ತಾನಿರಲಿ ||ಪ||

ದೊರೆತನವು ಬೇಡೆನಗೆ | ಸಿರಿತನವು ಬೇಡೆನಗೆ |

ಪರತರದ ಮುಕುತಿ ಪದ ಬೇಡವೆನಗೆ ||

ಸ್ಮರಣೆಯದು ನಿನ್ನಯಾ ಮರೆಯದಾ ಮತಿ ನೀಡಿ

ಅರುವಿನೊಳಿರುವಂತೆ ಕರುಣಿಸಯ್ಯಾ ||೧||

ಮೋಸಗಾರರು ಇರಲಿ | ದ್ವೇಷಗೈಯುವರಿರಲಿ |

ಹಾಸ್ಯ ಮಾಡಲಿ ಸಕಲ ಲೋಗರೆಲ್ಲ |

ಯೇಸು ಪರಿತಾಪಗಳು ಗಾಸಿ ಮಾಡಲಿ ಬಂದು |

ಲೇಸು ದಾರಿಯ ಬಯಸಿ ಬಂದೆನಯ್ಯಾ ||೨||

ಇರುವಿನಾ ಕುರುಹನ್ನು ಅರಸುತಲೆ ಬಂದಿರುವೆ |

ನೆರೆ ಕ್ಷೇತ್ರ ತೀರ್ಥಗಳ ಅಲೆದು ಅಲೆದು |

ಪರಮಾಪ್ತನಂತೆ ನೀ ಮನದರಮನೆಯೊಳಗೆ |

ಚಿರವಾಗಿ ಇರುವುದನು ಅರಿಯದಿರುವೆ | ||೩||

ಬೇಡುವುದು ನನ್ನ ಹೊಣೆ ನೀಡುವುದು ನಿನ್ನ ಮನ |

ದೂಡದಿರು ನಾಡಾಡಿಯೆನುತಲೆನ್ನಾ |

ನೋಡು ಸಮ ದಿಟ್ಟಿಯಲಿ ನೀಡುಗಡ ಶಾಂತಿಕರ |

ಜೋಡಿಸುವಂತೆ ಬೇಡುವ ಕ್ರತುಪುರ ಭಕುತನು ||೪||

೧೦-೩-೧೯೬೭

## ಕವನ-ಎರಡು

**ಸಂದರ್ಭ :** ನಮ್ಮ ನಾಟಕ ಕಂಪನಿಯ ಸರ್ವ ಸದಸ್ಯರನ್ನು ಊರ ಸದ್ಗೃಹಸ್ಥರೊಬ್ಬರು ಚಹಾಪಾರ್ಟಿಗೆ ಕರೆದಿದ್ದರು ನನ್ನ ನಟ ಗೆಳೆಯನೊಬ್ಬನನ್ನು ಒಂದು ಕಡೆ ಕೂಡಲು ಕೊಡಲಿಲ್ಲ ಅವರು. ಒಂದೆಡೆಯಿಂದ ಮತ್ತೊಂದೆಡೆ ಎಬ್ಬಿಸಿ, ಕೂಡಿಸಿ ಅವಮಾನ ಮಾಡಿದರು. ಅವನಿಗಾದ ಅವಮಾನದಿಂದಾಗಿ ನನ್ನ ಮನಸ್ಸು ನೊಂದಿತು. ನಟನ 'ಜಾತಿ' "ಕೀಳಾ"ಗಿದ್ದುದು, ಸದ್ಗೃಹಸ್ಥರಿಗೆ ಗೊತ್ತಾಗಿತ್ತಲ್ಲ !

ರಾಗ : ಯಾವುದಾದರೂ ಸರಿ ತಾಳ : ಝಂಪ ತಾಳ

ಏಳೇಳು ಜನುಮಕಿದ ಮರೆಯಬೇಡ |
''ಏಳು' ಎನ್ನುವ ಸ್ಥಳದಿ ಕೂಡಬೇಡ ||ಪ||

ಬಾಳುವೆಯು ತಾನು 'ಬಹು ಕೀಳು' ಎಂದೆನಬೇಡ |
ನಾಳೆ ಬರುವಾ ಬವಣೆಗಿಂದೆ ಅಳಬೇಡ |
ಕೇಳುವವರಿಲ್ಲೆಂದು ಕಳವಳಿಸಬೇಡ || ಸಲೆ ||
ಭಾಳಲೋಚನದ ದುಃಖದಿಂ ದೂರಬೇಡ ||೧||

ನೊಂದ ಜೀವರುಗಳಿಗೆ ಕಟಕಿ ನುಡಿಯಲು ಬೇಡ |
ಮಂದಮತಿಗಳ ಕೂಡ ವಾದಿಸಲು ಬೇಡ |
ಅಂದಾದ ಹಿತನುಡಿಯ ಹೀಗಳೆಯಬೇಡ | ಮದ |
ದಿಂದ ಮಾರಾರಿಯನು ಮರೆಯಬೇಡ ||೨||

ಮೇಲು ನೋಟಕೆ ಮೆಚ್ಚಿ ಮನ ನೀಡಬೇಡ
ಬಾಲೆಯರ ಬಳಗದೊಳು ಬಹು ಬೆರೆಯಬೇಡ |

ಕಾಲವರಿಯದೆ ದುಡುಕಿ ನೀ ಕೆಡಲು ಬೇಡ || ಗಳ ||

ನೀಲ ಪರಶಿವನ ಪಾದವ ಮರೆಯಬೇಡ ||೩||

ಭಾಷೆ ಕೊಟ್ಟಾ ಬಳಿಕ ಬದಲಿಸಲು ಬೇಡ |

ದ್ವೇಷ ಭಾವನೆಯನ್ನು ಬೆಳೆಯಗೊಡಬೇಡ |

ದೋಷಗಳನುಳಿದು ಗುಣಶೇಷಗಳ ಗ್ರಹಿಸಿ |ಗಡ|

ಪೋಷಿಸೈ ಋಜುಮಾರ್ಗ ಮರೆಯಬೇಡ ||೩||

ವೇದಶ್ರುತಿ ಶಾಸ್ತ್ರಗಳು 'ಸಟೆ ಎನ್ನಬೇಡ |

ಬೋಧಿಸಿದ ಗುರುವಾಣಿ ಶಂಕಿಸಲು ಬೇಡ

ಆದಿಯನುಭಾವಿಗಳು ಬೋಧಿಸಿದ ನುಡಿ || ಕೇಳು ||

-ಮೊಹದಿಂ ಪೇಳ್ದ ಕ್ರತುಪುರ ಭಕುತ ನೋಡಾ ||೫||

೧೧-೧೦-೧೯೬೨

ರಂಗಗೀತೆಗಳು

## 'ಭಕ್ತ ಚೋಖಾ ಮೇಳ'

೧

ಬಂದೆವಯ್ಯಾ ದೂರದಿಂದ ಇಂದು ಸೇವೆ ಗೆಯ್ಯಲೆಂದು

ನೊಂದ ಜೀವರಯ್ಯ ನಾವು | ದೀನ ಬಂಧು ಪಾಂಡುರಂಗಾ |

ಕಲಿಯುಗದಲಿ ಮಾನವ ಕುಲದಾ

ಮನದ ಮಲಿನತೆ ಕಳೆಯಲೆಂದು

ಒಲವಿನಿಂದ ಭೀಮರಥಿಯ ತಡಿಯಲ್ಲಿ ನಿಂದು

ಭಕುತರನ್ನುದ್ಧರಿಸುವೆನೆಂದು ಭಾಷೆ ಇತ್ತೆಯಂತೆ |ಇಂದು|

ಸತಿ ರುಕುಮಾಯಿ ಸಹಿತ ಪಾಂಡುರಂಗ ದೀನ ಬಂಧು ||

೧

ಎನ್ನ ಮಕ್ಕಳೆಂಬ ಮಮತೆ ನೀನೆ ತೋರದಲ್ಲಿ

ಮುನ್ನದಾರು ಕೇಳ್ವರಯ್ಯ ಎಮ್ಮ ಕೂಗು | ಪಾಂಡುರಂಗಾ |

ಬಗೆ ಬಗೆಯಾಟಗಳನ್ನಾಡಿ ನೋವು - ನಲಿವುಗಳನು ನೀಡಿ

ಜಗದೊಳು ಭಕುತರ ಬಾಳನ್ನು ಹಸನು ಮಾಡು ಕಾಡಿ ಕಾಡಿ

ಭೇದ ಭಾವಗಳನು ದೂಡಿ ಕೂಡಿ ಬಾಳುವಂತೆ ಮಾಡಿ |

ಮಾನವನಾ ಮಂಕುತನವಾ ದೂರ ಮಾಡು ಕಾಪಾಡು

ಪಾಂಡುರಂಗಾ ಹರಿ ಜಯ ಜಯ ||

೨

ಕಂಡೆ ಕಮಲ ನಯನ ಗೋವಿಂದನಾ ||

ಕಣ್ತುಂಬ ಕಂಡೆ ಪಾಂಡುರಂಗನಾ ||

ಕಂಡೆ ಕಂಡೆ ಭಕುತಾಬ್ಧಿ ಚಂದ್ರಮನಾ |

ಕುಂಜವನ ವಿಹಾರಿ | ಗೋಪೀ ಗೊಪ ಮನೋಹಾರಿ |

ನೀಲತನು ಶರೀರೀ ಹರಿ ಪೀತಾಂಬರಧಾರೀ |

ಕರ್ಣಪೂರ ಕೇಯೂರ ಹಾರ ಮಯೂರ ಮುಕುಟ ಧಾರಿ ||

ಪಂಢರಪುರ ವಾಸಾ | ಅಜ್ಞಾನ ತಿಮಿರ ನಾಶಾ

ಶೇಷ ಶಯನ ಶ್ರೀಶ ಸುಜ್ಞಾನ ಸುಪ್ರಕಾಶಾ

ಪರಮ ಪುರುಷ ಭವ ಪಾಶ ನಾಶ ಸದ್ಭಕ್ತ ವೃಂದ ಪೋಷಾ ||

೧೯೮೧

# ತ್ಯಾಗವೀರ ಲಿಂಗರಾಜರು

(ಲಾವಣಿ ಧಾಡಿ)

೪

ಕರುನಾಡ ವರ ಪುತ್ರನು ತಾನವ | ಲಿಂಗರಾಜ ಶಿರಸಂಗಿ ದೊರೆ |

ಪರಮೋದಾರಿ ಪರೋಪಕಾರಿ | ಪರಮ ಧಾರ್ಮಿಕತೆ ಅವನುಸಿರೆ ||ಪ||

ಲಿಂಗರಾಜ ದ್ವಾಪರದಿ | ಶ್ರೀ ಲಿಂಗರಾಜ ಕಲಿಯುಗದಿ

ಕಂಗೊಳಿಸುತಿಹರು ಯೀಜಗದಿ

ತಿಂಗಳಿನ ತೆರ - ಜನಮನದಿ |

ಭಂಗವಿರದವರ ಕೀರ್ತಿಗೆಂದಿಗೂ | ಜಂಗಮ ಜಗವಿರುವಂತ ಪರಿ ||೧||

ಸಗ್ಗದ ಸಿರಿ ತಾ ಧ್ಯಾನ ರೂಪದಲಿ | ಭಾಗ್ಯವ ತಂದಿದೆ ಭೂಮಿಯಲಿ |

ಹಿಗ್ಗಿನಿಂದಿರುವ ಒಕ್ಕಲು ಮಕ್ಕಳು | ಸುಗ್ಗಿಯ ಮಾಗೀ ಕಾಲದಲಿ ||

ಹುಟ್ಟಿದನವನು ಶಿಗ್ಲಿಯಲ್ಲಿ | ರಾಮಪ್ಪನೆಂಬ ಹೆಸರಿನಲಿ |

ಗಂಗಮ್ಮನ ಸಿರಿ ಮಡಿಲಲ್ಲಿ | ಬೆಳೆದಾನು ರಾಜಭೋಗದಲಿ |

ಕಲಿತ ಕನ್ನಡವ ಶಿರಸಂಗಿಯಲಿ | ಇಂಗ್ಲೀಷು ಕೊಲ್ಹಾಪುರದಲಿ || ||೨||

ಲಿಂಗರಾಜರಿಗೆ ಪಟ್ಟವಾಗಲು ಸಂತಸ ತುಂಬಿತು ಜನರಲ್ಲಿ

ಲಿಂಗ ಜಂಗಮರ ಸೇವೆಗಂದಿನಿಂ ಭಂಗವಿಲ್ಲ ಶಿರಸಂಗಿಯಲ್ಲಿ ||

ವೀರಶೈವ ಜಾಗೃತಿಗೆ ಧರುಮದಾ ಸಭೆಗೆ |

ಹಿರಿ ಪಟ್ಟವಿತ್ತು ಸರಿಯಾಗೀ ಪರಮಾದರದಿಂ ಶಿರ ಬಾಗೀ |

ಧಾರವಾಡ ಬೆಂಗ್ಳೂರ ನಗರ ಜನ ಗೌರವಿಸಿದರೊಂದಾಗೀ || ||೩||

ವೀರಶೈವ ಬಾಂಧವರುದ್ಧಾರಕೆ ಮಾಡಿದಂಥ ಆ ಸುವಿಚಾರ |

ದಾನಗೈದ ಶಿರಸಂಗಿ ನಾಡಿನಾ ಭೂಮಿ ಭಾಗ್ಯವನ್ನು ಆ ವೀರವರ ||

ಅವರಂಥ ವೀರತ್ಯಾಗಿಗಳು ಹುಟ್ಟಿದರೆಂದು ಕರುನಾಡಿನೊಳು ||

ಸಟೆಯಿಲ್ಲವೆನ್ನ ಮಾತಿನೊಳು | ಯೋಚಿಸಿರಿ ನೀವು ಮನಸಿನೊಳು ||

ಅಂದಿನಾ ತ್ಯಾಗವಿಂದಿನಾ ಬೆಳಕು | ಮುಂದಿನಾ ಕವಲು ಬಾಳಿನೊಳು ||೪||

ಇಂದಿನ ದಿನವೇ ಶುಭ ದಿನವು | ಲಿಂಗರಾಜರ ಜನ್ಮದಿನ |


ಬಂಧು ಬಾಂಧವರೆ ಒಂದಾಗಿ ನೀವ್ ಚಂದದಿಂದವರ ನೆನೆಯಿರಿ |

ಕ್ರತುಪುರದ ಭಕುತ ನೀ ಕವನ | ಕಟ್ಟಿದನು ನೆನೆದು ಗುರುಚರಣ

ಮತಿವಂತ ನಾಡ ಬಂಧು ಜನಾ | ಚಿತ್ತವಿಟ್ಟು ಕೇಳಿದಿರಿ ಇದನಾ |

ಕಸವನ್ನು ಬಿಟ್ಟು ರಸವನ್ನು ಸವಿದ ರಸಿಕರಿಗೆ ಎನ್ನ ವಂದನಾ || ||೫||

ಜನವರಿ ೧೦, ೧೯೬೦


ಅನುಬಂಧ - ೧
ಗರುಡರ ಕುಟುಂಬ
ಸದಾಶಿವರಾವ ಗುರುನಾಥ ಶಾಸ್ತ್ರಿ ಗರುಡ (ವೈದ್ಯ)
+ ಭೀಮಾಬಾಯಿ
ಸುಭದ್ರಾ (ದಿ.)
ದತ್ತಾತ್ರೇಯ (ಬೆಂಗಳೂರು)
ಶಕುಂತಲ (ದಿ.)
ವತ್ಸಲಾ (ದಿ.)
ಶ್ರೀಪಾದ
+ ಕುಂಕುಮಾ
ಶ್ರೀವಲ್ಲಭ (ಗದಗ)
ದಿಗಂಬರ (ಪತ್ರಕರ್ತ)
ನರಹರಿ (ಲಕ್ಷ್ಮೇಶ್ವರ)
ರತ್ನಾಕರ
+ ರೇಣುಕಾ
ರುಚಿಕ
ವಸುಧಾ
+ ಕೃಷ್ಣ ಕುಲಕರ್ಣಿ
ಪರಿಮಳಾ (ಗಾಯಕಿ)
ಸದಾಶಿವ (ಅಣ್ಣಯ್ಯ)
+ ಮಿತ್ರಾ ಶಾಂತಕುಮಾರ
ವಿಶ್ವನಾಥ
ಪ್ರಕಾಶ
+ ರಜನೀ ಭಟ್ಟ, ಕಿರೆಕ್ಕೆ (ಉ. ಕ.)
ಭೂಮಿಕಾ (೨೦೦೦)

ಅನುಬಂಧ - ೧

ಗರುಡ ಶ್ರೀಪಾದರಾಯರಿಗೆ ಲಭಿಸಿದ ಪ್ರಶಸ್ತಿ, ಪುರಸ್ಕಾರಗಳು

- ಗೌರವ ಪ್ರಶಸ್ತಿ ೧೯೮೫ : ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು
- ಎರಡು ವರ್ಷಗಳ ಫೆಲೋಶಿಪ್ (೧೯೯೮-೨೦೦೧) :ಕೇಂದ್ರ ಸರಕಾರ (ನವದೆಹಲಿ),

  ದ.ಮಾ.ಸಂ.ಅ. ಸಚಿವಾಲಯದ "ಸಂಸ್ಕೃತಿ ಇಲಾಖೆ"ಯಿಂದ.
- "ಕಲಾಭಾಸ್ಕರ" ಗದಗ ರೋಟರಿ ಕ್ಲಬ್‌ದಿಂದ ಬಿರುದು, ಸನ್ಮಾನ : ೧೯೯೧
- "ಕಲಾ ನಿಪುಣ" ಗಂಗಾವತಿಯ ನಾಟ್ಯ ಪರಿಷತ್‌ನಲ್ಲಿ ಬಿರುದು : ೧೯೮೮
- "ಬಾಲ ಅಭಿನಯ ಕೇಸರಿ" : ಬಿರುದು ಕ.ನಾಟ್ಯ ಪರಿಷತ್ ನವರಿಂದ ೧೯೩೮
- "ರಂಗತೋರಣ' (ಧಾರವಾಡ)ದವರಿಂದ ಪುರಸ್ಕಾರ : ೧೯೯೮
- ಬೆಳಗಾವಿಯಲ್ಲಿ ನಡೆದ "ಕೊಣ್ಣೂರು ಕಂಪನಿ ಶತಮಾನೋತ್ಸವ ಸಮಾರಂಭ"ದಲ್ಲಿ ಸನ್ಮಾನ : ೨೦೦೧

**ಅನುಬಂಧ - ೩**

## ಸಾಹಿತ್ಯ ರಚನೆ

- 'ಚಿದಂಬರ ಮಹಿಮೆ' (ಒಂದಂಕದ ನಾಟಕ) : ೧೯೭೪
- 'ಹರಿಮಾಯಾ' (ಪೂರ್ಣಾವಧಿ ನಾಟಕ) : ೧೯೮೩ : ಪ್ರಕಟಿತ ಕೃತಿ
- 'ಭಕ್ತ ಚೋಖಾ ಮೇಳ್' (ಪೂರ್ಣಾವಧಿ ನಾಟಕ ) : ೧೯೮೨
- "ಮೋಜಿನ ನಾಟಕ", "ಪಂಚನಾಮೆ" ಹಾಗೂ "ಭವಿಷ್ಯವಾಣಿ" (ಮೂರು -ಒಂದಂಕಿನ ನಾಟಕಗಳು) : ೧೯೮೫.
- 'ಮೈಲಾರ ಮಾರ್ತಾಂಡ ಮಹಿಮೆ' (ಪೂರ್ಣಾವಧಿ ನಾಟಕ) : ೧೯೯೩
- 'ಕುಂದರನಾಡ ಕಲಿ' (ಪೂರ್ಣಾವಧಿ ನಾಟಕ) : ೧೯೯೪

- ಬಾನುಲಿ ರೂಪಕಗಳು : ಚವತೀ ಚಂದ್ರ, ಮಾಯಾ ಬಜಾರ್, ಪಾದುಕಾ ಪಟ್ಟಾಭಿಷೇಕ, ಭಗವಾನ ಏಸುಕ್ರಿಸ್ತ, ಶ್ರೀಕೃಷ್ಣ ಸುದಾಮ, ಸತ್ಯ ಸಂಕಲ್ಪ

**ಅನುಬಂಧ - ೪**

## ನಿರ್ದೇಶಿಸಿದ ನಾಟಕಗಳು

**(ಹವ್ಯಾಸಿ ಕಲಾವಿದರಿಗಾಗಿ)**

- ವಿದ್ಯಾದಾನ ಸಮಿತಿ ಪ್ರೌಢ ಶಾಲೆಯ ವಿದ್ಯಾರ್ಥಿಗಳಿಗಾಗಿ ನೃತ್ಯ ರೂಪಕಗಳು :

  ೧. ಬೇಟೆಗಾರ, ೨. ಋತುಗಾನ, ೩. ಸುಗ್ಗಿ ಕುಣಿತ (ಸಾಹಿತ್ಯ ಸಹಾಯ : ಕೀರ್ತಿನಾಥ ಕುರ್ತಕೋಟಿ) ೧೯೫೨-೫೪

- ಜಾಗೃತ ರಾಷ್ಟ್ರ (ತಿರುಗುಪ್ಪ) (ರ. ಕಲ್ಲೂರ ಕೃಷ್ಣಕುಮಾರ) ೧೯೫೪-೫೫ ಹಾಗೂ ೧೯೮೨
- ಜೈ ಸಿದ್ನಾಯ್ಕ (ರ. ಚಂ. ಕುಂಬಾರ) ೧೯೮೭-೮೮
- ಚೋಖಾ ಮೇಳ (೧೯೮೨): ಚಿದಂಬರ ಮಹಿಮೆ (೧೯೮೬)
- ಸ್ವಾತಂತ್ರ್ಯ ರಂಗ ಸಂಗ್ರಾಮ : ಟಿ. ವಿ. ರೂಪಕ : ೧೯೯೭

**ಅನುಬಂಧ - ೫**

## ಅಭಿನಯ ವೃತ್ತಿಯಲ್ಲಿದ್ದ ಇತರ ಕಂಪನಿ ಅಥವಾ ಸಂಸ್ಥೆಗಳು

- ಟೋಲ್ ಗೇಟ್ ಬಸವೇಶ್ವರ ನಾಟಕ ಮಂಡಳಿ, ಹರಪನಹಳ್ಳಿ : ೧೯೪೧-೪೨
- ಬನಶಂಕರೀ ನಾಟ್ಯ ಸಂಘ, ಇಳಕಲ್ಲು
- ಕುಮಾರ ವಿಜಯ ನಾಟ್ಯ ಸಂಘ, ಚಿತ್ತರಗಿ : ೧೯೪೮
- ಜಯ ಕರ್ನಾಟಕ ನಾಟಕ ಸಂಘ, ಸಿದ್ದಾಪುರ
- ಕಲಾ ವೈಭವ ನಾಟ್ಯ ಸಂಘ, ಬೆಳಗಾವಿ
- ಲಲಿತಕಲಾ ನಾಟಕ ಮಂಡಳಿ, ಬಳ್ಳಾರಿ

- ಗಜಾನನ ನಾಟಕ ಮಂಡಳಿ, ಜಮಖಂಡಿ : ೧೯೭೪-೭೧

* * * *

- ಕಲಾ ಸೇವಕ ಮಂಡಳ (ಹವ್ಯಾಸೀ), ಗದಗ
- ಅಭಿನಯ ರಂಗ, ಗದಗ
- ದತ್ತಾತ್ರೇಯ ನಾಟಕ ಮಂಡಳಿ (ಹವ್ಯಾಸಿ), ಗದಗ

**ಅನುಬಂಧ - ೬**

## ಹವ್ಯಾಸೀ ನಾಟ್ಯ ಸಾಧನೆಗಳು

೧. ಗದಗಿನ 'ವಿದ್ಯಾದಾನ ಸಮಿತಿ' ಶಾಲೆಯಲ್ಲಿ ಗೌರವ ನಾಟ್ಯ ಶಿಕ್ಷಕ : ೧೯೫೧-೫೩ ಕಬಾಡಿ ವಿಠಲಸಾ ಅವರ ಸಂಗೀತ ಸಂಯೋಜನೆ ಮತ್ತು ಶಿಕ್ಷಕರಾಗಿದ್ದ ಕೀರ್ತಿನಾಥ ಕುರ್ತಕೋಟಿಯವರು ಬರೆದಿದ್ದ ಎರಡು ಗೀತ ರೂಪಕಗಳ ನಿರ್ಮಾಣ.

೧) ಬೇಟೆಗಾರ ನೃತ್ಯ ೨) ಋತುಗಾನ : ಸುಗ್ಗಿ ಕುಣಿತ, ಕಥಕ್ ಮತ್ತು ಭರತ ನೃತ್ಯಗಳ ಮಿಶ್ರಣದ ೫ ತಾಳಗಳಲ್ಲಿ ಆಡಿದ ನೃತ್ಯ ರೂಪಕಗಳು.

೨. 'ಕಲಾ ಸೇವಕ ಮಂಡಳ' ಸ್ಥಾಪಿಸಿ, ಕೃಷ್ಣ ಕುಮಾರ ಕಲ್ಲೂರರ "ಜಾಗೃತ ರಾಷ್ಟ್ರ' (ತಿರುಗುಪ್ಪ) ನಾಟಕದ ನಿರ್ದೇಶನ ಮತ್ತು ನಟನೆ : ೧೯೫೩ ರಲ್ಲಿ

೩. 'ಉಗ್ರ ಕಲ್ಯಾಣ' ನಾಟಕದಲ್ಲಿ ಕಾಲೀಚರಣ ದಾಸನ ಪಾತ್ರ ೧೯೫೩. ದೆಹಲಿಯ ಯುವಜನ ಮೇಳಕ್ಕೆ ಒಯ್ದ ನಾಟಕ. ಸದಾಶಿವರಾಯರು ಪ್ರಬೋಧಾನಂದ(ಗುರು)ನ ಪಾತ್ರದಲ್ಲಿದ್ದರು. ಇದೇ ಅವರ ಅಭಿನಯದ ಕೊನೆಯ ನಾಟಕ.

೪. ಗದಗ 'ಅಭಿನಯ ರಂಗ' ಹವ್ಯಾಸೀ ಕಲಾ ಕೂಟದ ನಾಲ್ಕು ನಾಟಕಗಳಲ್ಲಿ (ನಿರ್ದೇಶನ ಜಯತೀರ್ಥ ಜೋಶಿ) :

೧. 'ಇದು ಬರಿ ನಾಟಕ' : (ನಿ. ಮಾಧವ ಕುಲಕರ್ಣಿ, ೧೯೭೭)

೨. 'ಕದಡಿದ ನೀರು' : ಅಪ್ಪನ ಪಾತ್ರ, ೧೯೭೮

೩. 'ಅಂಧಯುಗ' : ಧೃತರಾಷ್ಟ್ರನ ಪಾತ್ರ. ೧೯೭೯

೪. 'ಈಡಿಪಸ್' : ಟೈರೀಸಿಯಸ್ ಪಾತ್ರ. ೧೯೮೦

೫. ದತ್ತಾತ್ರೇಯ ನಾಟ್ಯ ಸಂಘಕ್ಕಾಗಿ ನಿರ್ದೇಶಿಸಿ, ಆಡಿದ ನಾಟಕಗಳು : ಭಕ್ತ ಚೋಖಾಮೇಳ, ಕೊಡೆಗಳು, ಜೈ ಸಿದ್ನಾಯಕ (೧೯೮೭), ರಂಗ ಸಂಗ್ರಾಮ (ಟಿ.ವಿ.ಗಾಗಿ).

೬. 'ಬಣ್ಣದ ವೇಷ' : ಟಿ. ವಿ. ಫಿಲ್ಮ್‌ನಲ್ಲಿ ಭಾಗವತನ ಪಾತ್ರ (೧೯೮೮ : ಗಿರೀಶ ಕಾಸರವಳ್ಳಿ ನಿರ್ದೇಶನ)

**ಅನುಬಂಧ - ೭**

## ಗ್ರಂಥ ಋಣ


೧. ವೃತ್ತಿ ರಂಗದರ್ಶನ (೧೯೯೩) : ಸಂ. ಎಚ್.ಕೆ.ರಂಗನಾಥ, ಕ.ಸಾ.ಪ., ಬೆಂಗಳೂರು


೨. ಗರೂಡ ಸದಾಶಿವರಾಯರು (೧೯೭೦) : 'ಎನ್ಕೆ, ಸಂಗೀತ-ನಾಟಕ ಅಕಾಡಮಿ, ಬೆಂಗಳೂರು

೩. ವೃತ್ತಿರಂಗಭೂಮಿಯ ಸ್ವರೂಪ (ಪಿಎಚ್.ಡಿ. ಪ್ರಬಂಧ, ಅಪ್ರಕಟಿತ) : ಕನ್ನಡ ವಿಶ್ವವಿದ್ಯಾಲಯ, ಹಂಪಿ : ಪ್ರಕಾಶ ಗರೂಡ, ಧಾರವಾಡ (೧೯೯೮)

೪. ಕನ್ನಡ ನಾಟಕಗಳಲ್ಲಿ ಸ್ವಾತಂತ್ರ್ಯ ಹೋರಾಟ, ಕ. ವಿ. ಹಂಪಿ (೧೯೯೯) :




ಗರುಡ ದಂಪತಿಗಳು ' ಶ್ರೀಪಾದರಾವ - ಕುಂಕುಮಾ '



ತಂದೆ ಶ್ರೀ ಗರೂಡ ಸದಾಶಿವರಾಯರು ' ಪ್ರಬೋಧಾನಂದ ' ರಾಗಿದ್ದಾಗ (೧೯೫೭)



ಶ್ರೀಪಾದರಾವ ಗರೂಡ





ಆರು ದಶಕಗಳಿಂದ ಆಪ್ತ ರಂಗಮಿತ್ರ ಹಾಗೂ ಹಿತೈಷಿ
ಏಣಗಿ ಬಾಳಪ್ಪ ಜತೆ ಶ್ರೀಪಾದರಾಯರು



' ಅಂಧಯುಗ '(೧೯೭೯)ದ ' ಧೃತರಾಷ್ಟ್ರ ' ಪಾತ್ರ (ಮಧ್ಯದಲ್ಲಿ)




' ಚೋಖಾಮೇಳ ' ನಾಟಕದಲ್ಲಿ ಶಾಸ್ತ್ರಿಯಾಗಿ ಶ್ರೀಪಾದರಾವ ಗರೂಡ



' ಎಚ್ಚಮನಾಯ್ಕ ' ನಾಟಕದಲ್ಲಿ ಜಗದೇವನಾಗಿ ಗರೂಡ ಶ್ರೀಪಾದರಾವ



' ಶ್ರೀರಾಮ ಪಾದುಕಾ ಪಟ್ಟಾಭಿಷೇಕ ' ನಾಟಕದಲ್ಲಿ
ಕಾರಾಗೃಹ ಕಾವಲುಗಾರನ ಪಾತ್ರದಲ್ಲಿ ಶ್ರೀಪಾದರಾವ್



' ಅಭಿನಯ ರಂಗ ' ದ ' ಕದಡಿದ ನೀರು ' ೧೯೭೮
ಜಯತೀರ್ಥ ಜೋಶಿ (ಮಗ), ಹಾಗೂ ಶ್ರೀಪಾದರಾವ (ಅಪ್ಪ)



# ಕರ್ನಾಟಕ ನಾಟಕ ಅಕಾಡೆಮಿ

## ಅಧ್ಯಕ್ಷರು ಮತ್ತು ಸದಸ್ಯರು

೧. ಶ್ರೀ ಸಿ. ಜಿ. ಕೃಷ್ಣಸ್ವಾಮಿ, ಬೆಂಗಳೂರು, ಅಧ್ಯಕ್ಷರು

೨. ಪ್ರೊ. ಸಿದ್ಧಲಿಂಗ ಪಟ್ಟಣಶೆಟ್ಟಿ, ಧಾರವಾಡ

೩. ಶ್ರೀ ಚೆನ್ನವೀರ ಝುಳಕಿ, ಬಿಜಾಪುರ

೪. ಶ್ರೀ ಪಿ. ಮುನಿರೆಡ್ಡಿ, ಮದ್ದೇರಿ

೫. ಶ್ರೀಮತಿ ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ

೬. ಶ್ರೀ ಶಿವರಾಂ, ಮಂಡ್ಯ

೭. ಶ್ರೀ ಸಿ. ಎಂ. ನರಸಿಂಹಮೂರ್ತಿ, ಚಾಮರಾಜನಗರ

೮. ಶ್ರೀ ಶಂಕ್ರಯ್ಯ ಘಂಟಿ, ಗುಲ್ಬರ್ಗಾ

೯. ಶ್ರೀ ಎಸ್. ವಿ. ಪಾಟೀಲ, ಗುಂಡೂರು

೧೦. ಶ್ರೀಮತಿ ವಿಶ್ವೇಶ್ವರಿ ಹಿರೇಮಠ, ಧಾರವಾಡ

೧೧. ಶ್ರೀ ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ

೧೨. ಶ್ರೀ ಹೆಚ್. ಎಂ. ಮಯಾಬ್ರಹ್ಮಾಚಾರ್, ಬೆಂಗಳೂರು

೧೩.: ಶ್ರೀ ಕೆ. ವಿ. ನಾಗರಾಜಮೂರ್ತಿ, ಬೆಂಗಳೂರು

೧೪. ಶ್ರೀ ಕಾಸರಗೋಡು ಚಿನ್ನಾ, ಕಾಸರಗೋಡು

೧೫. ಶ್ರೀ ಟಿ. ರಘು, ಬೆಂಗಳೂರು

೧೬. ಶ್ರೀ ಎಂ. ಸಂಪಂಗಿ, ಬೆಂಗಳೂರು

೧೭. ಶ್ರೀ ಎಚ್. ಎಸ್. ನೀಲಕಂಠ, ಬೆಂಗಳೂರು

೧೮. ಶ್ರೀಮತಿ ಎಸ್. ಮಾಲತಿ, ಸಾಗರ

೧೯. ಶ್ರೀ ಸಿ. ಕೆ. ಗುಂಡಣ್ಣ, ಬೆಂಗಳೂರು

೨೦. ಶ್ರೀಮತಿ ಪಂಕಜ ರವಿಶಂಕರ್, ಬೆಂಗಳೂರು

೨೧. ಶ್ರೀ ಕಾಗೋಡು ಅಣ್ಣಪ್ಪ, ಸಾಗರ

೨೨. ಶ್ರೀ ಎಚ್. ಎಸ್. ಉಮೇಶ್, ಮೈಸೂರು

೨೩. ಶ್ರೀ ಮಾ. ನರಸಿಂಹಮೂರ್ತಿ, ಬೆಂಗಳೂರು

೨೪. ಶ್ರೀ ಐ. ಕೆ. ಬೊಳುವಾರ್, ಪುತ್ತೂರು

೨೫. ಶ್ರೀ ಹೂಲಿಶೇಖರ್, ಅಂಬಿಕಾನಗರ

೨೬. ಶ್ರೀ ಬಿ. ಟಿ. ಮುನಿರಾಜಯ್ಯ, ರಿಜಿಸ್ಟ್ರಾರ್

೨೭. ಆರ್. ಎಸ್. ದಳವಾಯಿ, ಅರ್ಥ ಸದಸ್ಯರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ